ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 20 ಶುಕ್ರವಾರ 2023

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 273 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ನಾಳೆ ಮ್ಯಾಜಿಕ್ ಶೋ, ಸಂಗೀತ-ನೃತ್ಯ ಪ್ರದರ್ಶನ



ಮೈಸೂರು,ಜ.19(ಪಿಎಂ)- ಜಿಲ್ಲೆಯ ಗ್ರಾಮಾಂತರ ಪ್ರದೇಶದ ಸರ್ಕಾರಿ ಶಾಲೆಗಳಿಗೆ ಮೂಲಸೌಲಭ್ಯ ಕಲ್ಪಿಸಲು ಹಾಗೂ ಅಲ್ಲಿನ ಮಕ್ಕಳ ಶಿಕ್ಷಣಕ್ಕೆ ಉತ್ತೇಜನಕ್ಕಾಗಿ ದೇಣಿಗೆ ಸಂಗ್ರಹಿಸಲು ರೋಟರಿ ಕ್ಲಬ್ ಆಫ್ ಮೈಸೂರು ರಾಯಲ್ ವತಿಯಿಂದ ಜ.21ರಂದು 'ಇಂಪು-ಕಂಪು-ತಂಪು' ಶೀರ್ಷಿಕೆಯಡಿ ಮ್ಯಾಜಿಕ್ ಶೋ, ಸಂಗೀತ-ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಪ್ರೊ.ಧನಂಜಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ 'ಗುಣಮಟ್ಟದ ಜೀವನ' ಕುರಿತು ಮಾತನಾಡಲಿದ್ದಾರೆ ಎಂದು ಹೇಳಿದರು.

ಮೈಸೂರು ಸಂಸ್ಥಾನದ ಐತಿಹಾಸಿಕ ಹಿನ್ನೆಲೆ ಕುರಿತು ಇತಿಹಾಸಕಾರ ಧರ್ಮೇಂದ್ರ ಕುಮಾರ್ ಮಾತನಾಡಲಿದ್ದಾರೆ. ಅಲ್ಲದೆ, ರಾಜ್‌ಭಟ್ ಅವರಿಂದ ಮ್ಯಾಜಿಕ್ ಶೋ ಇರಲಿದೆ. ಶಾರದಾ ಸಂಗೀತ ಕಲಾಕೇಂದ್ರದ ತಂಡದಿಂದ ಸಂಗೀತ ಕಾರ್ಯಕ್ರಮ ಹಾಗೂ ತ್ರಿವೇಣಿ ಡ್ಯಾನ್ಸ್ ಗ್ರೂಪ್‌ನಿಂದ ಆಕರ್ಷಕ ನೃತ್ಯ ಪ್ರದರ್ಶನ ನಡೆಯಲಿದೆ. ಪ್ರೇಕ್ಷಕರು 100 ಅಥವಾ 200 ರೂ. ಹಾಗೂ ಅದಕ್ಕೂ ಮೇಲ್ಪಟ್ಟು ದೇಣಿಗೆ ನೀಡಬಹುದು ಎಂದರು.

ಕ್ಲಬ್‌ನ ಸಮುದಾಯ ಸೇವಾ ನಿರ್ದೇಶಕ ಎಸ್.ಎನ್.ರಾಘವೇಂದ್ರ ಮಾತನಾಡಿ, ನಮ್ಮ ಕ್ಲಬ್ ಮೈಸೂರು ಗ್ರಾಮಾಂತರ ಪ್ರದೇಶಗಳಲ್ಲಿ ವಿವಿಧ ಸೇವಾ ಕಾರ್ಯಗಳನ್ನು ನಡೆಸುತ್ತಿದೆ. ಹೆಚ್‌ಡಿ ಕೋಟೆ ತಾಲೂಕು ಹಂಪಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೂಲಸೌಲಭ್ಯ ಕಲ್ಪಿಸಲು ನೆರವಾಗಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ ಮಾಡಿದೆ ಎಂದರು. ಜೊತೆಗೆ ಈ ಭಾಗದ 5 ಅಂಗನವಾಡಿ ಕೇಂದ್ರಗಳಿಗೂ ಅಗತ್ಯ ಮೂಲಸೌಲಭ್ಯ ಕಲ್ಪಿಸಲಾಗಿದೆ. ಇದೀಗ ಸದರಿ ಕಾರ್ಯಕ್ರಮದ ಮೂಲಕ ಅಂದಾಜು 2 ಲಕ್ಷ ರೂ. ಸಂಗ್ರಹಿಸಿ ಸೇವಾ ಕಾರ್ಯಕ್ಕೆ ವಿನಿಯೋಗಿಸಲು ಯೋಜನೆ ರೂಪಿಸಲಾಗಿದೆ ಎಂದರು. ಕ್ಲಬ್ ಕಾರ್ಯದರ್ಶಿ ಕೆ.ಹನುಮಂತರಾವ್, ರೋಟರಿ ಡಿಸ್ಟ್ರಿಕ್ಟ್ 3181ರ ವಲಯ 8ರ ವಲಯ ಸೇನಾನಿ ವಿಜಯ್‌ಆನಂದ್ ಗೋಷ್ಠಿಯಲ್ಲಿದ್ದರು.

ಪಿಂಚಣಿ ಪ್ರಮಾಣ ಪತ್ರ ವಿತರಣೆ



ಮೈಸೂರು ನಗರಪಾಲಿಕೆ ಸದಸ್ಯೆ ಶ್ರೀಮತಿ ಭಾಗ್ಯ ಮಾದೇಶ್ ಅವರ ಹುಟ್ಟುಹಬ್ಬದ ಪ್ರಯುಕ್ತ ಪಡುವಾರಹಳ್ಳಿ ಗಣಪತಿ ದೇವಸ್ಥಾನದ ಬಳಿ ಭಾಗ್ಯ ಮಾದೇಶ್ ಅವರ ಅಭಿಮಾನಿಗಳು ಹಿರಿಯ ನಾಗರಿಕರಿಗೆ ಪಿಂಚಣಿ ಪ್ರಮಾಣ ಪತ್ರ ವಿತರಿಸಿದರು. ಈ ವೇಳೆ ನಳಿನಿ ಮಂಜಣ್ಣ, ರಾಜಣ್ಣ, ಪಡುವಾರಹಳ್ಳಿ ಪಾಪಣ್ಣ, ಮದನ್ ಮಾದೇಶ, ರಮೇಶ್, ಕೃಷ್ಣ, ಸುನಿಲ್, ಸತೀಶ್, ವೆಂಕಟೇಶ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಇಂದಿನಿಂದ ಕಾವಾ ಮೇಳ ಆರಂಭ

ಮೈಸೂರು, ಜ.19- ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ವತಿಯಿಂದ ಜ.20ರಂದು ಬೆಳಗ್ಗೆ 10.30ಕ್ಕೆ ನೂತನ ಕಟ್ಟಡಗಳ ಉದ್ಘಾಟನೆ ಹಾಗೂ 2022-23ನೇ ಶೈಕ್ಷಣಿಕ ಸಾಲಿನ ಕಾವಾ ಮೇಳವನ್ನು ಜ.20ರಿಂದ 22ರವರೆಗೆ ಕಾವಾ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಇಂಧನ ಸಚಿವ ವಿ.ಸುನೀಲ್‌ಕುಮಾರ್ ನೂತನ ಕಟ್ಟಡಗಳ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮೇಯರ್, ಸಂಸದರು, ಶಾಸಕರು ಹಾಗೂ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು. ಮೇಳದಲ್ಲಿ ವಿದ್ಯಾರ್ಥಿಗಳು ವಿವಿಧ ಮಾಧ್ಯಮಗಳಿಂದ ರಚಿಸಲ್ಪಟ್ಟ ಕಲಾಕೃತಿಗಳನ್ನು ಪ್ರದರ್ಶಿಸಲಿದ್ದು, ದೃಶ್ಯಕಲಾ ಆಸಕ್ತ ಮಕ್ಕಳ ಪ್ರತಿಭೆಯ ಪ್ರೋತ್ಸಾಹಕ್ಕಾಗಿ ಚಿತ್ರಕಲೆ ಮತ್ತು ಮಣ್ಣಿನ ಶಿಲ್ಪ ರಚನಾ ಸ್ಪರ್ಧೆ ಆಯೋಜಿಸಲಾಗಿದೆ. ಪ್ರತಿದಿನ ಕಾವಾ ವಿದ್ಯಾರ್ಥಿಗಳು ಮತ್ತು ಸಂಯೋಜಿತ ಸಂಸ್ಥೆಗಳಿಂದ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನಿಧನ

ಶ್ರೀಮತಿ ಯಶೋಧಮ್ಮ



ಮೈಸೂರಿನ ರಾಜೇಂದ್ರನಗರ ನಿವಾಸಿ ಶ್ರೀಮತಿ ಯಶೋಧಮ್ಮ (87) ಗುರುವಾರ ಮಧ್ಯಾಹ್ನ ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ (ಜ.20) ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರ ಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹೆಚ್ಚಿನ ವಿವರಗಳಿಗೆ ಮೊ.ನಂ. 8453448464 ಸಂಪರ್ಕಿಸಬಹುದು.

ನನ್ನ ಮತ ಬಿಲ್‌ಕುಲ್ ಮಾರಾಟಕ್ಕಿಲ್ಲ...

ಚುನಾವಣಾ ವ್ಯವಸ್ಥೆ ಸುಧಾರಣೆ ಅಭಿಯಾನದಡಿ ಯುವ ಸಮೂಹಕ್ಕೆ ಕರ್ನಾಟಕ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ ಪ್ರತಿಜ್ಞಾವಿಧಿ ಬೋಧನೆ





ಮೈಸೂರು, ಜ.19(ಆರ್‌ಕೆ)- ಚುನಾವಣಾ ವ್ಯವಸ್ಥೆ ಸುಧಾರಣೆಗಾಗಿ 'ನನ್ನ ಮತ ಮಾರಾಟಕ್ಕಿಲ್ಲ' ಅಭಿಯಾನ ಆರಂಭಿಸಿ ಎಂದು ಕರ್ನಾಟಕ ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ ಇಂದಿಲ್ಲಿ ಯುವ ಸಮೂಹಕ್ಕೆ ಕರೆ ನೀಡಿದ್ದಾರೆ.

ಮೈಸೂರು ಜಿಲ್ಲಾಡಳಿತ ಮತ್ತು ಮೈಸೂರು ನಗರಪಾಲಿಕೆ ವತಿಯಿಂದ ಕಲಾಮಂದಿರದಲ್ಲಿ ಏರ್ಪಡಿಸಿದ್ದ 'ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಕುರಿತ ಸಂವಾದ ಕಾರ್ಯಕ್ರಮ ಉದ್ಘಾಟಿಸಿದ ಬಳಿಕ ನೆರೆದಿದ್ದ ಕಾಲೇಜು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಸಾರ್ವಜನಿಕ ಚುನಾವಣೆ ಬರುತ್ತಿದೆ. ಪಾರದರ್ಶಕ ಮತ್ತು ಪರಿಶುದ್ಧ ಮತದಾನವಾಗಬೇಕಾದರೆ ಯುವ ಸಮೂಹವು 'ನನ್ನ ಮತ ಮಾರಾಟಕ್ಕಿಲ್ಲ' ಅಭಿಯಾನ ನಡೆಸುವ ಮೂಲಕ ಚುನಾವಣಾ ವ್ಯವಸ್ಥೆಗೆ ಸುಧಾರಣೆ ತರಬೇಕು ಎಂದ ಅವರು, ಜಾತಿ, ಹಣ, ತೋಳ್ಬಲ, ಹೆಂಡ ಆಮಿಷಗಳಿಗೆ ಕಡಿವಾಣ ಹಾಕಬೇಕೆಂದು ಸಲಹೆ ನೀಡಿದರು.

ಹಿಂದಿನಿಂದಲೂ ಚುನಾವಣಾ ಸುಧಾರಣೆಗೆ ನಿರಂತರ ಪ್ರಯತ್ನ ನಡೆಯುತ್ತಲೇ ಇದೆ. ಒಂದೇ ದಿನ ಒಬ್ಬನೇ ವ್ಯಕ್ತಿ ಮೂರು ಪಕ್ಷ ಬದಲಾಯಿಸಿದ್ದ ಉದಾಹರಣೆ ಇದೆ. ಅಂತಹ ಬೆಳವಣಿಗೆಗೆ ತಪ್ಪಿಸಲೆಂದೇ ಪರಿಚ್ಛೇದ 10 ಅನ್ನು ಬಲಪಡಿಸಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಯಿತು. ಬ್ಯಾಲೆಟ್ ಪೇಪರ್ ಮೇಲೆ ಮುದ್ರೆ ಒತ್ತುವ ಪದ್ಧತಿಗೆ ತಿಲಾಂಜಲಿ ಇಟ್ಟು ವಿದ್ಯುನ್ಮಾನ (ಇವಿಎಂ) ಪರಿಚಯಿಸಲಾಯಿತು. ನೋಟಾಕ್ಕೆ ಅವಕಾಶ, ಆಧಾರ್ ಕಾರ್ಡ್‌ಗೆ ಗುರುತಿನ ಚೀಟಿ ಲಿಂಕ್ ಮಾಡಿಸಲಾಗುತ್ತಿದೆ ಎಂದೂ ತಿಳಿಸಿದರು.

ಯುವಕರು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರರಾಗಬೇಕಿದೆ. ಹಣಕ್ಕಾಗಿ ಮತ ಮಾರಾಟವಾಗಬಾರದು. ಹಿರಿಯರು, ನಿವೃತ್ತರು, ರಾಜಕೀಯ ಪಕ್ಷದವರೂ ಸಹ ಜವಾಬ್ದಾರಿಯಿಂದ ಚುನಾವಣಾ ವ್ಯವಸ್ಥೆ ಸುಧಾರಿಸಲು ಬದ್ಧರಾಗಿರಬೇಕು. ಚುನಾವಣೆಗಳು ಇಂದು ಹಣ, ಹೆಂಡ, ಜಾತಿ, ತೋಳ್ಬಲದ ಮೇಲೆ ನಡೆಯುತ್ತಿವೆ. ಅದಕ್ಕೆ ಸಂವಿಧಾನ ಬದ್ಧ ಸಂಸ್ಥೆಗಳು ಹಾಗೂ ಜನರೂ ಕಾರಣರಾಗಿರುವುದು ದುರ್ದೈವ ಎಂದರು.

ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಉತ್ಸವ. ಅದನ್ನು ಹಣ, ಹೆಂಡ, ಜಾತಿ, ಗುಂಪು ರಾಜಕಾರಣದಿಂದ ಅದರ ಪಾವಿತ್ರ್ಯತೆ ಹಾಳು ಮಾಡಲಾಗುತ್ತಿದೆ. ಅದಕ್ಕೆ ರಾಜಕಾರಣಿಗಳು, ಸಂವಿಧಾನಬದ್ಧ ಸಂಸ್ಥೆಗಳ ಜೊತೆಗೆ ಜನರೂ ಕಾರಣರಾಗಿದ್ದಾರೆ. ಚುನಾವಣೆಯಲ್ಲಿ ಮತ ಕೇಳಲು ಬರುವವರಿಗೆ ನನ್ನೂರು, ನನ್ನ ಕೇರಿಯ ರಸ್ತೆ, ನೀರು, ಚರಂಡಿ, ವಿದ್ಯುತ್ ಕೊಡಿಸಿ ಎಂದು ಕೇಳುವ ಬದಲು ನನಗೆ ವೈಯಕ್ತಿಕವಾಗಿ ಏನು ಕೊಡುತ್ತೀರಿ, ಏನು ಮಾಡುತ್ತೀರಿ ಎಂದು ಕೇಳಿದರೆ ನಮ್ಮ ನಡುವೆ ಇನ್ನೆಂತಹವರು ಆರಿಸಿ ಬರಲು ಸಾಧ್ಯ. ಬಂದ ಮೇಲೆ ಅವರಿಂದ ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಚುನಾವಣೆ ವ್ಯವಸ್ಥೆ ಸುಧಾರಣೆಯಾಗದಿದ್ದರೆ ಉತ್ತಮರು ಆಯ್ಕೆಯಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯೇ ಬುಡಮೇಲಾಗಿ ನಮ್ಮ ನಾಡು ಅಪಾಯಕ್ಕೆ ಸಿಲುಕುವ ಆತಂಕ ಎದುರಾಗುತ್ತದೆ. ಆದ್ದರಿಂದ ಮತದಾರರಲ್ಲಿ ಜಾಗೃತಿ ಮೂಡಬೇಕು. ಈ ಬಗ್ಗೆ ಒಂದು ಅಭಿಯಾನವನ್ನೇ ಮಾಡಿ ಚುನಾವಣಾ ವ್ಯವಸ್ಥೆ ಸುಧಾರಿಸಲು ಯುವಕರು ಸೇರಿದಂತೆ ಎಲ್ಲರೂ ಪ್ರಯತ್ನಿಸಬೇಕು ಎಂದು ಕಾಗೇರಿ ನುಡಿದರು.

ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ. ರೂಪಾ, ಶಾಸಕರಾದ ತನ್ವೀರ್ ಸೇಠ್, ಎಲ್.ನಾಗೇಂದ್ರ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಪಾಲಿಕೆ ಆಯುಕ್ತ ಡಾ.ಜಿ.ಲಕ್ಷ್ಮೀಕಾಂತ ರೆಡ್ಡಿ, ಉಪಆಯುಕ್ತೆ ಎಂ.ಕೆ.ಸವಿತಾ, ಚುನಾವಣಾ ತಹಸೀಲ್ದಾರ್ ರಾಮಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು. ಮಹಾಜನ, ವಿದ್ಯಾವರ್ಧಕ, ಜೆಎಸ್‌ಎಸ್, ಸೇಂಟ್ ಫಿಲೋಮಿನಾ, ಮಹಾರಾಜ, ಮಹಾರಾಣಿ, ಬನುಮಯ್ಯ, ಸೋಮಾನಿ ಸೇರಿದಂತೆ ಮೈಸೂರಿನ ಹಲವು ಪಿಯು ಮತ್ತು ಪದವಿ ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಭಾಗವಹಿಸಿ, ವಿಶ್ವೇಶ್ವರ ಹೆಗ್ಡೆ ಕಾಗೇರಿ ಅವರೊಂದಿಗೆ ಸಂವಾದ ನಡೆಸಿದರು.

ಸಾಧಕರಾದ ಸಾಲುಮರದ ತಿಮ್ಮಕ್ಕ, ಡಾ.ರಾಜ್, ಅರಸು, ಕಾಮರಾಜ್, ಬಸವಲಿಂಗಪ್ಪರಿಗೆ ಯಾವ ಡಿಗ್ರಿ ಇತ್ತು...!

ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದದಲ್ಲಿ ಕೆಲಸ ಪಡೆಯಲು ನಿಗದಿಪಡಿಸಿರುವ ವಿದ್ಯಾರ್ಹತೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೇಕಿಲ್ಲ ಎಂಬ ಪ್ರಶ್ನೆಗೆ 'ಉತ್ತಮ ಕೆಲಸ ಮಾಡುವ ಮನಸ್ಸಿರಬೇಕು, ಜೀವನಾನುಭವ ಬೇಕು. ಸಾಧನೆ ಮಾಡಿದ ಸಾಲುಮರದ ತಿಮ್ಮಕ್ಕ, ಡಾ.ರಾಜ್‌ಕುಮಾರ್, ಡಿ.ದೇವರಾಜ ಅರಸು, ಕಾಮರಾಜ್, ಬಸವಲಿಂಗಪ್ಪರಂತಹ ಹಲವರು ಯಾವ ಡಿಗ್ರಿ ಪಡೆದಿದ್ದರು?' ಎಂದು ಕಾಗೇರಿ ಪ್ರಶ್ನಿಸಿದರು. ಜೈಲು ಕೈದಿಗಳಿಗೆ ಮತದಾನದ ಹಕ್ಕು ನೀಡಬಾರದೇಕೇ ಎಂಬ ಪ್ರಶ್ನೆಗೆ, ಶಿಕ್ಷೆಗೊಳಗಾದ ಜೈಲುವಾಸಿಗಳಿಗೆ ಮತದಾನದ ಹಕ್ಕನ್ನು ನೀಡಿಲ್ಲ. ಈ ಸಂಬಂಧ ಮುಂದೆ ಚರ್ಚಿಸೋಣ ಎಂದ ವಿಧಾನಸಭಾಧ್ಯಕ್ಷರು, ಉತ್ತಮರಿಗೆ ಮಾತ್ರ ಚುನಾವಣೆಗೆ ಟಿಕೆಟ್ ನೀಡಬಹುದಲ್ಲ ಎಂಬ ಮತ್ತೊಂದು ಪ್ರಶ್ನೆಗೆ 'ಸ್ಪರ್ಧಿಸುವವರ ಪೈಕಿ ಉತ್ತಮರಿಗೇ ಮತ ಹಾಕಬಹುದಲ್ಲ' ಎಂದು ಮರು ಪ್ರಶ್ನೆ ಹಾಕಿದರು. ಭ್ರಷ್ಟಾಚಾರ ತಡೆಯಲು ಏನು ಮಾಡಿದ್ದೀರಿ ಎಂದು ವಿದ್ಯಾರ್ಥಿ ಕೇಳಿದ ಪ್ರಶ್ನೆಗೆ ಲಂಚ ಕೊಡುವುದು-ಸ್ವೀಕರಿಸುವುದೂ ತಪ್ಪು. ಹಾಗಾಗಿ ಭ್ರಷ್ಟಾಚಾರ ವಿಷಯದಲ್ಲಿ ಎಲ್ಲರೂ ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಕಾಗೇರಿ ಅವರು ನುಡಿದರು.

ರಾಜಕೀಯ ಮಾತ್ರವಲ್ಲ ಯಾವ ಕ್ಷೇತ್ರದಲ್ಲೂ ಆದರ್ಶ, ಮೌಲ್ಯಗಳು ಉಳಿದಿಲ್ಲ: ಕಾಗೇರಿ ವಿಷಾದ

ಮೈಸೂರು, ಜ.19(ಆರ್‌ಕೆ)-ಶಾಸಕಾಂಗವಷ್ಟೇ ಅಲ್ಲದೇ ಯಾವ ಕ್ಷೇತ್ರದಲ್ಲೂ ಆದರ್ಶ, ಮೌಲ್ಯಗಳು ಉಳಿದಿಲ್ಲ ಎಂದು ಕರ್ನಾಟಕ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿಷಾದ ವ್ಯಕ್ತಪಡಿಸಿದ್ದಾರೆ.

ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಜನಪ್ರತಿನಿಧಿಗಳು, ರಾಜಕಾರಣಿಗಳು ಹಾಳಾಗಿದ್ದಾರೆ ಎಂದು ನಮ್ಮ ಕಡೆ ಬೊಟ್ಟು ಮಾಡುವ ಜನರೇ ಹೆಚ್ಚಾಗಿದ್ದಾರೆ. ಅದಕ್ಕೆ ಜನ, ವ್ಯವಸ್ಥೆಯೂ ಕಾರಣ ಎಂದರು. ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾ ರಂಗವೂ ಇಂದು ತಮ್ಮ ಮೌಲ್ಯಗಳನ್ನು ಕಳೆದುಕೊಂಡಿರುವುದು ವ್ಯವಸ್ಥೆ ಹಾಳಾಗಲು ಕಾರಣ. ಅಧಿಕಾರಿಗಳ ಕಾರ್ಯವೈಖರಿ, ಜಢತ್ವ, ಭ್ರಷ್ಟಾಚಾರದಿಂದಾಗಿ ಜನರಿಗೆ ಸರ್ಕಾರದ ಸೌಲಭ್ಯಗಳು ಸಿಗುತ್ತಿಲ್ಲ. ನ್ಯಾಯಾಲಯಗಳಲ್ಲಿ ಜಡ್ಜ್‌ಮೆಂಟ್‌ಗಳಾಗುತ್ತವೆ. ಆದರೆ ನ್ಯಾಯ ಸಿಗುವುದಿಲ್ಲ ಎಂದು ನೊಂದು ನುಡಿದರು.

ಪತ್ರಿಕಾರಂಗದಲ್ಲಿನ ತಪ್ಪು ಸಂದೇಶ, ಪೇಯ್ಡ್ ಸುದ್ದಿಗಳು, ಪ್ರಶ್ನಾರ್ಥಕ ಚಿಹ್ನೆ, ಬಲ್ಲ ಮೂಲಗಳು, ಯಲ್ಲೋ ಜರ್ನಲಿಸಂನಿಂದ ವ್ಯಾಪಾರವಾಗಿರುವುದು ಗುಟ್ಟಾಗೇನೂ ಉಳಿದಿಲ್ಲ. ಯೂನಿವರ್ಸಿಟಿಗಳಲ್ಲಿ ಲಕ್ಷಾಂತರ ರೂ. ಸಂಬಳ ಪಡೆಯುವ ಶಿಕ್ಷಕರು ಹೇಗೆ ಪಾಠ ಮಾಡುತ್ತಾರೆಂಬುದೂ ಗೊತ್ತಿದೆ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ವಾಣಿಜ್ಯೀಕರಣವಾಗಿರುವುದು, ಆಸ್ಪತ್ರೆಗಳಲ್ಲಿ ರೋಗಿಗಳ ಅಂಗಾಂಗಗಳೇ ಮಾಯವಾಗುತ್ತಿರುವುದು, ಡ್ರಗ್ ಮಾಫಿಯಾದಂತಹ ವ್ಯವಸ್ಥೆ ಇರುವಾಗ ಕೇವಲ ಶಾಸಕಾಂಗವನ್ನೇ ಗುರಿಯಾಗಿಸುವುದು ಸರಿಯಲ್ಲ ಎಂದು ಕಾಗೇರಿ ನುಡಿದರು.

ಎಲ್ಲಾ ಕ್ಷೇತ್ರಗಳೂ ಹಾಳಾಗಿರುವಾಗ ಸಂವಿಧಾನಬದ್ಧ ಪ್ರಜಾಪ್ರಭುತ್ವವನ್ನು ಉಳಿಸುವುದು ನಮ್ಮ ಯುವ ಜನರ ಜವಾಬ್ದಾರಿಯಾಗಿದೆ. ಸ್ವಾತಂತ್ರ್ಯ ನಂತರ ದೇಶದಲ್ಲಿ ಸಾಧನೆಯೂ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಗೆ ರಾಜಪ್ರಭುತ್ವದ ಕೊಡುಗೆಯೂ ಇದೆ ಎಂಬುದನ್ನು ಮರೆಯಬಾರದು. ಸ್ವಾತಂತ್ರ್ಯ ಬಂದ ನಂತರ 75 ವರ್ಷಗಳಲ್ಲಿ ಸಾಧನೆಗಳೂ ಆಗಿವೆ ಎಂದರು. ರೈತರ ಪರಿಶ್ರಮದಿಂದ ಆಹಾರದಲ್ಲಿ ಸ್ವಾವಲಂಬಿಗಳಾಗಿದ್ದೇವೆ. ಸ್ವಾತಂತ್ರ್ಯಪೂರ್ವದಲ್ಲಿದ್ದ 259 ರೂ. ತಲಾದಾಯವು ಈಗ 1,12,835 ರೂ.ಗಳಿಗೇರಿದೆ. ಬಾಹ್ಯಾಕಾಶ ವಿಜ್ಞಾನದಲ್ಲಿ ಪ್ರಗತಿ, ದೇಶ ಕಾಯುವ ಯುವ ಸೈನಿಕರ ಸಾಮರ್ಥ್ಯ, ಶಿಕ್ಷಣ, ವೈದ್ಯಕೀಯ, ಆರೋಗ್ಯ, ಮಹಿಳಾ ಉದ್ಯಮಿಗಳು ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಆಗಿರುವ ಸಾಧನೆಯಿಂದ ನಾವೆಲ್ಲರೂ ಹೆಮ್ಮೆಪಡಬೇಕು. ಡಾ.ಅಂಬೇಡ್ಕರ್ ರಚಿಸಿದ ಶ್ರೇಷ್ಠ ಸಂವಿಧಾನದಿಂದಾಗಿ ಇಂದು ಸಾಮಾನ್ಯ ಮಹಿಳೆ ದೇಶದ ರಾಷ್ಟ್ರಪತಿಗಳಾದರು. ಚಹಾ ಮಾರುತ್ತಿದ್ದ ವ್ಯಕ್ತಿ ಪ್ರಧಾನಿಯಾಗಲು ಸಾಧ್ಯವಾಯಿತು ಎಂದರು.

ಇಂದು ಚೆಸ್ಕಾಂನಿಂದ ಕಾಮಗಾರಿ ಉದ್ಘಾಟನೆ-ಶಂಕುಸ್ಥಾಪನೆ

ಮೈಸೂರು, ಜ.19- ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರ ವತಿಯಿಂದ ಕವಿಪ್ರನಿನಿ ಹಾಗೂ ಚಾವಿಸನಿನಿ ವ್ಯಾಪ್ತಿಯ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭ ನಾಳೆ (ಶುಕ್ರವಾರ) ಬೆಳಗ್ಗೆ 11.30 ಗಂಟೆಗೆ ಮೈಸೂರು ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿದೆ. ಸಮಾರಂಭದ ಉದ್ಘಾಟನೆಯನ್ನು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್‌ಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶಂಕುಸ್ಥಾಪನೆ ನಡೆಸಿಕೊಡಲಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ಅದಾಲತ್

ಮೈಸೂರು,ಜ.19-ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತದ ವತಿಯಿಂದ ವಿವಿ ಮೊಹಲ್ಲಾ, ಹೂಟಗಳ್ಳಿ, ಕುವೆಂಪುನಗರ ಮತ್ತು ರಾಮಕೃಷ್ಣನಗರ, ಜ್ಯೋತಿನಗರ, ನ.ರಾ ಮೊಹಲ್ಲಾ ಚಾಮುಂಡಿಪುರಂ ಹಾಗೂ ವರುಣಾ ಉಪವಿಭಾಗಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಅವರ ಅಧ್ಯಕ್ಷತೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆ ಹಾಗೂ ಗ್ರಾಹಕರಿಗೆ ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಲು ಜ.21ರಂದು ಬೆಳಗ್ಗೆ 11ಕ್ಕೆ ವಿದ್ಯುತ್ ಅದಾಲತ್ ಹಮ್ಮಿಕೊಳ್ಳಲಾಗಿದೆ. ಉಪವಿಭಾಗ ಕಚೇರಿಯಲ್ಲಿ, ಗ್ರಾಮಗಳಲ್ಲಿ ನಡೆಯುವ ವಿದ್ಯುತ್ ಅದಾಲತ್ ಸಭೆಗೆ ಭಾಗವಹಿಸಿ ವಿದ್ಯುತ್ ಇಲಾಖೆಗೆ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ, ಲಿಖಿತ ಅರ್ಜಿಗಳನ್ನು ಸಲ್ಲಿಸಿ ವಿದ್ಯುತ್ ಸಮಸ್ಯೆ ಹಾಗೂ ವಿದ್ಯುತ್ ಸುರಕ್ಷತಾ ಜಾಗೃತಿಯ ಬಗ್ಗೆ ಯಾವುದೇ ಪ್ರಶ್ನೆಗಳಿದ್ದಲ್ಲಿ ಬಗೆಹರಿಸಿಕೊಳ್ಳುವಂತೆ ಚೆಸ್ಕಾಂ ಪ್ರಕಟಣೆ ತಿಳಿಸಿದೆ.



ಮೈಸೂರು ಜಿಲ್ಲಾ ಎಪಿಎಂಸಿ ಭತ್ತ, ರಾಗಿ ಖರೀದಿ ಕೇಂದ್ರದಲ್ಲಿ ಕಳೆದ 20 ದಿನಗಳಿಂದ ನೋಂದಾಯಿತ ರೈತರಿಂದ ಬೆಳೆ ಖರೀದಿ ಪ್ರಕ್ರಿಯೆ ಪ್ರಾರಂಭಿಸಿಲ್ಲ. ಇದರಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದು ರೈತರಿಗೆ ಅನುಕೂಲ ಮಾಡಿಕೊಡುವಂತೆ ಒತ್ತಾಯಿಸಿ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಎಡಿಸಿ ಲೋಕನಾಥ್ ಅವರಿಗೆ ಮನವಿ ಸಲ್ಲಿಸಿದರು. ಸುನೀಲ್ ಸಿ.ಜೆಟ್ಟಿಹುಂಡಿ, ಪಿ.ಮಹದೇವ, ರಾಚಪ್ಪ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ರಾಮಕೃಷ್ಣ ವಿದ್ಯಾಕೇಂದ್ರ:** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀಮತ್ ಸ್ವಾಮಿ ಮಹಾಮೇದಾನಂದ ಜೀ ಮಹಾರಾಜ್, ಅಧ್ಯಕ್ಷತೆ: ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಮುಖ್ಯ ಅತಿಥಿಗಳು: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀ ಶಾರದಾ ಸಭಾಂಗಣ, ರಾಮಕೃಷ್ಣ ವಿದ್ಯಾಕೇಂದ್ರ, ರಾಮಕೃಷ್ಣನಗರ, ಬೆಳಗ್ಗೆ 10ರಿಂದ.

■ **ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು:** ಕಾವಾ ಮೇಳ-2023 ಹಾಗೂ ನೂತನ ಕಟ್ಟಡ ಉದ್ಘಾಟನೆ, ಕಾವಾ ಮೇಳ ಉದ್ಘಾಟನೆ: ಸಚಿವ ಎಸ್.ಟಿ.ಸೋಮಶೇಖರ್, ನೂತನ ಕಟ್ಟಡ ಉದ್ಘಾಟನೆ: ಸಚಿವ ವಿ.ಸುನಿಲ್‌ಕುಮಾರ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಆವರಣ, ಸಿದ್ಧಾರ್ಥನಗರ, ಬೆಳಗ್ಗೆ 10.30ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್ :** ಅರಸು ಪತ್ರಿಕೆ ದಶಮಾನೋತ್ಸವ, ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಚಿದಾನಂದಗೌಡ, ಅರಸು ಚುಟುಕು ಹಿಲಾಲುಗಳು ಕೃತಿ ಕುರಿತು ಮಾತನಾಡುವವರು : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಮೈಲ್ಯಾಕ್ ಅಧ್ಯಕ್ಷ ರಘು ಆರ್.ಕೌಟಿಲ್ಯ, ಉಪಸ್ಥಿತರು: ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಅಮರ್‌ನಾಥ್ ರಾಜೇ ಅರಸ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಾರೋಪ ಸಮಾರಂಭ, ಉದ್ಘಾಟನೆ: ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ನಾಗಮಲ್ಲೇಶ್, ಅಧ್ಯಕ್ಷತೆ: ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪನ್ನಾಲಾಲ್, ಮುಖ್ಯ ಅತಿಥಿಗಳು : ಪಾಲಿಕೆ ಉಪ ಆಯುಕ್ತೆ ಎಂ.ಕೆ.ಸವಿತಾ, ಸಂಸ್ಕೃತಿ ಚಿಂತಕ ಕೃಷ್ಣಮೂರ್ತಿ ತಲಕಾಡು, ಕಾಲೇಜು ಪ್ರಾಂಶುಪಾಲರಾದ ಎಂ.ಪಿ. ನಾಗಮ್ಮ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಇಲವಾಲ-ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿ:** ಸ್ವಾಭಿಮಾನಿ ಪಡೆ ಕಾಂಗ್ರೆಸ್ ಪಕ್ಷ ಸೇರ್ಪಡೆ, ಬೃಹತ್ ಸಮಾವೇಶ, ಉಪಸ್ಥಿತರು: ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸ್ಥಳ: ಲಿಂಗದೇವರಕೊಪ್ಪಲು ಕೆಐಡಿಬಿ ಮೈದಾನ ಆವರಣ, ಬೆಳಗ್ಗೆ 10.30ಕ್ಕೆ.

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯ :** 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಸ್ವಾಮಿ ವಿವೇಕಾನಂದ ಅಧ್ಯಯನ ಪೀಠ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಸ್ವಾಮಿ ವಿವೇಕಾನಂದರ 160ನೇ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪನ್ಯಾಸಕ ರಾಜೇಶ್ ಪದ್ಮಾರ್ ಅವರಿಂದ ಯುವಜನತೆಗೆ ಸ್ವಾಮಿ ವಿವೇಕಾನಂದರ ಸಂದೇಶ ಕುರಿತು ಉಪನ್ಯಾಸ, ಉಪಸ್ಥಿತರು : ಕರಾಮುವಿ ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ: ಮೈಸೂರು ವಿವಿ ಕುಲಸಚಿವೆ ವಿ.ಆರ್. ಶೈಲಜಾ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್.ಶಿವರಾಜಪ್ಪ, ಸ್ಥಳ: ಕಾಲೇಜು ಆವರಣ, ಸಂಜೆ 4ಕ್ಕೆ.

■ **ಸೇಂಟ್ ಥಾಮಸ್ ಇನ್‌ಸ್ಟಿಟ್ಯೂಷನ್ಸ್ :** ವಸಂತೋತ್ಸವ, ವಾರ್ಷಿಕೋತ್ಸವ, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ವ್ಯವಸ್ಥಾಪಕ ಶೈಜಾ ಪಿ.ಜಾನ್, ಮುಖ್ಯ ಅತಿಥಿಗಳು: ಬಿಇಓ ರಾಮಾರಾಧ್ಯ, ಡಾ.ಸಿ.ಆರ್.ವರ್ಷ, ಸ್ಯಾಮ್ ಚೆರಿಯನ್ ಕುಂಬುಕಟ್ಟು, ಎಬ್ಬಿ ಇಪ್ಪನ್, ಗ್ರೇಸಿ ಥಾಮಸ್, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.

■ **ಗಾನಭಾರತೀ :** ತರುಣ ಭಾರತಿ ಕಾರ್ಯಕ್ರಮ, ಸಂಜೆ 6ರಿಂದ ವಿದುಷಿ ಶ್ರೇಯಾ ಕೊಳತ್ತಾಯ ಅವರಿಂದ ಗಾಯನ, ಸಂಜೆ 7.15ರಿಂದ ವಿದುಷಿ ಶ್ರುತಿ ರಂಜನಿ ಅವರಿಂದ ಗಾಯನ, ವಿದ್ವಾನ್ ಅನಿರುದ್ಧ್ ಭಾರದ್ವಾಜ್-ವಯೋಲಿನ್, ವಿದ್ವಾನ್ ವಿಕ್ರಂ ಭಾರದ್ವಾಜ್-ಮೃದಂಗ, ವಿದ್ವಾನ್ ಅಜಯ್ ಟಿ.ಎನ್.-ಘಟ, ಸ್ಥಳ: ವೀಣೆಶೇಷಣ್ಣ ಭವನ, ಕುವೆಂಪುನಗರ.

■ **ಚಿನ್ಮಯ ಮಿಷನ್:** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ ನಾರದ ಭಕ್ತಿಸೂತ್ರ ಕುರಿತು ಸಂಜೆ 6:30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6ರಿಂದ 6.30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

■ **ಅಭಿಯಂತರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** 30ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ ರಾಷ್ಟ್ರೀಯ ರಂಗ ಉತ್ಸವ, ನವದೆಹಲಿಯ ಮೆರಾಕಿ ಥಿಯೇಟರ್ ಗ್ರೂಪ್‌ನಿಂದ ಇನ್‌ಕ್ವೆಷ್ಟ್ ಆಫ್ ಪೀಸ್ ನಾಟಕ ಪ್ರದರ್ಶನ, ರಚನೆ : ತನಯ್ ತಾರಿಣಿ, ನಿರ್ದೇಶನ : ವಿಕಾಸ್ ಗರ್ಗ್ ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.



ಇಂದಿನ ಪಂಚಾಂಗ

20.1.2023 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

ಸುತ್ತೂರು ಜಾತ್ರಾ ಮಹೋತ್ಸವ

ಕರ್ತೃ ಗದ್ದುಗೆಯಲ್ಲಿ ಪೂಜಾ ಉತ್ಸವ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಮಹಾಮಂಗಳಾರತಿ, ಬೆಳಗ್ಗೆ 5ಕ್ಕೆ ಶಿವದೀಕ್ಷೆ-ಲಿಂಗದೀಕ್ಷೆ, ಬೆಳಗ್ಗೆ 6ಕ್ಕೆ ಶ್ರೀ ಮಠದ ಗುರುಪರಂಪರೆ ಸಂಸ್ಮರಣೋತ್ಸವ, ಮಂತ್ರ ಮಹರ್ಷಿ ಗದ್ದುಗೆ, ರುದ್ರಾಭಿಷೇಕ, 57ನೇ ಲಿಖಿತ ಮಂತ್ರ ಸಂಸ್ಮರಣೋತ್ಸವ, ಬೆಳಗ್ಗೆ 6.30ಕ್ಕೆ ಮಾದಯ್ಯನಹುಂಡಿ ಸ್ನೇಹ ಸೌಹಾರ್ದ ಶಾಂತಿ ಪಥ ಸಂಚಲನ, ಷಟ್‌ಸ್ಥಳ ಧ್ವಜಾರೋಹಣ: ಹಾಸನದ ಶ್ರೀ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮಿಗಳು, ಧರ್ಮ ಸಂದೇಶ: ಶ್ರೀ ಪಟ್ಟದ ಮಠದ ಶ್ರೀ ಗುರುಸಿದ್ದ ಸ್ವಾಮಿಗಳು, ಬೆಳಗ್ಗೆ 7.15ಕ್ಕೆ ಆದಿ ಜಗದ್ಗುರುಗಳವರ ಉತ್ಸವಮೂರ್ತಿಗೆ ಅಭಿಷೇಕ, ಬೆಳಗ್ಗೆ 8ಕ್ಕೆ ಉತ್ಸವಮೂರ್ತಿಗೆ ರಾಜೋಪಚಾರ, ಸಂಜೆ 6ಕ್ಕೆ ಮಹಾರುದ್ರಾಭಿಷೇಕ, ಮಾಸ ಶಿವರಾತ್ರಿ ಮಹೋತ್ಸವ, ಮಹಾಮಂಗಳಾರತಿ, ರಾತ್ರಿ 9ಕ್ಕೆ ಉತ್ಸವಗಳು (ಶ್ರೀ ಮಠದಿಂದ), ಶ್ರೀ ನಂಜುಂಡೇಶ್ವರರು, ಜಗಜ್ಯೋತಿ ಶ್ರೀ ಬಸವೇಶ್ವರರು, ಎಡೆಯೂರು ಶ್ರೀ ಸಿದ್ದ ಲಿಂಗೇಶ್ವರರು, ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರು, ಜಗದ್ಗುರು ಶ್ರೀ ಘನಲಿಂಗ ಶಿವಯೋಗಿಗಳವರು, ಮಂತ್ರ ಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ಮತ್ತು ಕಾಯಕತಪಸ್ವಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಗಳ ಉತ್ಸವ, ಬೆಳಗ್ಗೆ 10ಕ್ಕೆ ರಥೋತ್ಸವ

ಕಟ್ಟಡಗಳ ಉದ್ಘಾಟನೆ (ಬೆಳಗ್ಗೆ 11ಕ್ಕೆ)

ಸಮ್ಮುಖ : ಶ್ರೀ ಭಗೀರಥ ಉಪ್ಪಾರ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಮಹಾಸ್ವಾಮಿಗಳು, ಶ್ರೀ ಗುರು ಕಂಬಳೀಶ್ವರ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಉದ್ಘಾಟನೆ : ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ವಿ.ಜೋಷಿ, ರಥದ ಮನೆ: ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಪರ್ವತೇಂದ್ರ ಶಿವಾಚಾರ್ಯ ಕಾಂಪ್ಲೆಕ್ಸ್: ನಗರಾಭಿವೃದ್ಧಿ ಸಚಿವ ಭೈರತಿ ವಿ.ಬಸವರಾಜ್, ಮುಖ್ಯ ಅತಿಥಿಗಳು : ಸಂಸದ ವಿ. ಶ್ರೀನಿವಾಸ ಪ್ರಸಾದ್, ಮಾಜಿ ಸಚಿವ ದಿನೇಶ್ ಗುಂಡೂರಾವ್, ಶಾಸಕ ಆರ್. ಗಣೇಶ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರಿ ಅಧ್ಯಕ್ಷ ಡಾ.ಸಿ. ಸೋಮಶೇಖರ್, ಕೆ.ಪಿ.ಮಹದೇವಸ್ವಾಮಿ, ಶ್ರೀಮತಿ ವೀಣಾ ತೋಟಕುರ.

ದೇಸಿ ಆಟಗಳು, ಚಿತ್ರಕಲಾ ಸ್ಪರ್ಧೆ ಮತ್ತು ಗಾಳಿಪಟ ಸ್ಪರ್ಧೆ: ಉದ್ಘಾಟನೆ (ಸಂಜೆ 4ಕ್ಕೆ)

ಸಮ್ಮುಖ: ಶ್ರೀ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದಂಗಳು, ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಅಧ್ಯಕ್ಷತೆ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇಸಿ ಆಟಗಳು: ಶಾಸಕ ಎಚ್.ಕೆ.ಪಾಟೀಲ್, ಚಿತ್ರಕಲಾ ಸ್ಪರ್ಧೆ : ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ, ಗಾಳಿಪಟ ಸ್ಪರ್ಧೆ : ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ಯು.ಟಿ.ಖಾದರ್, ಎನ್. ಮಹೇಶ್, ಹೆಚ್.ಪಿ.ಮಂಜುನಾಥ್, ಡಾ.ಕೆ.ಅನ್ನದಾನಿ, ಎಂ.ಅಶ್ವಿನ್‌ಕುಮಾರ್, ಕರ್ನಾಟಕ ಜಾನಪದ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷೆ ಡಾ. ಮಂಜಮ್ಮ ಜೋಗತಿ, ಟ್ರಾನ್ಸ್‌ಟೆಕ್, ಯುಎಸ್‌ಎ ಅಧ್ಯಕ್ಷ ಉಮೇಶ್ ಪಿ. ಮೂರ್ತಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ-ಪ್ರೊ. ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ- ಸದಾಶಿವ ಪಾಟೀಲ್, ಮತ್ತುರು ಕುಮಾರಸ್ವಾಮಿ, ವ್ಯಾಖ್ಯಾನ-ಡಾ.ಹೆಚ್.ಎನ್.ಮಂಜುರಾಜ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಮೈಸೂರು ಎಸ್.ರಾಜಲಕ್ಷ್ಮಿ -ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ-ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್ ಎಸ್.ಎಸ್., 1.20 ಭಾವಗೀತೆ-ಆರ್.ಶೈಲಾ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ-ಜಿ.ಕೆ.ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರನಾರೇಯಣ-ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ- ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ-ಡಾ.ಎನ್.ರಘು, 4.00 ಮಹಿಳಾರಂಗ-ಸಖೀಪದ, 4.30 ವೃತ್ತಿ ಮಾರ್ಗದರ್ಶನ-ಜಾನಪದ ಅಧ್ಯಯನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಅಂಬಳಿಕೆ ಹಿರಿಯಣ್ಣ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ-ಕಿಸಾನ್ ವಾಣಿ, 8.00 ರಸಮಂಜರಿ-ಕೆ.ಎಸ್.ಎಸ್. ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.15 ಜನಪದಸಂಗೀತ-ಜಯಮ್ಮ ಮತ್ತು ತಂಡ, 9.30 ಆರ್. ಮೋಹನ್-ಕ್ಲಾರಿಯೋನೆಟ್ ವಾದನ, 10.00 ವಾದ್ಯವೃಂದ, ನಿರ್ದೇಶನ-ಹೆಚ್.ಎಲ್.ಶಿವಶಂಕರಸ್ವಾಮಿ

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ : ಬೆಳಗ್ಗೆ 8ಕ್ಕೆ ನಾದಸ್ವರ, ಮಧ್ಯಾಹ್ನ 1.30ಕ್ಕೆ ಶಿವಕಥೆ-ಶ್ರೀ ಶಿವರಾತ್ರೀಶ್ವರ ವಿಜಯ -ವಿದ್ವಾನ್ ಬಿ.ಶಿವಕುಮಾರಶಾಸ್ತ್ರಿ ಮತ್ತು ತಂಡ, ರಾತ್ರಿ 7ಕ್ಕೆ ಕಂಸಾಳೆ ನೃತ್ಯ-ಮಹದೇವು ಮತ್ತು ತಂಡ, ಕೆಂಪಿಸಿದ್ದನಹುಂಡಿ, ರಾತ್ರಿ 8ಕ್ಕೆ ಭರತನಾಟ್ಯ -ವಿದುಷಿ ಮೇಘನಾರಾವ್ ಮತ್ತು ತಂಡ, ಮೈಸೂರು; ರಾತ್ರಿ 9ಕ್ಕೆ ಜನಪದ ಮತ್ತು ತತ್ವಪದ-ಶ್ರೀದೇವಾನಂದ ವರಪ್ರಸಾದ ಮತ್ತು ತಂಡ, ಅರಕಲಗೂಡು.

ನಾಟಕಗಳು (ರಾತ್ರಿ 10ಕ್ಕೆ)

ಹಿರಿಯರ ಮನೆ ಆವರಣ: ಸುತ್ತೂರು ಶ್ರೀ ಶಿವರಾತ್ರೀಶ್ವರ ಕಲಾಸಂಘದಿಂದ ಭಕ್ತ ಪ್ರಹ್ಲಾದ. **ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪ:** ಮೇಗಳಕೊಪ್ಪಲು ಶ್ರೀ ವಡ್ಗಲ್ ರಂಗನಾಥಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಅವರಿಂದ ದಕ್ಷಯಜ್ಞ. **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ :** ಸೋವೇನಹಳ್ಳಿ ಶ್ರೀ ಮೈಲಾರಲಿಂಗೇಶ್ವರ ಸಾಂಸ್ಕೃತಿಕ ಕಲಾ ಟ್ರಸ್ಟ್‌ನಿಂದ ರಕ್ತರಾತ್ರಿ **ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹದ ಹಿಂಭಾಗ :** ಕೆ.ಹೆಮ್ಮನಹಳ್ಳಿ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಅವರಿಂದ ಶಿವಕುಮಾರ ಮತ್ತು ವಲ್ಲೀ ಪರಿಣಯ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 20 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 273 | ಪುಟಗಳು: 12

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾಂಗ್ರೆಸ್ ಸಿದ್ಧಪಡಿಸಿದ ಊಟವನ್ನು ಬಿಜೆಪಿ ಬಡಿಸುತ್ತಿದೆ



ಹುಬ್ಬಳ್ಳಿ: ಪ್ರಧಾನಿ ಮೋದಿ ಅವರು ಕಲಬುರಗಿಯಲ್ಲಿ ಅಲೆಮಾರಿ ಲಂಬಾಣಿ (ಬಂಜಾರ) ಬುಡಕಟ್ಟು ಜನಾಂಗದವರಿಗೆ ಹಕ್ಕುಪತ್ರ ವಿತರಿಸುತ್ತಿದ್ದಂತೆಯೇ ಮಾಜಿ ಸಿಎಂ ಸಿದ್ದರಾಮಯ್ಯ ಅವರು ರಾಜ್ಯದ ಆಡಳಿತಾರೂಢ ಬಿಜೆಪಿಯು ತಮ್ಮ ನೇತೃತ್ವದ ಹಿಂದಿನ ಕಾಂಗ್ರೆಸ್ ಸರ್ಕಾರ ತಯಾರಿಸಿದ ಊಟವನ್ನು ಬಿಜೆಪಿ ಬಡಿಸುತ್ತಿದೆ ಎಂದು ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಬಿಜೆಪಿಯವರು ತಾಂಡಾಗಳಿಗೆ ▶ 9ನೇ ಪುಟಕ್ಕೆ

ಹಿಂದುತ್ವ, ರಾಷ್ಟ್ರೀಯತೆ ಜೊತೆಗೆ ಅಭಿವೃದ್ಧಿ, ಸಹಬಾಳ್ವೆ

ಪ್ರಧಾನಿ ಮೋದಿ ಹೊಸ ಮಂತ್ರ

ಕಲ್ಯಾಣ ಕರ್ನಾಟಕ ಭಾಗದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರ್ಮಭೂಮಿಯಲ್ಲಿ ಸಂಚಲನ

52 ಸಾವಿರ ತಾಂಡಾ ಕುಟುಂಬಗಳಿಗೆ ಹಕ್ಕುಪತ್ರದೊಂದಿಗೆ ತಾಂಡಾಗಳನ್ನು ಕಂದಾಯ ಗ್ರಾಮವಾಗಿಸುವ ಘೋಷಣೆ

ಡಬಲ್ ಇಂಜಿನ್ ಸರ್ಕಾರದಿಂದ ಡಬಲ್ ವೇಗ, ಡಬಲ್ ಲಾಭ



ಬೆಂಗಳೂರು, ಜ.19(ಕೆಎಂಶಿ)– ಪಕ್ಷದ ಮೂಲಮಂತ್ರವಾದ ಹಿಂದುತ್ವ, ರಾಷ್ಟ್ರೀಯತೆ ಬದಿಗಿಟ್ಟು ಅಭಿವೃದ್ಧಿ ಮತ್ತು ಸಹಬಾಳ್ವೆಯ ಮಂತ್ರವನ್ನು ಪ್ರಧಾನಿ ಮೋದಿ ಜಪಿಸಿದ್ದಾರೆ.

ವಿಧಾನಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ ಒಂದಲ್ಲಾ–ಒಂದು ಸರ್ಕಾರಿ ಕಾರ್ಯಕ್ರಮ ನೆಪವೊಡ್ಡಿ ಪದೇ ಪದೆ ರಾಜ್ಯಕ್ಕೆ ಭೇಟಿ ನೀಡುತ್ತಿರುವ ಪ್ರಧಾನಿಯವರು, ಇಂದು ಮತ್ತೆ ಡಬಲ್ ಇಂಜಿನ್ ಸರ್ಕಾರ ಇದ್ದರೆ ಮಾತ್ರ ಅಭಿವೃದ್ಧಿಗೆ ನಾಂದಿ ಎಂದು ಒತ್ತಿ ಹೇಳಿದ್ದಾರೆ. ಆದಿವಾಸಿ, ಗುಡ್ಡಗಾಡು, ಅತ್ಯಂತ ಹಿಂದುಳಿದ ಸಮುದಾಯಕ್ಕೆ ಕಳೆದ 50 ವರ್ಷಗಳಿಂದ ದೊರೆಯದ ಸವಲತ್ತನ್ನು ನಮ್ಮ ಡಬಲ್ ಇಂಜಿನ್ ಸರ್ಕಾರ ನೀಡಿ, ದಾಖಲೆ ಸೃಷ್ಟಿಸಿದೆ. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ನೆಲದಲ್ಲೇ ಸುಮಾರು 52 ಸಾವಿರ ತಾಂಡಾ ಕುಟುಂಬಗಳಿಗೆ ಹಕ್ಕುಪತ್ರ ಹಾಗೂ ತಾಂಡಾಗಳನ್ನು ಗ್ರಾಮವಾಗಿ ಪರಿವರ್ತಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಹಿಂದೆ ಇದ್ದ ಸರ್ಕಾರಗಳು ದಲಿತರು ಮತ್ತು ತುಳಿತಕ್ಕೊಳಗಾದವರಿಗೆ ಸವಲತ್ತುಗಳನ್ನು ನೀಡದಿದ್ದರಿಂದ ಇಲ್ಲಿಯವರೆಗೂ ನೆಲೆ ಕಾಣಲು ಕಾಯಬೇಕಾಯಿತು.

ನಾವು ಅಧಿಕಾರಕ್ಕೆ ಬಂದ ನಂತರ 20 ಕೋಟಿ ಇಂತಹ ಕುಟುಂಬಗಳಿಗೆ ಸೂರು ಕಲ್ಪಿಸಿ, ಮೂಲಸೌಕರ್ಯ ಒದಗಿಸಿದ್ದೇವೆ. ಭಾರತವು ನಿಜವಾದ ಅಭಿವೃದ್ಧಿ ಹೊಂದಿದ ದೇಶವಾಗುವತ್ತ ಸಾಗುತ್ತದೆ. ರೈತರಿಂದ ಉದ್ಯಮಿಗಳವರೆಗೆ ಪ್ರತಿಯೊಬ್ಬರ ಸಾಮೂಹಿಕ ಪ್ರಯತ್ನದಿಂದ ಮಾತ್ರ ಇದು ಸಾಕಾರಗೊಳ್ಳುತ್ತದೆ. ಪ್ರತಿಯೊಬ್ಬರೂ ಮುಂದೆ ಬಂದು ತಮ್ಮ ಕೈಲಾದ್ದನ್ನು ನೀಡಬೇಕು. ಮುಂದಿನ 25 ವರ್ಷಗಳು ಪ್ರತಿಯೊಬ್ಬ ನಾಗರಿಕರಿಗೆ, ಪ್ರತಿ ರಾಜ್ಯಕ್ಕೆ 'ಅಮೃತ ಕಾಲ' ಬರುತ್ತದೆ. 'ಕೃಷಿ' ಮತ್ತು 'ಕಾರ್ಖಾನೆ' ಎರಡೂ ಸಮೃದ್ಧವಾಗಿದ್ದಾಗ ಮಾತ್ರ ಭಾರತವು 'ಅಭಿವೃದ್ಧಿ'ಯಾಗಲು ಸಾಧ್ಯ ಎಂದರು. ನೀರಾವರಿ, ಕೃಷಿ, ಕುಡಿಯುವ ನೀರು, ಕೈಗಾರಿಕೆ, ರಸ್ತೆ ಸೇರಿದಂತೆ ಪ್ರತಿಯೊಂದು ಕ್ಷೇತ್ರವು ಅಭಿವೃದ್ಧಿಯತ್ತ ದಾಪುಗಾಲು ಇಟ್ಟಿದೆ. ಹಿಂದಿನ ಸರ್ಕಾರಗಳಂತೆ ಓಟ್‌ಬ್ಯಾಂಕ್ ರಾಜಕಾರಣ ಮಾಡಿಕೊಂಡಿರಲಿಲ್ಲ.

ಹಿಂದೆ ಪ್ರತಿಯೊಂದು ಯೋಜನೆಗಳಲ್ಲೂ ಓಟ್‌ಬ್ಯಾಂಕ್ ರಾಜಕಾರಣ ಅಡಗಿತ್ತು ಎಂದು ಪರೋಕ್ಷವಾಗಿ ಕಾಂಗ್ರೆಸ್ ಹೆಸರೇಳದೆ ವಾಗ್ದಾಳಿ ನಡೆಸಿದರು. ▶ 9ನೇ ಪುಟಕ್ಕೆ

ದೇಶದ 11 ಕೋಟಿ ಮನೆಗೆ ನಲ್ಲಿ ಸಂಪರ್ಕ



ಯಾದಗಿರಿ, ಜ.19– ಮೂರೂವರೆ ವರ್ಷಗಳ ಹಿಂದೆ ಜಲ ಜೀವನ್ ಮಿಷನ್ ಕಾರ್ಯಕ್ರಮ ಆರಂಭಿಸಿದಾಗ ಕೇವಲ 3 ಕೋಟಿ ಮನೆಗಳಿಗೆ ಮಾತ್ರವೇ ನಲ್ಲಿ ಸಂಪರ್ಕ ಇತ್ತು. ಆದರೆ ಈಗ ದೇಶದಲ್ಲಿ 11 ಕೋಟಿ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. 8 ಕೋಟಿ ಹೊಸ ಕುಟುಂಬಗಳಿಗೆ ಪೈಪ್‌ಗಳ ನೀರಿನ ಸಂಪರ್ಕ ಬಂದಿದೆ. ಇದರಲ್ಲಿ ಕರ್ನಾಟಕದ ಲಕ್ಷಾಂತರ ಕುಟುಂಬಗಳು ಸೇರಿವೆ. ಕರ್ನಾಟಕ ಮತ್ತು ದೇಶದ ಎಲ್ಲಾ ಮನೆಗಳಿಗೂ ನಾವು ನೀರು ಒದಗಿಸುತ್ತೇವೆ. ನಲ್ಲಿಯಿಂದ ನೀರು ಮನೆಗೆ ಬಂದಾಗ ತಾಯಂದಿರು ▶ 9ನೇ ಪುಟಕ್ಕೆ

ಮುಂದಿನ 10 ವರ್ಷ ರಾಜ್ಯದ ಪಾಲಿಗೆ ನೀರಾವರಿ ದಶಕ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ಬೆಂಗಳೂರು, ಜ.19(ಕೆಎಂಶಿ)– ಮುಂದಿನ 10 ವರ್ಷಗಳನ್ನು ನೀರಾವರಿ ದಶಕವೆಂದು ಘೋಷಿಸಲಾಗುವುದು. ಈ ಅವಧಿಯಲ್ಲಿ ರಾಜ್ಯದ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕೋಡೆಕಲ್ ಹೊರವಲಯದಲ್ಲಿ ಏರ್ಪಡಿಸಿದ್ದ 10863 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರಧಾನಮಂತ್ರಿಗಳು ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ರಾಜ್ಯದಲ್ಲಿ 40.66 ಲಕ್ಷ ಹೆಕ್ಟೇರ್ ನೀರಾವರಿ ಪ್ರದೇಶದ ಗುರಿ ಇದ್ದು,ಇದುವರೆಗೆ 30ಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸಲಾಗುತ್ತಿದ್ದು,ಬಾಕಿ ಉಳಿದ 10.66ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲು ಕ್ರಮಕೈಗೊಳ್ಳಲಾಗುವುದು ಎಂದರು. ಸ್ಕಾಡಾ ತಂತ್ರಜ್ಞಾನ ಅಳವಡಿಕೆಯಿಂದ ಅಚ್ಚುಕಟ್ಟು ಪ್ರದೇಶದ ಎಲ್ಲ ರೈತರ ಜಮೀನಿಗೆ ನೀರು ಕಲ್ಪಿಸಲಾಗುವುದು. ನಾರಾಯಣಪುರ ಎಡದಂಡೆ ಕಾಲುವೆಯ ವಿಸ್ತರಣೆ, ಪುನಃಶ್ಚೇತನ ಹಾಗೂ ಆಧುನೀಕರಣ ಯೋಜನೆ ಮತ್ತು ಸ್ಕಾಡಾ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಅಚ್ಚುಕಟ್ಟು ಪ್ರದೇಶದ ಎಲ್ಲ ರೈತರ ಜಮೀನುಗಳಿಗೆ ನೀರು ಒದಗಿಸಲಾಗುತ್ತಿದೆ ▶ 9ನೇ ಪುಟಕ್ಕೆ

ಹಿರಿಯ ಸಮಾಜವಾದಿ ಪ.ಮಲ್ಲೇಶ್ ನಿಧನ



ಮೈಸೂರು,ಜ.19(ಆರ್‌ಕೆ, ಎಸ್‌ಬಿಡಿ)– ಹಿರಿಯ ಸಮಾಜವಾದಿ, ಕನ್ನಡ ಚಳವಳಿಗಾರ ಪ.ಮಲ್ಲೇಶ್ ಅವರು ಗುರುವಾರ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅತ್ಯಾಪ್ತರಾಗಿದ್ದ ಪ.ಮಲ್ಲೇಶ್ ಅವರು ರಾಮಕೃಷ್ಣನಗರ ನಿವಾಸದಿಂದ ನೃಪತುಂಗ ಶಾಲೆಗೆ ಎಂದಿನಂತೆ ಹೋಗಿ ಬಂದಿದ್ದರು. ಏಕಾಏಕಿ ಸುಸ್ತು ಹಾಗೂ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಮನೆಯವರು ತಕ್ಷಣ ಅವರನ್ನು ಅಪೋಲೋ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ ಪರೀಕ್ಷಿಸಿದ ವೈದ್ಯರು ಪ.ಮಲ್ಲೇಶ್ ಅವರು ಮಾರ್ಗ ಮಧ್ಯೆಯೇ ಮೃತಪಟ್ಟಿರುವುದನ್ನು ಖಚಿತಪಡಿಸಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಪ.ಮಲ್ಲೇಶ್ ಅವರು ಒಂದು ವಾರ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಬಂದಿದ್ದರು. ಆದರೂ ಚೈತನ್ಯದಿಂದ ಇದ್ದರು. ಗುರುವಾರ ಮಧ್ಯಾಹ್ನ ಶಾಲೆಗೆ ಬಂದು ಮಧ್ಯಾಹ್ನ 2.15ರವರೆಗೂ ಮಾತನಾಡುತ್ತಾ ಕುಳಿತಿದ್ದರು. ▶ 4ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಸೀಡ್‌ಲೆಸ್ ಪಪ್ಪಾಯಿ ಕೊಡಿ
ಮಾಲೀಕ : ಆಯ್ತು ಇನ್ನೇನು ಬೇಕು?
ಗಿರಾಕಿ : ಸೀಡ್‌ಲೆಸ್ ಕಡ್ಲೆಕಾಯಿ ಇದೆಯಾ?

ಮೈಸೂರು ಮಿತ್ರ

ಶುಕ್ರವಾರ, 20 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ದುಡುಕುವುದು ಅವಿವೇಕ. ಅದು ಆಪತ್ತಿಗೆ ದಾರಿ.
ಅವಿವೇಕ ಕತ್ತಲಿನಂತಾದರೆ ವಿವೇಕ ಬೆಳಕಿನಂತೆ – ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸೌಟು ಬಲ್ಲದೆ ಸಾರಿನ ರುಚಿ?

ಚಾಮುಂಡಿಬೆಟ್ಟಕ್ಕೆ ಪ್ರಸಾದ ಕಾಮಗಾರಿ ಮಾಹಿತಿ ಪಡೆಯಲು ಜ.25ರಂದು ಡಿಸಿ ಭೇಟಿ

● ಚಾಮುಂಡಿಬೆಟ್ಟ ಉಳಿಸಿ ಹೋರಾಟ ಸಮಿತಿ ನಿರ್ಧಾರ ● ನಂತರ ಸಾಧಕ–ಬಾಧಕ ಅರಿತು ಹೋರಾಟ ರೂಪುರೇಷೆ ತೀರ್ಮಾನ





ಮೈಸೂರು,ಜ.19(ಎಸ್‌ಬಿಡಿ)– ಕೇಂದ್ರ ಸರ್ಕಾರದ ಪ್ರಸಾದ ಯೋಜನೆಯಡಿ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಬಗ್ಗೆ ಸ್ಪಷ್ಟ ವಿವರ ಪಡೆಯುವ ನಿಟ್ಟಿನಲ್ಲಿ ಜನವರಿ 25ರಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರನ್ನು ಭೇಟಿಯಾಗಲು ಚಾಮುಂಡಿ ಬೆಟ್ಟ ಉಳಿಸಿ ಹೋರಾಟ ಸಮಿತಿ ನಿರ್ಧರಿಸಿದೆ.

ನಗರದ ಚೆಲುವಾಂಬ ಉದ್ಯಾನದಲ್ಲಿ ಗುರುವಾರ ನಡೆದ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಪ್ರಸಾದ ಯೋಜನೆಯಡಿ ಕೈಗೊಳ್ಳಲಿರುವ ಕಾಮಗಾರಿಗಳ ವಿವರ, ಸಾಧಕ–ಬಾಧಕಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಮುಂದಿನ ಹೋರಾಟದ ರೂಪುರೂಷೆ ತೀರ್ಮಾನಿಸಲು ನಿರ್ಧಾರ ಕೈಗೊಳ್ಳಲಾಯಿತು.

ಸಭೆಯಲ್ಲಿ ಪಾರಂಪರಿಕ ತಜ್ಞ ಪ್ರೊ.ರಂಗರಾಜು ಮಾತನಾಡಿ, ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟ ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳುತ್ತಾರೆ. ಆದರೆ ಉದ್ದೇಶಿತ ಕಾಮಗಾರಿಗಳೇನು, ಅದನ್ನು ನಡೆಸುವವರು ಯಾರು ಎನ್ನುವ ಕನಿಷ್ಟ ಮಾಹಿತಿಯನ್ನೂ ಜನರಿಗೆ ನೀಡಿಲ್ಲ. ಹಾಗಾಗಿ ಮೊದಲು ಪಾರಂಪರಿಕ ಸಂರಕ್ಷಣಾ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿಗಳ ಭೇಟಿ ಮಾಡೋಣ. ಬೆಟ್ಟದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ಬಗ್ಗೆ ಸಮಿತಿ ಗಮನಕ್ಕೆ ತರಲಾಗಿದೆಯೇ, ಈವರೆಗೆ ಸಾರ್ವಜನಿಕವಾಗಿ ಏಕೆ ಪ್ರಕಟಿಸಿಲ್ಲ ಎಂದು ಕೇಳೋಣ. ನಂತರ ಬೇಕಿದ್ದರೆ ಜನಪ್ರತಿನಿಧಿಗಳ ಭೇಟಿ ಮಾಡಬಹುದು ಎಂದು ಅಭಿಪ್ರಾಯಿಸಿದರು.

ನಾವ್ಯಾರೂ ಅಭಿವೃದ್ಧಿ ವಿರೋಧಿಗಳಲ್ಲ. ಆದರೆ ಬೆಟ್ಟ ಎಷ್ಟು ಪ್ರಮಾಣದಲ್ಲಿ ಒತ್ತಡವನ್ನು ಸಹಿಸಲು ಸಾಧ್ಯವೋ ಅದನ್ನು ಮೀರಿದರೆ ಅಪಾಯ ಕಟ್ಟಿಟ್ಟಬುತ್ತಿ. ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಯೋಜನೆ ಬಗ್ಗೆ ಸ್ಪಷ್ಟನೆಗೆ ಒತ್ತಾಯಿಸಬೇಕು. ನಂತರದಲ್ಲಿ ಯಾವ ಕಾಮಗಾರಿ ಅಗತ್ಯ ಅಥವಾ ಅನಗತ್ಯ ಎನ್ನುವುದನ್ನು ಚರ್ಚಿಸೋಣ ಎಂದರು.

ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ ಮಾತನಾಡಿ, ಪ್ರಸಾದ ಯೋಜನೆ ಕೇಂದ್ರ ಸರ್ಕಾರದ್ದಾಗಿರುವುದರಿಂದ ವಿರೋಧಿಸುವುದು ಕಷ್ಟ, ಈ ಬಗ್ಗೆ ವಿವರಣಾತ್ಮಕವಾಗಿ ದಾಖಲಿಸಿದರೆ ಯಾರೂ ಓದುವುದಿಲ್ಲ. ಹಾಗಾಗಿ ಪ್ರಸಾದ ಯೋಜನೆಯ ಒಳಿತು ಹಾಗೂ ಕೆಡುಕಿನ ಅಂಶಗಳನ್ನು ಬುಲೆಟ್ ಮಾದರಿಯಲ್ಲಿ ಪಟ್ಟಿ ಮಾಡಬೇಕು. ಅದನ್ನು ಹೆಚ್ಚು ಜನರಿಗೆ ತಲುಪಿಸುವ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬೇಕು. ಜೊತೆಗೆ ಯೋಜನೆ ಬಗ್ಗೆ ಸ್ಪಷ್ಟನೆ ನೀಡಲು ಸರ್ಕಾರಕ್ಕೆ ಗಡುವು ನೀಡಬೇಕು. ಅಷ್ಟರಲ್ಲಿ ಉತ್ತರ ನೀಡದಿದ್ದರೆ ಹೋರಾಟವನ್ನು ತೀವ್ರಗೊಳಿಸುವ ಬಗ್ಗೆ ರೂಪುರೇಷೆ ಸಿದ್ಧಪಡಿಸಬೇಕು. ಕಾಮಗಾರಿಗಳು ಪೂರ್ಣಗೊಂಡ ಬಳಿಕ ಯಾವ ಹೋರಾಟದಿಂದಲೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ವಿಳಂಬ ಮಾಡದೆ ಮುಂದುವರೆಯಬೇಕು ಎಂದು ಸಲಹೆ ನೀಡಿದರು.

ಮೈಸೂರು ಗ್ರಾಹಕ ಪರಿಷತ್‌ನ ಭಾಮಿ ವಿ.ಶೆಣೈ ಮಾತನಾಡಿ, ಪ್ರಸಾದ ಯೋಜನೆಯಡಿ ಕೈಗೊಳ್ಳಲಿರುವ ಕಾಮಗಾರಿಗಳ ಬಗ್ಗೆ ಯಾವ ಅಧಿಕಾರಿಗಳೂ ಮಾಹಿತಿ ನೀಡುತ್ತಿಲ್ಲ. ಜನಪ್ರತಿನಿಧಿಗಳು ತಮಗೆ ಅನುಕೂಲವಾಗುವ ರೀತಿಯಲ್ಲಿ ಹೇಳಿಕೆ, ಪ್ರತಿಕ್ರಿಯೆ ನೀಡುತ್ತಾರೆ. ಹಾಗಾಗಿ ಚಾಮುಂಡಿ ಬೆಟ್ಟಕ್ಕಿರುವ ಅಪಾಯದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ ಎಂದರು.

ಲೀಲಾ ಶಿವಕುಮಾರ್ ಮಾತನಾಡಿ, ಮೈಸೂರಿನ ಪರಿಸರ ಆಸಕ್ತ ಬಳಗವನ್ನೆಲ್ಲಾ ಒಗ್ಗೂಡಿಸಿ ಹೋರಾಟ ಮುಂದುವರೆಸಿದರೆ ಮತ್ತಷ್ಟು ಪರಿಣಾಮಕಾರಿಯಾಗಿರುತ್ತದೆ ಎಂದರು. ಸಭೆಯಲ್ಲಿ ಮೈಸೂರಿನಲ್ಲಿರುವ ಉದ್ಯಾನಗಳ ದುಸ್ಥಿತಿ, ಪಾರಂಪರಿಕ ಸ್ಮಾರಕಗಳ ಸಂರಕ್ಷಣೆ ಬಗ್ಗೆಯೂ ಚರ್ಚೆ ನಡೆಯಿತು. ರಾಜೇಂದ್ರನಗರದ ಮಹಿಳೆಯೊಬ್ಬರು, 15ನೇ ವಾರ್ಡ್‌ನ 10–11ನೇ ಉದ್ಯಾನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಿಲ್ಲದಂತಾಗಿವೆ. ನರ್ಮ್ ಮನೆಗಳನ್ನು ನೀಡಿದ್ದರೂ ಮತ್ತೆ ಶೆಡ್‌ಗಳನ್ನು ನಿರ್ಮಿಸಿಕೊಳ್ಳುತ್ತಾರೆ. 36 ವರ್ಷಗಳಿಂದ ನಾವು ಪಾರ್ಕ್‌ನಿಂದ ವಂಚಿತರಾಗಿದ್ದೇವೆ ಎಂದು ಅಳಲು ತೋಡಿಕೊಂಡರು. ಚಾಮುಂಡಿಬೆಟ್ಟ ಉಳಿಸಿ ಸಮಿತಿ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ, ಪ್ರಭಾ ನಂದೀಶ್, ಸುಮನಾ ಶೆಣೈ, ಶೈಲಜೇಶ್, ರಮೇಶ್, ಸುಶೀಲ, ಪೂರ್ಣಿಮಾ, ಮೇರಿ ಲೋಬೋ, ಸಿದ್ದಲಿಂಗಯ್ಯ, ಕುಮುದಾ, ಜವರಯ್ಯ, ಜಗದೀಶ್ ಸೇರಿದಂತೆ 30ಕ್ಕೂ ಹೆಚ್ಚು ಮಂದಿ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳು

ಪರಿಸರ ಸಂರಕ್ಷಣೆ ಉದ್ದೇಶದಿಂದ ಚಾಮುಂಡಿಬೆಟ್ಟಕ್ಕೆ ಎಲೆಕ್ಟ್ರಿಕ್ ಬಸ್ ಸಂಚಾರ ಕಲ್ಪಿಸುವುದು. ಬೆಟ್ಟದ ಎಲ್ಲಾ ಕಡೆಗಳಲ್ಲೂ ಸೋಲಾರ್ ಶಕ್ತಿ ಉಪಯೋಗಕ್ಕೆ ಆದ್ಯತೆ ನೀಡುವುದು. ಪ್ರತಿಭಟನೆ ಬದಲು ಸತ್ಯಾಗ್ರಹದ ಮೂಲಕ ಹೋರಾಟ ತೀವ್ರಗೊಳಿಸುವುದು. ಪರಿಸರಕ್ಕೆ ಹಾನಿಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಹೊಸದಾಗಿ ಮನೆ ನಿರ್ಮಿಸದಂತೆ ನಿರ್ಬಂಧಿಸಲು ಒತ್ತಾಯಿಸುವುದು. ಪ್ರಸಾದ ಯೋಜನೆಯ ವಿವರ ಪಡೆದು ಸಾಧಕ–ಬಾಧಕಗಳ ಬಗ್ಗೆ ಅವಲೋಕಿಸಿ ಕಾನೂನಾತ್ಮಕ ಹೋರಾಟ ರೂಪಿಸುವುದು. ತಾವರೆಕಟ್ಟೆ ಬಳಿ ಅನಧಿಕೃತ ಮಳಿಗೆಗಳು ನಿರ್ಮಾಣ ತಡೆಯುವುದು. ನಗರದ ಉದ್ಯಾನಗಳಲ್ಲಿ ಕಾನೂನುಬಾಹಿರವಾಗಿ ಯಾವುದೇ ನಿರ್ಮಾಣ ಮಾಡದಂತೆ ಶಿಸ್ತು ಕ್ರಮಕ್ಕೆ ಒತ್ತಾಯಿಸುವುದು. ದೊಡ್ಡ ಗಡಿಯಾರ ಮಾದರಿಯಲ್ಲಿ ಎಲ್ಲಾ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಗೆ ಆಗ್ರಹಿಸುವುದು ಸೇರಿದಂತೆ ಅನೇಕ ಸಲಹೆಗಳು ವ್ಯಕ್ತವಾದವು.

> “ಚಾಮುಂಡಿಬೆಟ್ಟದ ಸರ್ಕಾರಿ ಶಾಲೆ ಶಿಥಿಲಾವಸ್ಥೆಯಲ್ಲಿದ್ದು, ಟಿವಿಎಸ್ ಕಂಪನಿಯವರು ಅಭಿವೃದ್ಧಿಗೆ ಮುಂದೆ ಬಂದಿದ್ದಾರೆ. ಅದಕ್ಕೆ ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮತಿ ಕೇಳಿದ್ದಾರೆ. ಸದ್ಯ ಕಾಮಗಾರಿಗೆ ಮುನ್ನ ಪಾರಂಪರಿಕ ಸಮಿತಿ ಅನುಮತಿ ಕೇಳಬೇಕೆಂದು ಅರಿವಾಗಿರುವುದು ಈ ಹೋರಾಟದ ಪರಿಣಾಮವಾಗಿದೆ.
> –ಪ್ರೊ.ರಂಗರಾಜು, ಪಾರಂಪರಿಕ ತಜ್ಞ

ನಿಮ್ಮ ಪತ್ರಗಳು

ವಿದ್ಯುತ್ ಬಿಲ್ಲಿನ ಸಮಸ್ಯೆ ಸರಿಪಡಿಸಿ

ಮಾನ್ಯರೆ,

ಉಚಿತ ವಿದ್ಯುತ್ ಸರಬರಾಜನ್ನು ಕೃಷಿ ಪಂಪ್ ಸೆಟ್‌ಗಳಿಗೆ ಮಾತ್ರ ಸೀಮಿತಗೊಳಿಸಿ ತೋಟದ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಖಾಯಂ ಆಗಿ ರದ್ದುಗೊಳಿಸಲಾಗಿರುವುದು ಸರಿಯಷ್ಟೆ. ಆದರೆ ರದ್ದುಗೊಳಿಸಿದ ನಂತರವೂ ಪ್ರತಿ ತಿಂಗಳು ವಿದ್ಯುತ್ ಶುಲ್ಕ ಪಾವತಿಸಬೇಕೆಂದು CESC Bill ಕಳುಹಿಸುತ್ತಿದ್ದಾರೆ. ಅಂದಿನ ಕನಿಷ್ಠ ಬಿಲ್ ಮೊತ್ತ 20(ಇಪ್ಪತ್ತು) ರೂ. ಆದರೆ ಇಂದಿನ ಕನಿಷ್ಠ ಬಿಲ್ ಮೊತ್ತ 85 ರೂ. (ಎಂಬತ್ತೈದು). ವಿದ್ಯುತ್ ಸಂಪರ್ಕವನ್ನು ರದ್ದುಗೊಳಿಸುವವರೆಗೂ ಯಾವುದೇ ಬಾಕಿ ಇಲ್ಲದಂತೆ ಹಣ ಜಮಾ ಮಾಡಲಾಗಿದೆ. ವಿದ್ಯುತ್ ಸರಬರಾಜು ರದ್ದುಗೊಳಿಸಿದ ನಂತರ Meter ಮಾತ್ರ ಇರುತ್ತದೆ. ಜೊತೆಗೆ ಇದುವರೆಗೂ ಶುಲ್ಕ ಪಾವತಿಸುತ್ತಲೇ ಇದ್ದೇವೆ.

ನಾವು ವಿದ್ಯುತ್ ಸರಬರಾಜನ್ನು ಖಾಯಂ ಆಗಿ ಸ್ಥಗಿತಗೊಳಿಸಿದ್ದರೂ ವಿದ್ಯುತ್ ಬಿಲ್ ಕಳುಹಿಸುವುದನ್ನು ಏಕೆ ನಿಲ್ಲಿಸಿಲ್ಲ ಎಂದು ಸಂಬಂಧ ಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದಾಗ ವಿದ್ಯುತ್ ಬಿಲ್ ಕಳುಹಿಸುವುದನ್ನು ನಿಲ್ಲಿಸಬೇಕಾದರೆ Indemnity Bond, Affidavit ಮುಂತಾದ ದಾಖಲೆಗಳನ್ನು ಅನುಮತಿ ಪಡೆದ ವಿದ್ಯುತ್ ಗುತ್ತಿಗೆಗಾರರ ಮೂಲಕ ಅರ್ಜಿ ಸಲ್ಲಿಸಬೇಕೆಂದು ಹೇಳಿರುತ್ತಾರೆ.

ಈ ರೀತಿ ಲಕ್ಷಾಂತರ ರೈತರಿಗೆ/ಗ್ರಾಹಕರಿಗೆ ಚಾ.ವಿ.ಸ.ನಿ. ಅವರು ವಂಚಿಸಿ, ಹಗಲು ದರೋಡೆ ಮಾಡುತ್ತಿದ್ದಾರೆ ಎಂದರೆ ತಪ್ಪಿಲ್ಲ ಎನಿಸುತ್ತದೆ. ಒಂದು ಸರ್ಕಾರಿ ಸಂಸ್ಥೆಯೇ ಈ ರೀತಿ ಗ್ರಾಹಕರನ್ನು ವಂಚಿಸಿದರೆ ಖಾಸಗಿ ಸಂಸ್ಥೆಗಳು ಗ್ರಾಹಕರನ್ನು ವಂಚಿಸುವುದರಲ್ಲಿ ತಪ್ಪೇನಿದೆ ಎನಿಸುವುದಿಲ್ಲವೇ? ಇದೇ ರೀತಿ ಗ್ರಾಹಕರ ಹೆಸರನ್ನು ಬದಲಾಯಿಸಬೇಕಾದರೆ, ನಿಧನರಾದ ತಂದೆಯ ಹೆಸರಿನಿಂದ ಮಗನಿಗೆ ಬದಲಾಯಿಸಬೇಕಾದರೂ ಸಹಾ Indemnity Bond, Affidavit ಹಾಗೂ ಗುತ್ತಿಗೆಗಾರರ ಮೂಲಕವೇ ಅರ್ಜಿ ಸಲ್ಲಿಸಬೇಕೆಂದು ಹೇಳುತ್ತಾರೆ.

ಆದುದರಿಂದ ಇಂತಹ ಅಸಂಬದ್ಧ ನಿಯಮಗಳನ್ನು ರದ್ದುಗೊಳಿಸಿ ಸರಳೀಕೃತ ನಿಯಮಗಳನ್ನು ಜಾರಿಗೆ ತಂದು ಗ್ರಾಹಕರಿಗೆ, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಎಸ್.ಎಸ್. ಪ್ರಸಾದ್, ವರುಣ ಗ್ರಾಮ, ಮೈಸೂರು ತಾ.

ಕನಿಷ್ಠ ತಿಳುವಳಿಕೆ ಇಲ್ಲವೇ?



ಮಾನ್ಯರೆ,

ಮೈಸೂರು ಕುವೆಂಪುನಗರದ ಕಾಂಪ್ಲೆಕ್ಸ್ ಪಕ್ಕ, ಹೋಟೆಲ್ ಶಾಂತಿ ಸಾಗರ್ ಎದುರಿಗೆ ಸಾರ್ವಜನಿಕ ಬಸ್ ತಂಗುದಾಣವನ್ನು ನಿರ್ಮಿಸುತ್ತಿದ್ದು, ಈ ಬಸ್ ಶೆಲ್ಟರ್ ನಿರ್ಮಾಣವಾದರೆ ಸಾರ್ವಜನಿಕರು ಮತ್ತು ವಾಹನಗಳು ಸರಾಗವಾಗಿ ಸಂಚರಿಸಲು ಸಾಧ್ಯವಿಲ್ಲ. ಕಾರಣ, ಮುಖ್ಯ ರಸ್ತೆ ಸುಮಾರು ಅರ್ಧ ಭಾಗದಲ್ಲಿ ಈ ಬಸ್ ನಿಲ್ದಾಣ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈಗಾಗಲೇ ಇಲ್ಲಿ ನಾಲ್ಕೈದು ಅಪಘಾತಗಳು ಸಹ ಸಂಭವಿಸಿವೆ. ಇದನ್ನು ಕಾಂಪ್ಲೆಕ್ಸ್‌ನ ಕಾಂಪೌಂಡ್‌ನ ಒಳಭಾಗಕ್ಕೆ ಆದಂತೆ ನಿರ್ಮಿಸಿದರೆ, ಸಾರ್ವಜನಿಕರು ಮತ್ತು ವಾಹನಗಳು ಸಂಚರಿಸಲು ಅನುಕೂಲವಾಗುತ್ತದೆ. ಯಾವುದೇ ಸಾರ್ವಜನಿಕ ಬಸ್ ತಂಗುದಾಣವನ್ನು ನಿರ್ಮಿಸುವಾಗ ಮುಖ್ಯ ರಸ್ತೆಗೆ ಸ್ವಲ್ಪ ಕ್ರಾಸ್ ಆಗಿ ನಿರ್ಮಿಸಬೇಕೆಂಬ ಕನಿಷ್ಠ ತಿಳುವಳಿಕೆಯು ಉಸ್ತುವಾರಿ ಹೊತ್ತ ಸಂಬಂಧಿಸಿದ ನಮ್ಮ ಅಧಿಕಾರಿ ವರ್ಗಕ್ಕೆ ಇಲ್ಲವೆ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರದ ಸುಣ್ಣದ ಕೇರಿ ಭಾಗದಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ಹೆಚ್ಚಾಗಿದೆ. ವಿಪರ್ಯಾಸವೆಂದರೆ ಅಮಾಯಕ ಯುವಕರು ಈ ಚಟಕ್ಕೆ ಬಲಿಯಾಗಿ ತಮ್ಮ ಅಮೂಲ್ಯ ಜೀವನ ಮತ್ತು ಹಣವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಹಣ ಕಳೆದುಕೊಂಡ ಯುವಕರು ಸರಗಳ್ಳತನ, ದ್ವಿಚಕ್ರ ವಾಹನ ಕಳ್ಳತನ, ಮೊಬೈಲ್ ಕಳ್ಳತನದಂತಹ ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇನ್ನೇನು ಐಪಿಎಲ್ ಕ್ರಿಕೆಟ್ ವಿಶ್ವಕಪ್ ಸಮೀಪಿಸುತ್ತಿದೆ. ಕ್ರಿಕೆಟ್ ಬುಕ್ಕಿಗಳ ಮೇಲೆ ಕಾನೂನು ಕ್ರಮ ಕೈಗೊಂಡು ಶಾಂತಿ ವಾತಾವರಣ ನೆಲೆಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಲು ಮನವಿ.

– ನೊಂದ ನಿವಾಸಿಗಳು, ಸುಣ್ಣದಕೇರಿ, ಮೈಸೂರು.

ಅನಂತ

ಮಾನ್ಯರೆ,

ಬರಲಿದೆ, ಬರಲಿದೆ,
ಭರದಲಿ ಬರಲಿದೆ
ಬಿರುಗಾಳಿಯ ತರ
ಚುನಾವಣೆ !
ಯಾರೇ ಗೆಲ್ಲಲಿ, ಯಾರೇ ಸೋಲಲಿ,
ಠೇವಣಿ ಹೋಗಲಿ, ತಲೆಗಳೆ ಹೋಗಲಿ,
ಏನೂ ಆಗದು ಬದಲಾವಣೆ;
ತಪ್ಪದು ಶ್ರೀಸಾಮಾನ್ಯರ ಬವಣೆ!
(ಅನಾದಿ, ಅಂತೆ ಅನಂತ)

ಹೆಚ್ಚಳ : ಇಡೀ ದೇಶದಲ್ಲಿ ಹುಲಿಗಳು ಹೆಚ್ಚಾಗಿರುವ ರಾಜ್ಯ ಕರ್ನಾಟಕವಂತೆ. ಭೇಷ್! “ನರವ್ಯಾಘ್ರಗಳು, ‘ಗ್ರಾಮ/ಸಿಂಹ’ಗಳು ಇಲ್ಲಿ ಮಿಗಿಲು ಎಂದಾಯಿತು. (ಕೊಂಬೆಯಿಂದ ಕೊಂಬೆಗೆ ಲಂಘಿಸುವ ಮಂಗಗಳಂತೂ ಸರಿಯೆ!) ರಾಜ್ಯಕ್ಕಿದು ಕೊಂಬಲ್ಲವೆ?

ತರ್ಕಬದ್ಧ : “ಕಾವೇರಿ ಎಕ್ಸ್‌ಪ್ರೆಸ್ ವೇ” ಹೆಸರೇ ಸೂಕ್ತ (ಮಿತ್ರ. ಜ. 11) ಎಂಬ ಕೆ.ಬಿ. ಗಣಪತಿಯವರ ಪತ್ರ ತರ್ಕಬದ್ಧ; ಸಮುಚಿತ. (ಪ್ರತಾಪ್ ಸಿಂಹ ಧೀಮಂತ!).

– ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.

ಬಿಷಪ್ ಹೌಸ್‌ಗೆ ಅತಿಕ್ರಮ ಪ್ರವೇಶ: 6 ಮಂದಿ ವಿರುದ್ಧ ಪ್ರಕರಣ ದಾಖಲು

ಮೈಸೂರು,ಜ.19–ಮೈಸೂರಿನ ಬಿಷಪ್ ಹೌಸ್ ಮತ್ತು ಡಯಾಸಿಸನ್ ಕಚೇರಿಗೆ ಅತಿಕ್ರಮ ಪ್ರವೇಶ ಮಾಡಿ, ಕಾಮಗಾರಿಯನ್ನು ತಡೆದು ಕೆಲಸಗಾರರಿಗೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಮೈಸೂರು ಡಯಾಸಿಸನ್ ಸೊಸೈಟಿ ಕಾರ್ಯದರ್ಶಿ ಫಾ.ಜೇಮ್ಸ್ ಡೊಮಿನಿಕ್ ಅವರು 6 ಮಂದಿ ವಿರುದ್ಧ ನೀಡಿದ ದೂರನ್ನು ಮೈಸೂರಿನ 2ನೇ ಜೆಎಂಎಫ್‌ಸಿ ನ್ಯಾಯಾಲಯದ ಆದೇಶದ ಮೇರೆಗೆ ಲಷ್ಕರ್ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ. ಶಾರದಾದೇವಿನಗರ ನಿವಾಸಿ ಸ್ಟೀಫನ್ ಸುಜೀತ್, ಲೂರ್ಧುನಗರದ ಮೇರಿ ಜೋಸೆಫ್, ಗಾಂಧಿನಗರದ ಜಾನ್ ಫರ್ನಾಂಡಿಸ್, ಅಂಬ್ರೋಸ್ ಜಾರ್ಜ್, ಎನ್.ಆರ್.ಮೊಹಲ್ಲಾದ ಮರಿಯಾ ಫ್ರಾನ್ಸಿಸ್ ಮತ್ತು ಅಶೋಕಪುರಂನ ಎಲ್ವಿನ್ ಆರೋಪಕ್ಕೆ ಗುರಿಯಾಗಿರುವವರು. ಬಿಷಪ್ ಹೌಸ್‌ನ ಡಯಾಸಿಸನ್ ಕಚೇರಿಯನ್ನು ರಿಪೇರಿ ಮಾಡಲು ಕ್ರಿಸ್ಟಿಬಾಬು ಎಂಬುವರಿಗೆ ಗುತ್ತಿಗೆ ನೀಡಲಾಗಿತ್ತು. ಅವರು ಜ.4ರಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಜೆಸಿಬಿ ಬಳಸಿ ರಿಪೇರಿ ಕಾರ್ಯ ನಡೆಸುತ್ತಿದ್ದಾಗ ಮೇಲ್ಕಂಡ 6 ಮಂದಿ ಬಿಷಪ್ ಹೌಸ್‌ಗೆ ಅತಿಕ್ರಮ ಪ್ರವೇಶ ಮಾಡಿ ಕಾಮಗಾರಿಯನ್ನು ನಿಲ್ಲಿಸಿದ್ದಲ್ಲದೇ, ಕಾಮಗಾರಿ ನಡೆಸದಂತೆ ಬೆದರಿಕೆ ಹಾಕಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಾನಸಗಂಗೋತ್ರಿ ಆವರಣದಲ್ಲಿ ಪ.ಮಲ್ಲೇಶ್‌ಗೆ ಶ್ರದ್ಧಾಂಜಲಿ



ಮೈಸೂರು, ಜ.19(ಎಸ್‌ಪಿಎನ್) – ಹಿರಿಯ ಸಮಾಜವಾದಿ, ಕನ್ನಡಪರ ಹಾಗೂ ಪ್ರಗತಿಪರ ಹೋರಾಟಗಾರ ಪ.ಮಲ್ಲೇಶ್ ನಿಧನಕ್ಕೆ ಮೈಸೂರು ವಿವಿ ಸಂಶೋಧಕರ ಸಂಘ ಹಾಗೂ ವಿವಿಧ ವಿದ್ಯಾರ್ಥಿ ಸಂಘಟನೆಗಳ ಪದಾಧಿಕಾರಿಗಳು ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಕ್ಲಾಕ್ ಟವರ್ ಬಳಿ ಮೊಂಬತ್ತಿ ಹಚ್ಚಿ ಗುರುವಾರ ರಾತ್ರಿ ಶ್ರದ್ಧಾಂಜಲಿ ಸಲ್ಲಿಸಿದರು.

ಸಂಶೋಧಕರ ಸಂಘದ ಅಧ್ಯಕ್ಷ ಡಾ. ಮರಿದೇವಯ್ಯ ಮಾತನಾಡಿ, ಪ್ರಗತಿಪರ ಚಿಂತಕ ಪ.ಮಲ್ಲೇಶ ಅವರ ನಿಧನ ಆಘಾತ ತಂದಿದೆ. ಸದಾ ನೊಂದವರು, ಶೋಷಿತರು, ಬಡ ವಿದ್ಯಾರ್ಥಿಗಳ ಪರವಾಗಿ ದನಿಯಾಗಿದ್ದರು. ನೊಂದ ವಿದ್ಯಾರ್ಥಿಗಳು ಕಷ್ಟಕ್ಕೆ ಸಿಲುಕಿದಾಗ ತಕ್ಷಣ ಸ್ಪಂದಿಸುತ್ತಿದ್ದರು. ಅವರ ನಿಧನದಿಂದ ಮೈಸೂರಿನ ಪ್ರಗತಿಪರ ಹೋರಾಟಕ್ಕೆ ತುಂಬಲಾರದ ನಷ್ಟ ಎಂದು ಶ್ರದ್ಧಾಂಜಲಿ ಅರ್ಪಿಸಿದರು. ಈ ವೇಳೆ ಎಸ್.ಶಶಿಕುಮಾರ್, ನಟರಾಜ್, ಶಿವಶಂಕರ್, ನಿಂಗರಾಜ್, ದಿಲೀಪ, ಪ್ರದೀಪ, ಜಿಯಾರ ಗಣೇಶ್, ಸಂದೇಶ, ವೇಣುಕುಮಾರ್, ರಮೇಶ ಮುಂತಾದವರು ಭಾಗವಹಿಸಿದ್ದರು.

ಹಿರಿಯ ಸಮಾಜವಾದಿ ಪ.ಮಲ್ಲೇಶ್ ನಿಧನ

ಮೂರನೇ ಪುಟದಿಂದ

ಅಲ್ಲಿಂದ ಮನೆಗೆ ಹಿಂದಿರುಗಿದಾಗ ಅವರಿಗೆ ಎದೆ ನೋವು ಕಾಣಿಸಿಕೊಂಡಿದ್ದರಿಂದ ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಧ್ಯಾಹ್ನ 3 ಗಂಟೆ ವೇಳೆಯಲ್ಲಿ ಕೊನೆಯುಸಿರೆಳೆದರು ಎಂದು ನೃಪತುಂಗ ಶಾಲೆ ಕಾರ್ಯದರ್ಶಿ ಹೆಚ್.ಜಿ.ಕೃಷ್ಣಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಚಿತ್ರದುರ್ಗ ಜಿಲ್ಲೆ ಗುಡ್ಡದ ರಂಗಪ್ಪನಹಳ್ಳಿಯವರಾದ ಪ.ಮಲ್ಲೇಶ್ ಅವರು, ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ.(ಆನರ್ಸ್) ಹಾಗೂ ಮಾನಸಗಂಗೋತ್ರಿಯ ಪ್ರಪ್ರಥಮ ಸ್ನಾತಕೋತ್ತರ ತಂಡದಲ್ಲಿ ಕನ್ನಡ ಎಂ.ಎ. ಪದವಿ ಪಡೆದಿದ್ದರು. ಮೈಸೂರಿನ ರಾಮಕೃಷ್ಣನಗರದಲ್ಲಿ ನೆಲೆಸಿದ್ದ ಅವರು, ಗಾಂಧಿ, ರಾಮಮನೋಹರ ಲೋಹಿಯಾ ಸಿದ್ಧಾಂತದ ಅಪ್ಪಟ ಅನುಯಾಯಿಯಾಗಿದ್ದರು.

2 ವರ್ಷಗಳ ಹಿಂದೆ ಪ.ಮಲ್ಲೇಶ್ ಅವರ ಪತ್ನಿ ಸರ್ವ ಮಂಗಳಾ ಅವರು ನಿಧನರಾಗಿದ್ದು, ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ನಾಳೆ(ಶುಕ್ರವಾರ) ಬೆಳಗ್ಗೆ 1 ಗಂಟೆ ಕಾಲ ನೃಪತುಂಗ ಕನ್ನಡ ಶಾಲೆ ಆವರಣದಲ್ಲಿ ಪ.ಮಲೇಶ್ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಿಟ್ಟು ಬಳಿಕ ಅಂತ್ಯ ಸಂಸ್ಕಾರ ನಡೆಸುವ ಚಿಂತನೆಯಿದ್ದು, ಈ ಬಗ್ಗೆ ಕುಟುಂಬದವರು ಅಂತಿಮವಾಗಿ ನಿರ್ಧರಿಸಬೇಕಿದೆ.

ಕನ್ನಡದ ಕಾಯಕ: ನೇರ ನಡೆ ನುಡಿಯ ನಿಷ್ಠೂರವಾದಿ ಹೋರಾಟಗಾರರಾಗಿದ್ದ ಪ.ಮಲ್ಲೇಶ್, ಕನ್ನಡದ ಬಹುದೊಡ್ಡ ಗೋಕಾಕ್ ಚಳವಳಿಯಲ್ಲೂ ಭಾಗವಹಿಸಿದ್ದರು. ಆ ಸ್ಫೂರ್ತಿಯಿಂದಲೇ ನಾಡು, ನುಡಿ, ನೆಲ–ಜಲಕ್ಕೆ ಸಂಬಂಧಿಸಿದ ಹೋರಾಟಗಳಲ್ಲಿ ಮುಂಚೂಣಿ ವಹಿಸುತ್ತಿದ್ದರು. ಕನ್ನಡ ವಿಕಾಸ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆ ಮೂಲಕ ರಾಮಕೃಷ್ಣನಗರದಲ್ಲಿ ನೃಪತುಂಗ ಕನ್ನಡ ಶಾಲೆ ಆರಂಭಿಸಿ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದ್ದರು. ಕನ್ನಡ ಶಾಲೆಗಳು ಉಳಿಯಬೇಕು, ಪ್ರಾಥಮಿಕದಿಂದ ಸ್ನಾತಕೋತ್ತರ ಶಿಕ್ಷಣವೂ ಕನ್ನಡದಲ್ಲೇ ಆಗಬೇಕು, ವೈದ್ಯಕೀಯ ಹಾಗೂ ತಾಂತ್ರಿಕ ಪದವಿ ವಿದ್ಯಾರ್ಥಿಗಳಿಗೂ ಕನ್ನಡದಲ್ಲೇ ಶಿಕ್ಷಣ ನೀಡಬೇಕೆಂದು ಪ್ರತಿಪಾದಿಸಿದ್ದ ಅವರು ನೃಪತುಂಗ ಪಿಯು ಕಾಲೇಜಿನ ವಿಜ್ಞಾನ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ಪಾಠ ಮಾಡುವ ವ್ಯವಸ್ಥೆಯನ್ನು 3 ವರ್ಷಗಳ ಹಿಂದೆ ಅನುಷ್ಠಾನಗೊಳಿಸಿದ್ದರು. ಈ ಮೂಲಕ ನೃಪತುಂಗ ಕಾಲೇಜು ರಾಜ್ಯದಲ್ಲೇ ವಿಜ್ಞಾನವನ್ನು ಕನ್ನಡದಲ್ಲಿ ಕಲಿಸುತ್ತಿರುವ ಏಕೈಕ ಸಂಸ್ಥೆ ಎಂಬ ಕೀರ್ತಿಗೆ ಪಾತ್ರವಾಯಿತು. ಕನ್ನಡ ಕ್ರಿಯಾ ಸಮಿತಿ ರಚಿಸಿ ಮೂರು ದಶಕಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಲ್ಲದೆ 'ಮಾನವ' ಮಾಸ ಪತ್ರಿಕೆ ನಡೆಸುತ್ತಿದ್ದರು.


ಸಂಘಟನೆ–ಹೋರಾಟ: ತಮ್ಮ ಗುರುಗಳಾದ ಪ್ರೊ.ಡಿ.ಎಲ್. ನರಸಿಂಹಚಾರ್, ಪ್ರೊ.ತೀ.ನಂ.ಶ್ರೀ ಕಂಠಯ್ಯನವರನ್ನು ಆಗಾಗ್ಗೆ ಸ್ಮರಿಸಿಕೊಳ್ಳುತ್ತಿದ್ದ ಪ.ಮಲ್ಲೇಶ್ ಅವರಿಗೆ ವಿದ್ಯಾರ್ಥಿದೆಸೆಯಿಂದಲೇ ಬರವಣಿಗೆ ಹವ್ಯಾಸ ರೂಢಿಸಿಕೊಂಡಿದ್ದರು. 70ರ ದಶಕದಲ್ಲೇ ಕರ್ನಾಟಕದ ಪ್ರಗತಿಪರ ಸಂಘಟನೆಗಳ ಬರಹಗಾರರ ಒಕ್ಕೂಟದ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಕರ್ನಾಟಕ ವಿಚಾರವಾದಿ ಒಕ್ಕೂಟ, ಮೇಲುಕೋಟೆಯಲ್ಲಿರುವ ಜನಪದ ಸೇವಾ ಟ್ರಸ್ಟ್‌ನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಜಯಪ್ರಕಾಶ್ ನಾರಾಯಣ್ ಅವರ ಹೋರಾಟದಲ್ಲೂ ಭಾಗಿಯಾಗಿದ್ದ ಅವರು, ಸ್ನೇಹಿತ ಕೆ.ರಾಮದಾಸ್ ಅವರೊಂದಿಗೆ ಸೇರಿ ಜಯ ಪ್ರಕಾಶ್ ನಾರಾಯಣರನ್ನು ಕರ್ನಾಟಕಕ್ಕೂ ಕರೆತರುವ ಮೂಲಕ ಹೋರಾಟವನ್ನು ವಿಸ್ತರಿಸುವಲ್ಲಿ ಪ.ಮಲ್ಲೇಶ್ ಶ್ರಮಿಸಿದ್ದರು. ಚಾಮಲಾಪುರ ಉಷ್ಣಸ್ಥಾವರವನ್ನು ವಿರೋಧಿಸಿ ನಡೆದ ಹೋರಾಟದಲ್ಲೂ ಪ್ರಮುಖ ಪಾತ್ರ ವಹಿಸಿದ್ದ ಅವರು ಕೆಲವು ವರ್ಷಗಳ ಹಿಂದೆ ಸಮಾನ ಮನಸ್ಕರೊಂದಿಗೆ ಸೇರಿ 'ದ್ವೇಷ ಬಿಟ್ಟು–ದೇಶ ಕಟ್ಟು' ರಾಜ್ಯಮಟ್ಟದ ಚಳುವಳಿ ನಡೆಸಿದ್ದರು. ಕನ್ನಡ ಕ್ರಿಯಾ ಸಮಿತಿಯಲ್ಲಿ ಕೊನೆವರೆಗೂ ಸಕ್ರಿಯರಾಗಿದ್ದರು.

ರಾಜಕೀಯ ನಂಟು: ಸಿದ್ದರಾಮಯ್ಯನವರ ಅತ್ಯಾಪ್ತರಾಗಿದ್ದ ಪ.ಮಲ್ಲೇಶ್ ಅವರು 1989ರ ಸಂಸತ್ ಚುನಾವಣೆಯಲ್ಲಿ ಜನತಾದಳದಿಂದ ಸ್ಪರ್ಧಿಸಿ 1,31,905 ಮತಗಳೊಂದಿಗೆ 3ನೇ ಸ್ಥಾನ ಪಡೆದಿದ್ದರು. ಆ ಚುನಾವಣೆಯಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಜಯ ಗಳಿಸಿದ್ದರು. ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಸೇರಿದಂತೆ ಅನೇಕ ರಾಜಕೀಯ ನಾಯಕರು, ಸಾಹಿತಿಗಳು, ಕನ್ನಡಪರ ಹೋರಾಟಗಾರರ ನಿಕಟ ಸಂಪರ್ಕ ಹೊಂದಿದ್ದರು. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸುನೀಲ್‌ಬೋಸ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಂ, ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ರಾಜ್ಯ ರೈತ ಸಂಘ, ಜನಮನ ಸಂಸ್ಥೆ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಕನ್ನಡ ಚಳವಳಿಗಾರ ತಾಯೂರು ವಿಠಲಮೂರ್ತಿ ಸೇರಿದಂತೆ ಹಲವರು ಪ.ಮಲ್ಲೇಶ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

> “ಹಿರಿಯ ಸಮಾಜವಾದಿ ಚಿಂತಕ, ಪ್ರಗತಿಪರ ಹೋರಾಟಗಾರ ಮತ್ತು ನನ್ನ ಬಹುಕಾಲದ ಆತ್ಮೀಯ ಸ್ನೇಹಿತ ಪ.ಮಲ್ಲೇಶ್ ಅವರ ಹಠಾತ್ ನಿಧನದಿಂದ ಆಘಾತಕ್ಕೀಡಾಗಿದ್ದೇನೆ. ಅವರ ಸಾವು ಕರ್ನಾಟಕದ ಪಾಲಿಗೆ ತುಂಬಲಾರದ ನಷ್ಟ ಮಲ್ಲೇಶ್ ಅವರ ಕುಟುಂಬದವರು ಮತ್ತು ಅಭಿಮಾನಿಗಳ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ. –ಸಿದ್ದರಾಮಯ್ಯ



ಹುಟ್ಟು ಹೋರಾಟಗಾರರು...



ಸಮಾಜದ ಕಟ್ಟಕಡೆಯ ವ್ಯಕ್ತಿಯ ನೋವಿಗೂ ಸದಾ ಸ್ಪಂದಿಸುತ್ತಿದ್ದ, ಸಾಮಾನ್ಯ ಜನತೆ ಎದುರಿಸುವ ಬವಣೆ, ಜೀವನೋಪಾಯದ ಜ್ವಲಂತ ಸಮಸ್ಯೆಗಳ ಬಗ್ಗೆ ಸದಾ ತುಡಿಯುತ್ತಿದ್ದ, ದುಡಿಯುವ ವರ್ಗ, ಶೋಷಿತ ಸಮುದಾಯ, ಮಹಿಳೆಯರು ಮತ್ತು ಅವಕಾಶ ವಂಚಿತರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ತಲ್ಲಣಗಳಿಗೆ ಸದಾ ಮಿಡಿಯುತ್ತಿದ್ದ, ವ್ಯವಸ್ಥೆಯ ವೈಫಲ್ಯ, ಲೋಪದೋಷಗಳ ವಿರುದ್ಧ, ಆಳುವವರ ದಬ್ಬಾಳಿಕೆ, ಆಡಳಿತಾರೂಢ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಸದಾ ಸಿಡಿದೇಳುತ್ತಿದ್ದ ಒಂದು ದಿಟ್ಟ ಜನಪರ ಧ್ವನಿ ಮೈಸೂರಿನಲ್ಲಿ ಇಂದು (19 ಜನವರಿ 2023) ಮಧ್ಯಾಹ್ನ ಮೂರರ ವೇಳೆಗೆ ಶಾಶ್ವತ ಮೌನಕ್ಕೆ ಜಾರಿಬಿಟ್ಟಿತು.

ಚಿರಯುವಕ ಎನ್ನಬಹುದಾದ 89ರ ವಯೋಮಾನದ ಹೋರಾಟದ ಕಲಿ, ಗಾಂಧಿವಾದಿ, ಸಮಾಜವಾದಿ, ಕನ್ನಡದ ಧ್ವನಿ, ನ್ಯಾಯ ನಿಷ್ಠುರತೆ, ಪ್ರಾಮಾಣಿಕ ಬದುಕು, ಸಮಾನತೆ ಆಶಯಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಮೈಸೂರಿನ ಎಲ್ಲ ರೀತಿಯ ಜನಾಂದೋಲನಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದ, ಜನಸಾಮಾನ್ಯರೊಂದಿಗೆ ಅತೀಸಾಮಾನ್ಯರಾಗಿದ್ದ ಹಿರಿಯ ಚೇತನ ಪ.ಮಲ್ಲೇಶ್ ಈಗ ನಮ್ಮ ನಡುವೆ ಇಲ್ಲ ಎಂದು ಹೇಳಲು ಬಹಳ ಕಷ್ಟ.

ಅವರ ಕನ್ನಡಪರ ನಿಲುವಿನ ಫಲವಾಗಿಯೇ ಇಂದು ಪಿಯುಸಿವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ನೃಪತುಂಗ ಕನ್ನಡ ಶೈಕ್ಷಣಿಕ ವಿದ್ಯಾ ವಿಕಾಸ ಸಂಸ್ಥೆ ಪಾತ್ರವಾಗಿದೆ. ಇದು ಅವರಲ್ಲಿದ್ದ ತಾತ್ವಿಕ ನಿಲುಮೆಗೆ ಬಹುದೊಡ್ಡ ಸಾಕ್ಷಿಯೂ ಹೌದು. ಮಾನವೀಯ ಮೌಲ್ಯ, ಸಾಮಾಜಿಕ ಸಮಾನತೆ, ನೈತಿಕತೆಯನ್ನು ಸದಾ ಎತ್ತಿಹಿಡಿಯುತ್ತಿದ್ದ ಮಲ್ಲೇಶ್ ಅವರ ಹೋರಾಟದ ಬದುಕನ್ನು ದಾಖಲಿಸಿದರೆ ಒಂದು ಬೃಹತ್ ಗ್ರಂಥವೇ ಆಗಬಹುದು.

ಯಾವುದೇ ರೀತಿಯ ಅನ್ಯಾಯದ ವಿರುದ್ಧ, ಅನ್ಯಾಯ ಎಸಗಿದವರು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ ತಟ್ಟನೆ ಸಿಡಿದೇಳುತ್ತಿದ್ದ ಹಠಮಾರಿ ಸ್ವಭಾವದ ಹಿರಿಯ ಸಮಾಜವಾದಿ ಪ.ಮಲ್ಲೇಶ್. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಪ್ರಗತಿಪರ ಹೋರಾಟಗಾರರಿಗೆ, ಮಹಿಳಾ ಹೋರಾಟಗಾರರ ಬೆಂಬಲಕ್ಕೆ ನಿಂತು ಶಕ್ತಿ ತುಂಬುತ್ತಿದ್ದ ಅವರು, ದುಡಿಯುವ ವರ್ಗಗಳಿಗೆ ಹೋರಾಟದ ಪ್ರತಿಧ್ವನಿ ಯಾಗಿಯೇ ತಮ್ಮ ಪಯಣವನ್ನು ಮುಗಿಸಿದ್ದಾರೆ. ಒಬ್ಬ ವ್ಯಕ್ತಿಯ ಅಗಲಿಕೆ ಆ ಕುಟುಂಬದಲ್ಲಿ ನಿರ್ವಾತ ಸೃಷ್ಟಿಸುತ್ತದೆ. ಕೆಲ ವರುಷಗಳು ಸಂದ ನಂತರ ವಿಸ್ಮೃತಿಗೆ ಜಾರುವುದೂ ಮಾನವ ಸಹಜ. ಆದರೆ ಕೆಲವರ ಅಗಲಿಕೆಯ ನೋವು ದೀರ್ಘಕಾಲದ್ದು. ಹಾಗೆ ನಮ್ಮ ನಡುವಿನ ದಿಟ್ಟ ಜನಪರ ದನಿಯಾಗಿದ್ದ ಪ.ಮಲ್ಲೇಶ್ ಅವರ ಅಗಲಿಕೆಯಿಂದ ಮೈಸೂರಿನಲ್ಲಿ ಸೃಷ್ಟಿಯಾಗಿರುವ ನಿರ್ವಾತ ಬಹುಶಃ ಶಾಶ್ವತವಾಗಿ ಉಳಿಯುವಂತದ್ದು. ತುಂಬಲಾರದ ನಷ್ಟ ಎನ್ನುವ ಕ್ಲೀಷೆಯನ್ನು ಮೀರಿದ ಭಾವ.

ಪ.ಮಲ್ಲೇಶ್ ಅವರ ಅಗಲಿಕೆ ಮೈಸೂರಿನ ಜನಪರ ಚಳುವಳಿಗಳಗಾರರ ಪಾಲಿಗೆ, ಅವರ ಆದರ್ಶದಿಂದ ಬಹಳಷ್ಟು ಕಲಿಯಬಹುದಾಗಿದ್ದ ಮುಂದಿನ ತಲೆಮಾರಿನ ಪಾಲಿಗೆ, ಬಹುದೊಡ್ಡ ನಷ್ಟ, ನಿಲುವಿಗೆ ವಿರುದ್ಧವಾಗಿ ಎಂದೂ ರಾಜಿಯಾಗದ ಪ.ಮಲ್ಲೇಶ್ ಎಲ್ಲರಿಗೂ ಆದರ್ಶ. ನುಡಿದಂತೆ ನಡೆದು, ಹೋರಾಟಗಳಲ್ಲೇ ಜೀವ ಸವೆಸಿದ ಹಿರಿಯ ನಾಯಕ ಕೊನೆಗೂ ಜವರಾಯನೊಂದಿಗೆ ರಾಜಿಯಾಗಿದ್ದಾರೆ. ಆದರೆ ಇದು ಪ್ರಕೃತಿ ಸಹಜ, ಸಹಿಸಿಕೊಳ್ಳಲೇಬೇಕು. ಪ.ಮಲ್ಲೇಶ್ ಅವರ ಆದರ್ಶ ಮತ್ತು ಹೋರಾಟದ ಸ್ಫೂರ್ತಿಯನ್ನು ನಮ್ಮೊಳಗೆ ಹಿಡಿದಿಟ್ಟುಕೊಳ್ಳುವ ಮೂಲಕ ನೈಜ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸೋಣ.

● ನಾ ದಿವಾಕರ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಶುಕ್ರವಾರ 20 ಜನವರಿ 2023

ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜ.19– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕಾಮಗಾರಿ ಕೆಲಸದ ನಿಮಿತ್ತ ಜನವರಿ 21, 23, 25, 27, 29 ಮತ್ತು 31ರಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಮಾರ್ಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಗೋಪಾಲಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಉದ್ಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಧನಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಹಾರೋಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಮದ್ದೂರು, ಮದ್ದೂರುಹುಂಡಿ, ಚುಂಚರಾಯನಹುಂಡಿ, ಎಸ್.ಕಲ್ಲಹಳ್ಳಿ, ಸೋಲಿಗರ ಕಾಲೋನಿ, ಗುಮ್ಮಚನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿವೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.





20ನೇ ವರ್ಷದ ಸವಿನೆನಪು



ಯಜಮಾನ್ ಶ್ರೀ ಪಾಪಣ್ಣ ಶ್ರೀಮತಿ ಮರಿಯಮ್ಮ

ಚಾಮಯ್ಯನ ದೇವಣ್ಣನ ಮಕ್ಕಳು
ಕೆ.ಜಿ. ಕೊಪ್ಪಲು, ಕುವೆಂಪುನಗರ, ಮೈಸೂರು
ಸದಾ ನಿಮ್ಮ ಸ್ಮರಣೆಯಲ್ಲಿ
ಮಗ ವಿಕ್ರಾಂತ್ ಪಿ.ದೇವೇಗೌಡ, ಸೊಸೆ
ಶ್ರೀಮತಿ ಲಕ್ಷ್ಮಿ ದೇವೇಗೌಡ ಹಾಗೂ ಕುಟುಂಬವರ್ಗ





PUBLIC NOTICE

Under Instructions from my client PRIYA K J No.41, Kadambini Shakthinagar, Sathagalli (MUDA), Mysore, Karnataka. I am giving public notice as follows.

My client is going to purchase the site "the Presently comes under Mysore City Corporation Division office 9 of Mysore City, Nazarbad Mohall, Sathagalli Extension, Mysore City Corporation, Khata No.09 P.R.K.T 10/2014-15, Site No.13 Bounded On:- East By : Site No.07, West By : Private Property, North By : Road, South By : Private Property.

If anybody is having any objection for the same you have to contact my client within 5 days. Clients Mobile No. 9071965198

Sd/- Venkatesha Patawardhan
Advocate & Notary
#2359/15, 12th Cross,
Basaveshwara Road, K R
Mohalla, Mysuru - 570004.
Mob.: 9845565329
Place: Mysore

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಶಶಿಕಲಾ

ಇವರು ದಿನಾಂಕ: 09.01.2023 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 20.01.2023 ಶುಕ್ರವಾರ ರಾತ್ರಿ 8 ಗಂಟೆಗೆ ಮೃತರ ಸ್ವಗೃಹ #1616, 7ನೇ ಕ್ರಾಸ್, ಅಶೋಕಪುರಂ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀ ದೊರೆಸ್ವಾಮಿರವರು, ಕುಟುಂಬ ವರ್ಗದವರು ಮತ್ತು ಬಂಧುಮಿತ್ರರು.

ಭೋಜನ: ದಿನಾಂಕ 22.01.2023 ಭಾನುವಾರ, ಮ: 1 ಗಂಟೆಗೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ/ಕರಾಸಾ/ಚಾನವಿ/ಸಂ/ವಾ/2029/2022–23 ದಿ: 18.01.2023

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 06/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ.ನರಸೀಪುರ, ಗುಂಡ್ಲುಪೇಟೆ, ಸುತ್ತೂರು, ಹನೂರು, ತೆರಕಣಾಂಬಿ, ನಂಜನಗೂಡು ಮತ್ತು ಕೊಳ್ಳೇಗಾಲ ನೂತನ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಿಗೆ ಮಳಿಗೆ ನಡೆಸಲು ಹಾಗೂ ಕೊಳ್ಳೇಗಾಲ ನೂತನ ಬಸ್ ನಿಲ್ದಾಣದ ಮೊದಲ ಹಾಗೂ ಎರಡನೇ ಅಂತಸ್ತಿಗೆ ಏಕೈಕ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್/ಸಂಧಾನ ಪ್ರಕಟಣೆ ಸಂ.06/2022–23 ದಿನಾಂಕ:18.01.2023 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಕಂ ಹರಾಜು ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ / ಮ್ಯಾನ್ಯುವಲ್ ಟೆಂಡರ್ ಕಂ ಹರಾಜು ಹಾಗೂ ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1. ಸಂಧಾನ ಅರ್ಜಿ ಪಡೆಯಲು ಕಡೆಯ ದಿನಾಂಕ :–08.02.2023 ಸಮಯ:– ಕಛೇರಿ ಅವಧಿ
2. ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸ್ವೀಕರಿಸಲು ಕಡೆಯ ದಿನಾಂಕ:–08.02.2023 ಸಮಯ:– ಕಛೇರಿ ಅವಧಿ
3. ಸಂಧಾನ ಸಭೆಯ ದಿನಾಂಕ :– 09.02.2023 ಸಮಯ:– ಮಧ್ಯಾಹ್ನ:12.30 ಗಂಟೆಗೆ

1. ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ ಡಿ.ಡಿ ಸಲ್ಲಿಸಲು ಕಡೆ ದಿನಾಂಕ:–14.02.2023 ಸಮಯ: ಕಛೇರಿ ಅವಧಿ
2. ಇ–ಟೆಂಡರ್ & ಮ್ಯಾನ್ಯುವಲ್ ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ :–14.02.2023 ಸಮಯ:– ಕಛೇರಿ ಅವಧಿ
3. ಇ–ಟೆಂಡರ್ ತೆರೆಯುವ ದಿನಾಂಕ :–15.02.2023 ಸಮಯ:– ಬೆಳಗ್ಗೆ : 11.30 ಗಂಟೆಗೆ
4. ಮ್ಯಾನ್ಯುವಲ್ ಟೆಂಡರ್ ಕಂ ಹರಾಜು ಸಭೆಯ ದಿನಾಂಕ :– 15.02.2023 ಸಮಯ:– ಮಧ್ಯಾಹ್ನ:12.30 ಗಂಟೆಗೆ

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ)ರವರನ್ನು ಸಂಪರ್ಕಿಸಲು ಕೋರಲಾಗಿದೆ.(ದೂ:–7760990302, 7760990311).

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾನಿಗಮ : ಚಾಮರಾಜನಗರ ವಿಭಾಗ

ವಾ.ಸಾ.ಸಂ.ಇ/ವಾಪ್ರ/4181/ಆಕಾರ್/21–22

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿದ್ಯುತ್ ವಿಭಾಗ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು–570004.

ಸಂಖ್ಯೆ: ಮೈನಪಾ/ಕಾಇಂ(ವಿ)/ಟೆಂ.ಪ.ಪ್ರ/ಟಿ.ಎನ್–16/2022–23 ದಿನಾಂಕ: 17.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ–16
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್–2000 ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆಡಬ್ಲ್ಯೂ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮುಖಾಂತರ ವಿವಿಧ ಅನುದಾನಗಳಡಿ ಟೆಂಡರ್ ಆಹ್ವಾನಿಸಲಾಗಿದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಹಾಗೂ ಇ–ಪೋರ್ಟಲ್ ಮುಖಾಂತರ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ವಿವರ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ	ಟೆಂಡರ್‌ನ ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ ದಿನಾಂಕ
1	ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ)	01	3.20	17.01.2023	24.01.2023	25.01.2023

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/898/2022–23


ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ನವದೆಹಲಿ – 110 029, ಸಫ್ದರ್‌ಜಂಗ್ ಎನ್‌ಕ್ಲೇವ್, ಮೊದಲನೇ ಮಹಡಿ, ಮನೆ ನಂ. ಬಿ4/33 ರಲ್ಲಿ ವಾಸವಾಗಿರುವ ಶ್ರೀ ಮಹೇಶ್ ಕುಮಾರ್ ರವರ ಧರ್ಮಪತ್ನಿ ಶ್ರೀಮತಿ. ಅಂಜಲಿ ಕುಮಾರ್ (Aadhaar No. : 4749 4411 4071) ಮತ್ತು ನವದೆಹಲಿ – 110 041, ಪಶ್ಚಿಮ ವಿಹಾರ್, ಗುರು ಹರ್ ಕಿಶನ್ ನಗರ, ಮೊದಲನೇ ಮಹಡಿ, ಮನೆ ನಂ. M-345 ರಲ್ಲಿ ವಾಸವಾಗಿರುವ ಶ್ರೀ. ನರೇಶ್ ಚಂದ್ ಗಾರ್ಗ್ ರವರ ಮಗನಾದ ಶ್ರೀ ರೋಹಿತ್ ಗಾರ್ಗ್ (Aadhaar No. : 2874 4364 6949) ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಳಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮಕ್ಕೆ ಸೇರಿದ ಮೈಸೂರು ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ALN (1) CR.88/2013-14 ದಿನಾಂಕ: 31–01–2014 ರ ಪ್ರಕಾರ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡಿರುವ ಸರ್ವೆ ನಂ. 491/5, ವಿಸ್ತೀರ್ಣ 0–30 ಗುಂಟೆ ಜಮೀನು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ. 491/1, 2, ಉತ್ತರಕ್ಕೆ : ಸರ್ವೆ ನಂ. 491/6, ದಕ್ಷಿಣಕ್ಕೆ : ಸರ್ವೆ ನಂ.491/3.

ಸಹಿ/– **ಕೆ.ಎನ್.ಮಹಾದೇವಸ್ವಾಮಿ,**
ಬಿ.ಎಸ್.ಸಿ, ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. ಎಫ್–1 ಮತ್ತು 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು – 570 004.
Mob.No.: 9448222522,
Office No.: 0821-4287998
ದಿನಾಂಕ: 22–12–2022



43 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ರಮ್ಮನಹಳ್ಳಿ ಸಮಗ್ರ ಅಭಿವೃದ್ಧಿ ವಿಚಾರದಲ್ಲಿ
ನುಡಿದಂತೆ ನಡೆದಿರುವೆ; ಶಾಸಕ ಜಿಟಿಡಿ



ಮೈಸೂರು, ಜ.19(ಎಸ್‌ಬಿಡಿ)– ತಾಲೂಕಿನ ರಮ್ಮನಹಳ್ಳಿಯ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ಮಾತು ಕೊಟ್ಟಂತೆ ಹಲವು ಯೋಜನೆಗಳಿಗೆ ಅನುದಾನ ಬಿಡುಗಡೆಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮದ ಮುಖಂಡರ ಕೋರಿಕೆಯಂತೆ ಸ್ಮಶಾನದ ಅಭಿವೃದ್ಧಿಗೆ ಅನುದಾನ ಮಂಜೂರಾಗಿದ್ದು, ಜಾಗದ ಖಾತೆ ಆದ ಬಳಿಕ ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಹೀಗೆ ಹಲವಾರು ಯೋಜನೆಗಳಿಗೆ ಅನುದಾನ ಬಿಡುಗಡೆಯಾಗಿದ್ದು, ಕಳೆದ ಬಾರಿ ಕೊಟ್ಟ ಮಾತಿನಂತೆ ಕೆಲಸ ಮಾಡಿದ್ದೇನೆ. ಮುಂದೆಯೂ ರಮ್ಮನಹಳ್ಳಿ ಗ್ರಾಮದ ಜನತೆ ನಮ್ಮೊಂದಿಗೆ ಇರಬೇಕು ಎಂದು ಕೇಳಿಕೊಂಡರು.

ಮಹದೇಶ್ವರ ದೇವಸ್ಥಾನ ನಿರ್ಮಾಣಕ್ಕೆ 60 ಲಕ್ಷ ರೂ. ಮಂಜೂರಾಗಿದ್ದು ಕಾಮಗಾರಿಗೆ ಇಂದು ಚಾಲನೆ ನೀಡಲಾಗಿದೆ. ಸ್ಮಶಾನದಲ್ಲಿ ಕುಡಿಯುವ ನೀರು, ಆಸನ, ಮಳೆ–ಬಿಸಿಲಿನಿಂದ ರಕ್ಷಣೆಗೆ ವ್ಯವಸ್ಥೆ ಮಾಡಲಾಗುವುದು. ಗರಡಿಮನೆ, ದೇವಾಲಯ ಅಭಿವೃದ್ಧಿಗೂ ಅನುದಾನ ನೀಡಲಾಗಿದೆ. ಗ್ರಾಮದ ಗಲ್ಲಿ ಗಲ್ಲಿಗೂ ಡಾಂಬರೀಕರಣ ಮಾಡಲಾಗಿದೆ. ಗ್ರಾಮದಿಂದ ಮೈಸೂರಿನವರೆಗೂ ಉತ್ತಮ ರಸ್ತೆ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲೂ ಹೀಗೆಯೇ ಗ್ರಾಮದ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.



ಮಾದರಿ ಪ.ಪಂಚಾಯ್ತಿ ಆಶಯ: ಗ್ರಾಮದ ಒಳಚರಂಡಿ ಮುಂದುವರಿದ ಕಾಮಗಾರಿಗೆ 1.85 ಕೋಟಿ ರೂ. ಮಂಜೂರಾಗಿದ್ದು, ಸದ್ಯ ಟೆಂಡರ್ ಹಂತದಲ್ಲಿದೆ. 1.75 ಕೋಟಿ ರೂ. ವೆಚ್ಚದಲ್ಲಿ 5 ಲಕ್ಷ ಲೀಟರ್ ಟ್ಯಾಂಕ್ ನಿರ್ಮಾಣ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಕ್ರಮ ಕೈಗೊಳ್ಳಲಾಗಿದೆ. ರಮ್ಮನಹಳ್ಳಿ ಪಟ್ಟಣ ಪಂಚಾಯ್ತಿಯಾಗಿ ರೂಪುಗೊಂಡ ನಂತರ ಹೆಚ್ಚು ಅನುದಾನ ತಂದಿದ್ದೇನೆ. ಮುಂದಿನ 2–3 ವರ್ಷಗಳಲ್ಲಿ ಮಾದರಿ ಪಟ್ಟಣ ಪಂಚಾಯಿತಿಯನ್ನಾಗಿ ಅಭಿವೃದ್ಧಿಪಡಿಸುವ ಆಶಯವಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. 2006ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆ ನಡೆದಾಗ ನಾನು ಹುಣಸೂರು ಕ್ಷೇತ್ರದ ಶಾಸಕನಾಗಿದ್ದೆ. ಆದರೆ, ಚಾಮುಂಡೇಶ್ವರಿ ಕ್ಷೇತ್ರದ ಜನರ ಸಂಪರ್ಕ, ವಿಶ್ವಾಸ ಮತ್ತಷ್ಟು ಗಟ್ಟಿಯಾಗಿತ್ತು. ಹಾಗಾಗಿ ಕೈ ಸಾಲ ಮಾಡಿ ವ್ಯಾಪಾರ ಮಾಡುತ್ತಿದ್ದವರಿಗೆ ನೆರವಾಗಲು ನಿರ್ಧರಿಸಿ, ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರಲ್ಲಿ ಮನವಿ ಮಾಡಿ, ವ್ಯಾಪಾರಿಗಳಿಗೆ ಸರ್ಕಾರದಿಂದ 5 ಸಾವಿರ ರೂ. ಧನಸಹಾಯ ಸಿಗುವಂತೆ ಮಾಡಿದ್ದೆ ಎಂದು ಸ್ಮರಿಸಿಕೊಂಡರು.

ಅದ್ಧೂರಿ ಸ್ವಾಗತ: ಇದಕ್ಕೂ ಮುನ್ನ ಗ್ರಾಮಸ್ಥರು ಶಾಸಕ ಜಿ.ಟಿ.ದೇವೇಗೌಡರಿಗೆ ಪೂರ್ಣಕುಂಭ, ಆರತಿ ಎತ್ತಿ ಅದ್ಧೂರಿ ಸ್ವಾಗತದೊಂದಿಗೆ ಬರಮಾಡಿಕೊಂಡರು. ಮುಖ್ಯರಸ್ತೆಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಂಭ್ರಮಿಸಿದರು. ಈ ವೇಳೆ ಪಟಾಕಿ ಸದ್ದು, ಜೈಕಾರ ಮುಗಿಲು ಮುಟ್ಟಿತ್ತು. ಯುವ ಸಮೂಹದ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಸಮಾರಂಭದಲ್ಲಿ ಜೆಡಿಎಸ್ ಮುಖಂಡರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್ ಗೌಡ, ಜಿಪಂ. ಸದಸ್ಯರಾದ ನಾಗನಹಳ್ಳಿ ದಿನೇಶ್, ಹಿನಕಲ್ ರಾಜಣ್ಣ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತದಾರರೇ ನಾಯಕರು

ಮೈಸೂರು, ಜ.19(ಜಿಎ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮತದಾರರೇ ನಾಯಕರು ಎಂದು ಶಾಸಕ ಜಿ.ಟಿ.ದೇವೇಗೌಡರು ಹೇಳಿದರು. ರಮ್ಮನಹಳ್ಳಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪ್ರಬಲ ಅಭ್ಯರ್ಥಿ, ಪ್ರಬಲ ನಾಯಕತ್ವ ಎಲ್ಲಾವೂ ಇಲ್ಲಿನ ಮತದಾರರೇ ಆಗಿದ್ದಾರೆ. ಅಬ್ಬರದ ಪ್ರಚಾರ ಮಾಡದೇ ಅಭಿವೃದ್ಧಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಆದ್ದರಿಂದಲ್ಲೇ ಜನ ಇಷ್ಟು ಪ್ರೀತಿ ವಿಶ್ವಾಸ ತೋರುತ್ತಿದ್ದಾರೆ. ಯಾರು ಕೆಲಸ ಮಾಡಿಲ್ಲ ಎಂದು ಹೇಳುತ್ತಿದ್ದಾರೋ ಅವರು ಗ್ರಾಮಗಳಿಗೆ ಭೇಟಿ ನೀಡಿದರೆ ಸತ್ಯಾಂಶ ತಿಳಿಯುತ್ತದೆ ಎಂದರು.

ಹೆಚ್.ಡಿ.ದೇವೇಗೌಡರ ಆಶೀರ್ವಾದದಿಂದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ನಾಯಕತ್ವದಲ್ಲಿ ಪಂಚರತ್ನ ರಥಯಾತ್ರೆ ಯಶಸ್ವಿಯಾಗಿ ನಡೆಯುತ್ತಿದೆ. ಹಗಲು–ರಾತ್ರಿಯೆನ್ನದೆ ಲಕ್ಷಾಂತರ ಜನ ಆಶೀರ್ವದಿಸುತ್ತಿದ್ದಾರೆ. ಮತ್ತೆ ನೀವು ಮುಖ್ಯಮಂತ್ರಿಯಾಗ ಬೇಕೆಂದು ಹಾರೈಸುತ್ತಿದ್ದಾರೆ. ನಮ್ಮ ಪಕ್ಷದಲ್ಲಿ ನಾಯಕತ್ವದ ಗೊಂದಲವಿಲ್ಲ. ಹಾಗಾಗಿ ಜನ ಪಕ್ಷದ ಮೇಲೆ ವಿಶ್ವಾಸ ವಿಟ್ಟಿದ್ದಾರೆ ಎಂದರು. ಸಿದ್ದರಾಮಯ್ಯ ಅವರು ಸೋತಾಗ ನಾನು ಲಘುವಾಗಿ ಮಾತನಾಡಿಲ್ಲ. ಬಾದಾಮಿ ಕ್ಷೇತ್ರದ ಫಲಿತಾಂಶದ ಬಗ್ಗೆ ಮಾಧ್ಯಮದವರು ಪ್ರತಿಕ್ರಿಯೆ ಕೇಳಿದಾಗ ಸಿದ್ದರಾಮಯ್ಯರಂತ ನಾಯಕರು ಗೆಲ್ಲಬೇಕು ಎಂದು ಹೇಳಿದ್ದೆ. ನನಗೆ ಯಾರ ಮೇಲೂ ವೈಯಕ್ತಿಕ ದ್ವೇಷವಿಲ್ಲ ಎಂದು ಹೇಳಿದರು.

ಕಾದು ನೋಡಿ: ಕಾಂಗ್ರೆಸ್ ಸಮಾವೇಶದ ಪೋಸ್ಟರ್‌ಗಳಲ್ಲಿ ಬೆಳವಾಡಿ ಶಿವಮೂರ್ತಿ ಅವರ ಬಾವಚಿತ್ರವಿರುವ ಬಗ್ಗೆ ಪ್ರತಿಕ್ರಿಯಿಸಿದ ಜಿಟಿಡಿ, ನಾಳೆವರೆಗೂ ಕಾದು ನೋಡಿ ಎಂದಷ್ಟೇ ಹೇಳಿದರು.

ಸಾರಿಗೆ ನೌಕರರು ನ್ಯಾಯಯುತ ಬೇಡಿಕೆಗೆ ಪ್ರತಿಭಟಿಸಿದ್ದಕ್ಕೆ ಚಿತ್ರಹಿಂಸೆ

●ಹಾಲಿ, ಮಾಜಿ ಶಾಸಕರ ಖಂಡನೆ ●ಕೆಎಸ್‌ಆರ್‌ಟಿಸಿ ಶ್ರೀ ಕನಕದಾಸ ನೌಕರರ ಸಂಘದಿಂದ ಕನಕ ಜಯಂತಿ ಆಚರಣೆ



ಮೈಸೂರು,ಜ.19(ಎಸ್‌ಪಿಎನ್)–ವೇತನ ಪರಿಷ್ಕರಣೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದ ಕೆಎಸ್‌ಆರ್‌ಟಿಸಿ ನೌಕರರಲ್ಲಿ ಹಲವರನ್ನು ಕೆಲಸದಿಂದಲೇ ವಜಾ, ಅಮಾನತು, ಎಫ್‌ಐಆರ್ ದಾಖಲಿಸಿ ಚಿತ್ರಹಿಂಸೆ ನೀಡುತ್ತಿರುವುದು ಅಕ್ಷಮ್ಯ ಅಪರಾಧ ಎಂದು ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕರ್ನಾಟಕ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ರಾಜ್ಯ ಸರ್ಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು.

ಮೈಸೂರು ಕುವೆಂಪುನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಕೆಎಸ್‌ಆರ್‌ಟಿಸಿ ಶ್ರೀ ಕನಕದಾಸ ನೌಕರರ ಸಂಘ ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ ಕನಕದಾಸರ 535ನೇ ಜಯಂತ್ಯೋತ್ಸವದ ಅಂಗವಾಗಿ ರಾಯಣ್ಣ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡಕ್ಕೆ ಟ್ರೋಫಿ ವಿತರಣೆ ಹಾಗೂ ನಿವೃತ್ತ ನೌಕರರನ್ನು ಅಭಿನಂದಿಸಿ, ಅವರು ಮಾತನಾಡಿದರು.

ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಹೇಳಿಕೆ: ಕೆಎಸ್‌ಆರ್‌ಟಿಸಿ ನೌಕರರು ವೇತನ ಪರಿಷ್ಕರಣೆಗೆ ಒತ್ತಾಯಿಸಿ ಹಾಗೂ ದೌರ್ಜನ್ಯ ಖಂಡಿಸಿ 2021ರ ಏಪ್ರಿಲ್‌ನಲ್ಲಿ ಸುಮಾರು 21 ದಿನಗಳ ಕಾಲ ಪ್ರತಿಭಟನೆ ನಡೆಸಿದ್ದರು. ಇದನ್ನೇ ನೆಪವಾಗಿಟ್ಟುಕೊಂಡ ರಾಜ್ಯ ಸರ್ಕಾರ, ಸಾವಿರಾರು ಮಂದಿ ನೌಕರರ ಅಮಾನತು, ವಜಾ ಮಾಡಿದರೆ, ಕೆಲವರ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಈ ಪ್ರಕರಣಗಳನ್ನು ಮಾನವೀಯ ಹಿನ್ನೆಲೆಯಲ್ಲಿ ಪರಿಗಣಿಸುವಂತೆ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಮೂಲಕ ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ಕಣ್ಣು, ಕಿವಿ, ಹೃದಯವಿಲ್ಲದ ಸರ್ಕಾರ ಎಂದು ಕಿಡಿಕಾರಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್: ಕೆಎಸ್‌ಆರ್‌ಟಿಸಿ ನೌಕರರು ಪ್ರಸ್ತುತ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸುಧಾರಣೆ ನೆಪದಲ್ಲಿ ಕೆಎಸ್‌ಆರ್‌ಟಿಸಿಯ ಆಸ್ತಿಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದೆ. ಕೊರೊನಾ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ನೌಕರರು, ಅಕ್ಷರಶಃ ನರಕ ಅನುಭವಿಸಿದ್ದಾರೆ. ಈ ಸಾರಿಗೆ ನೌಕರರ ಬೇಡಿಕೆಯನ್ನು ಮಾನವೀಯತೆಯಿಂದ ಪರಿಗಣಿಸದೇ ಏಕಾಏಕಿ ಅವರನ್ನು ಕೆಲಸದಿಂದ ವಜಾ, ಅಮಾನತು ಮಾಡಿ, ನೌಕರ ಬಾಳಲ್ಲಿ ಸರ್ಕಾರ ಚೆಲ್ಲಾಟವಾಡಿದೆ ಎಂದು ಕುಟುಕಿದರು.

ಶಾಸಕ ಅನಿಲ್ ಚಿಕ್ಕಮಾದು: ಕೆಎಸ್‌ಆರ್‌ಟಿಸಿ ನೌಕರರು ಹಗಲು–ರಾತ್ರಿ ಶ್ರಮಪಡದಿದ್ದರೆ, ಸಾರ್ವಜನಿಕರನ್ನು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸುರಕ್ಷಿತವಾಗಿ ಕರೆದುಕೊಂಡು ಹೋಗಲು ಸಾಧ್ಯವೇ ಎಂದು ಪ್ರಶ್ನಿಸಿದ ಶಾಸಕರು, ಗಾಳಿ–ಮಳೆ ಎನ್ನದೆ ದಿನಪೂರ್ತಿ ದುಡಿಯುವ ಶ್ರಮಿಕರ ಬೇಡಿಕೆಯನ್ನು ಈಡೇರಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಸಾರಿಗೆ ಇಲಾಖೆ ಧೋರಣೆಯನ್ನು ಖಂಡಿಸಿದರು.

ಹೆಚ್ಚು ಸಮಯ ಕೆಲಸ ಮಾಡಿ, ಕಡಿಮೆ ಸಂಬಳ ಪಡೆಯುತ್ತಿರುವ ಸಾರಿಗೆ ನೌಕರರ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ, ಸಾರಿಗೆ ನೌಕರರು ಸೇರಿದಂತೆ ಇತರೆ ಇಲಾಖೆಯ ಎಲ್ಲಾ ನೌಕರರ ವಿಶ್ವಾಸಕ್ಕೆ ತೆಗೆದುಕೊಂಡು ಅವರ ಹಕ್ಕುಗಳ ರಕ್ಷಣೆ ಮಾಡಿದ್ದಾರೆ. ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಸರ್ಕಾರಿ ನೌಕರರ ಸಮಸ್ಯೆ ಬಗೆಹರಿಸದೆ ಕಾಲಹರಣ ಮಾಡುತ್ತಿದೆ ಎಂದು ಆರೋಪಿಸಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಸಾರಿಗೆ ನಿಗಮದ ಅಧಿಕಾರಿಗಳಾದ ಬಿ.ಶ್ರೀನಿವಾಸ್, ಕೆ.ಎನ್.ಕೆಂಪಯ್ಯ, ಕಾರ್ಮಿಕ ಮುಖಂಡ ಕೆ.ಎನ್.ಕೃಷ್ಣೇಗೌಡ, ನಗರಪಾಲಿಕೆ ಸದಸ್ಯ ಜೆ.ಗೋಪಿ, ಕೆಎಸ್ ಆರ್‌ಟಿಸಿ ಕನಕದಾಸ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ಕ್ಯಾತನಹಳ್ಳಿ ಪ್ರಕಾಶ್, ಕೋಟೆ ಹುಂಡಿ ಮಹದೇವು, ಕಾರ್ಮಿಕ ಮುಖಂಡರಾದ ಎಂ. ಮಲ್ಲಯ್ಯ, ಶಿವಣ್ಣ, ಹೆಚ್.ಎಂ.ನಾಗರಾಜ ಮೂರ್ತಿ, ಕೆ.ಲೋಕೇಶ್, ಎಂ.ಕುಮಾರ, ಎಸ್.ಡಿ.ರಾಜು, ಮಹದೇವ, ಎಸ್.ರಘು, ಮಹದೇವಸ್ವಾಮಿ, ಬಿ.ಎ.ಮಹೇಶ, ಆರ್.ಶಿವುಕುಮಾರ್, ಎಲ್.ಎಸ್.ವಿಜಯ, ಸಣ್ಣೇಗೌಡ, ಕೆ.ಪ್ರತಿಭಾ, ಟಿ.ಎಂ.ರವಿಚಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು. ಇದೇ ವೇಳೆ ರಾಯಣ್ಣ ಕಪ್ ವಿಜೇತ ತಂಡಕ್ಕೆ ಟ್ರೋಫಿ ವಿತರಿಸಲಾಯಿತು. ಕೆಎಸ್‌ಆರ್‌ಟಿಸಿ ಕನಕದಾಸ ಸಂಘದ ದಿನದರ್ಶಿಕೆ ಬಿಡುಗಡೆ ಗೊಳಿಸಲಾಯಿತು. ಇತ್ತೀಚೆಗೆ ನಿವೃತ್ತರಾದ ಹಲವು ಮಂದಿ ಸಾರಿಗೆ ನೌಕರರನ್ನು ಅಭಿನಂದಿಸಲಾಯಿತು.

13 ಜಾನುವಾರು ರಕ್ಷಣೆ

ಮೈಸೂರು,ಜ.19– ಕಸಾಯಿಖಾನೆಗೆ ಸಾಗಿಸುತ್ತಿದ್ದ 13 ಜಾನುವಾರುಗಳನ್ನು ರಕ್ಷಿಸಿರುವ ಮೇಟಗಳ್ಳಿ ಠಾಣೆ ಪೊಲೀಸರು ಗೂಡ್ಸ್ ವಾಹನ ವಶಪಡಿಸಿಕೊಂಡು ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಮೈಸೂರಿನ ಶಕೀಲ್ ಮತ್ತು ಪಾಲಹಳ್ಳಿ ಗ್ರಾಮದ ಸುರೇಶ್ ಆರೋಪಿತರಾಗಿದ್ದು, ಜ.16ರಂದು ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಮೇಟಗಳ್ಳಿ ಠಾಣೆಯ ಎಎಸ್‌ಐ ಪೊನ್ನಪ್ಪ ಅವರು ತಮ್ಮ ಸಿಬ್ಬಂದಿಯೊಂದಿಗೆ ನಾಗನಹಳ್ಳಿ ಮತ್ತು ಶ್ಯಾದನಹಳ್ಳಿ ಗ್ರಾಮಗಳಲ್ಲಿ ಗಸ್ತು ತಿರುಗುತ್ತಿದ್ದಾಗ ಶ್ಯಾದನಹಳ್ಳಿಯ ವರುಣಾ ಕಾಲುವೆ ಏರಿ ಮೇಲೆ ಬರುತ್ತಿದ್ದ ಗೂಡ್ಸ್ ವಾಹನವನ್ನು (ಕೆಎ 11 ಬಿ6744) ತಡೆದು ಪರಿಶೀಲಿಸಿದಾಗ ಅದರಲ್ಲಿ 13 ಜಾನುವಾರುಗಳು ಪತ್ತೆಯಾಗಿವೆ. ಗೂಡ್ಸ್ ವಾಹನದ ಚಾಲಕ ಸುರೇಶ್(57)ನನ್ನು ವಿಚಾರಣೆಗೊಳಪಡಿಸಿದಾಗ ಈ ಜಾನುವಾರುಗಳನ್ನು ಮೈಸೂರಿನ ಶಕೀಲ್ ಎಂಬಾತ ಕೆಆರ್‌ಎಸ್ ಸಂತೇ ಮಾಳದಲ್ಲಿ ಖರೀದಿಸಿದ್ದು, ಅವುಗಳನ್ನು ಕಸಾಯಿ ಖಾನೆಗೆ ರವಾನಿಸುವ ಸಲುವಾಗಿ ಮೈಸೂರು ರಿಂಗ್ ರಸ್ತೆಯಲ್ಲಿ ಇರುವ ಬೆಲವತ್ತ ಸೇತುವೆ ಬಳಿ ತರಲು ಸೂಚಿಸಿದ್ದ ಎಂದು ಸುರೇಶ್ ಹೇಳಿಕೆ ನೀಡಿದ್ದಾನೆ.

ಅಕ್ರಮ ದಾಸ್ತಾನು: 58.65 ಮೆ.ಟನ್ ಯೂರಿಯಾ ವಶ

ಮಂಡ್ಯ, ಜ.19– ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ದಾಸ್ತಾನು ಮಾಡಿದ್ದ 58.65 ಮೆಟ್ರಿಕ್ ಟನ್ (1173 ಚೀಲಗಳು) ಯೂರಿಯಾ ರಸ ಗೊಬ್ಬರವನ್ನು ಕೃಷಿ ಇಲಾಖೆ ಅಧಿಕಾರಿ ಗಳು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಹೊಣಕೆರೆ ಹೋಬಳಿ, ಚೀಣ್ಯ ಗ್ರಾಮದಲ್ಲಿ ರಮೇಶ್ ಹಾಗೂ ಅವರ ಪುತ್ರ ದರ್ಶನ್ ಎಂಬುವರು ತಮ್ಮ ಜಮೀನಿನಲ್ಲಿರುವ ಕೋಳಿ ಫಾರಂನಲ್ಲಿ ಸರ್ಕಾರದಿಂದ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವ ಯೂರಿಯಾ ಗೊಬ್ಬರವನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಜ.18ರಂದು ದಾಳಿ ನಡೆಸಿದ ಜಂಟಿ ಕೃಷಿ ನಿರ್ದೇಶಕ ವಿ.ಎಸ್. ಅಶೋಕ್, ಉಪ ಕೃಷಿ ನಿರ್ದೇಶಕ ನಾಗರಾಜು, ಮಮತಾ, ಸಹಾಯಕ ಕೃಷಿ ನಿರ್ದೇಶಕರಾದ ಪ್ರತಿಭಾ, ಶ್ರೀಹರ್ಷ, ಜಯರಾಂ ಹಾಗೂ ಕೃಷಿ ಅಧಿಕಾರಿಗಳ ತಂಡ ಕೋಳಿ ಫಾರಂನ ಪಕ್ಕದ ಕೊಟ್ಟಿಗೆಯಲ್ಲಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಂಗ್ರಹಿಸಿದ್ದ 58.65 ಮೆ.ಟನ್ (1173 ಚೀಲಗಳು) ಯೂರಿಯಾ ರಸಗೊಬ್ಬರವನ್ನು ವಶಪಡಿಸಿಕೊಂಡಿದ್ದಾರೆ.



ಅಲ್ಲದೇ ಸದರಿ ಕೋಳಿ ಫಾರಂ ಪರಿಶೀಲಿಸಲಾಗಿ ಸರ್ಕಾರದಿಂದ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವ ಯೂರಿಯಾ ರಸಗೊಬ್ಬರದ ವಿವಿಧ ಕಂಪನಿಯ ಖಾಲಿ ಚೀಲಗಳು ಮತ್ತು ವಿವಿಧ ಬ್ರಾಂಡ್‌ನ ಖಾಲಿ ಚೀಲಗಳು, 2 ಹೊಲಿಗೆ ಯಂತ್ರಗಳು, ಒಂದು ಜನರೇಟರ್ ಹಾಗೂ ದಾರದ ಉಂಡೆಗಳು ಪತ್ತೆಯಾಗಿ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಯಾವುದೇ ವ್ಯಕ್ತಿ ಅನಧಿಕೃತವಾಗಿ ರಸಗೊಬ್ಬರ ದಾಸ್ತಾನು/ ಅಕ್ರಮ ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಶಂಕೆ ಅಥವಾ ಅನುಮಾನ ಬಂದಲ್ಲಿ ರೈತರು ಹಾಗೂ ಸಾರ್ವಜನಿಕರು ಮಂಡ್ಯ ಜಂಟಿ ಕೃಷಿ ನಿರ್ದೇಶಕರು ಅಶೋಕ.ವಿ.ಎಸ್ ಮೊ:8277933600, ಮಂಡ್ಯ ಉಪ ಕೃಷಿ ನಿರ್ದೇಶಕರು ಕೆ.ಮಾಲತಿ ಮೊ: 8277933601, ಪಾಂಡವಪುರ ಉಪ ಕೃಷಿ ನಿರ್ದೇಶಕರು ಹೆಚ್.ಎನ್.ಮಮತ ಮೊ:8277933602, ಮಂಡ್ಯ ಸಹಾಯಕ ಕೃಷಿ ನಿರ್ದೇಶಕರು (ಜಾರಿದಳ) ಪ್ರತಿಭಾ.ಹೆಚ್.ಜಿ ಮೊ: 8277933609, ಸೌಮ್ಯಶ್ರೀ, ಮಂಡ್ಯ ತಾಲೂಕು ಮೊ: 8277933612, ಪರಮೇಶ, ಮದ್ದೂರು ತಾಲೂಕು– ಮೊ:8277933626, ಜಯರಾಮಯ್ಯ, ಮಳವಳ್ಳಿ ತಾಲೂಕು– ಮೊ: 8277933648, ನಿಶಾಂತ್ ಕೀಲಾರ, ಶ್ರೀರಂಗಪಟ್ಟಣ ತಾಲೂಕು– ಮೊ: 8277933656, ಪ್ರಿಯದರ್ಶಿನಿ, ಪಾಂಡವಪುರ ತಾಲೂಕು– ಮೊ:8277933667, ಮಂಜುನಾಥ್, ಕೆ.ಆರ್.ಪೇಟೆ ತಾಲೂಕು– ಮೊ:8277933676, ಜಯರಾಮ, ಬಿ.ಡಿ, ನಾಗಮಂಗಲ ತಾಲೂಕು– ಮೊ: 8277933687 ಮಾಹಿತಿ ನೀಡುವಂತೆ ಮಂಡ್ಯ ಜಂಟಿ ಕೃಷಿ ನಿರ್ದೇಶಕ ಅಶೋಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಮೂರ್ತಿ ಸ್ಪರ್ಧೆಗೆ ಅರ್ಹರಲ್ಲ ಎನ್ನುವುದು ಖಂಡನೀಯ



ಮಳವಳ್ಳಿ, ಡಿ.19– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು, ಎಲ್ಲಿಂದ ಬೇಕಾದರೂ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಅದರಂತೆ ಮಳವಳ್ಳಿ ಕ್ಷೇತ್ರದಲ್ಲಿ ಡಾ. ಮೂರ್ತಿ ಸ್ಪರ್ಧಿಸುವುದಕ್ಕೆ ಯಾರ ಅನುಮತಿಯೂ ಬೇಕಿಲ್ಲ. ಅವರು ಬೇರೆ ಪಕ್ಷದಿಂದ ಬಂದವರು, ಟಿಕೆಟ್ ಪಡೆಯಲು ಅರ್ಹರಲ್ಲ ಎನ್ನುವುದು ಖಂಡನೀಯ ಎಂದು ಜಿಪಂ ಮಾಜಿ ಸದಸ್ಯ ಮಹದೇವಸ್ವಾಮಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಯಾರು, ಎಲ್ಲಿಂದ ಬೇಕಾದರೂ ಸ್ಪರ್ಧಿಸುವ ಅವಕಾಶ ನೀಡಿದ್ದಾರೆ. ಅದರಂತೆ ಡಾ. ಮೂರ್ತಿಯವರು ಕಾಂಗ್ರೆಸ್ ಪಕ್ಷದಲ್ಲಿದ್ದು, ಅವರು ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಕಾಂಗ್ರೆಸ್‌ನ ಕೆಲವು ಮುಖಂಡರು ಡಾ.ಮೂರ್ತಿ ಮಳವಳ್ಳಿ ಕ್ಷೇತ್ರಕ್ಕೆ ಏನು ಕೊಡುಗೆ ನೀಡಿದ್ದಾರೆ. ಅವರು ಬೇರೆ ಪಕ್ಷದಿಂದ ಬಂದವರು, ಅವರು ಟಿಕೆಟ್‌ಗೆ ಅರ್ಜಿ ಹಾಕಲು ಅರ್ಹರಲ್ಲ ಎಂದು ಹೇಳಿರುವುದು ಖಂಡನೀಯ ಎಂದರು.

2008 ರಿಂದ 2013 ರವರೆಗೆ ಮಳವಳ್ಳಿಯಲ್ಲಿ ಕಾಂಗ್ರೆಸ್ ಪಕ್ಷ ಕಟ್ಟಿದವರು ಯಾರು? ಎನ್ನುವ ಬಗ್ಗೆ ಡಾ.ಮೂರ್ತಿ ಬಗ್ಗೆ ಆರೋಪಿಸಿರುವ ಕಾಂಗ್ರೆಸ್ ಮುಖಂಡರು ತಿಳಿದರೆ ಒಳ್ಳೆಯದು. ಆಗ ದೊಡ್ಡಯ್ಯ, ರಮೇಶ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಮಲ್ಲಾಜಮ್ಮ, ಯಮದೂರು ಸಿದ್ದರಾಜು, ಡಾ.ಮೂರ್ತಿ ಎಲ್ಲರೂ ಕಾಂಗ್ರೆಸ್‌ನಲ್ಲಿದ್ದರು. ಆಗ ಬೂತ್ ಮಟ್ಟದಲ್ಲಿ ಕಾಂಗ್ರೆಸ್ ಸದಸ್ಯತ್ವ ಅಭಿಯಾನ, ಕಾಂಗ್ರೆಸ್ ನಡಿಗೆ ಹಳ್ಳಿ ಕಡೆಗೆ ಎಂಬ ಕಾರ್ಯಕ್ರಮಗಳನ್ನು ಡಾ.ಮೂರ್ತಿ ಮಾಡಿದ್ದಾರೆ ಎಂದರು. ಮಳವಳ್ಳಿ ಕ್ಷೇತ್ರದ ಜನರು ಹೊಸಮುಖ ಬಯಸುತ್ತಿದ್ದಾರೆ. ಅದರಂತೆ ಸರಳ, ಸಜ್ಜನಿಕೆಯ ಡಾ.ಮೂರ್ತಿಯವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಬೇಕು. ನಾವು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಪಿಎಂ.ನರೇಂದ್ರ ಸ್ವಾಮಿ, ಡಾ.ಮೂರ್ತಿ, ಮಲ್ಲಾಜಮ್ಮ ಇವರಲ್ಲಿ ವರಿಷ್ಠರು ಯಾರಿಗೆ ಟಿಕೆಟ್ ಕೊಟ್ಟರು ನಾವು ಒಮ್ಮತದಿಂದ ಕೆಲಸ ಮಾಡುತ್ತೇವೆ. ಆದರೆ ಹೈಕಮಾಂಡ್ ನಾಯಕರು ನಿರ್ಧಾರ ತೆಗೆದುಕೊಳ್ಳುವುದಕ್ಕೂ ಮುನ್ನ ಇವರು ಬೇರೆ ಪಕ್ಷದಿಂದ ಬಂದವರು, ಇವರಿಗೆ ಟಿಕೆಟ್ ಕೊಡುವುದು ಸರಿಯಲ್ಲ, ಡಾ. ಮೂರ್ತಿಯವರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಲು ಶ್ರಮಿಸಿದ್ದಾರೆ. ಡಾ. ಮೂರ್ತಿಯವರು ಯಾರು ಎಂಬುದನ್ನು ಮಳವಳ್ಳಿ ಕ್ಷೇತ್ರದ ಮತದಾರರು ತೀರ್ಮಾನ ಮಾಡುತ್ತಾರೆ. ಆದರೆ ಅವರು ಈ ಕ್ಷೇತ್ರಕ್ಕೆ ಯಾರು, ಅರ್ಹತೆ ಇಲ್ಲ ಎಂದೆಲ್ಲ ಹೇಳುವುದು ಸರಿಯಲ್ಲ ಎಂದರು.

ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಚೊಟ್ಟನಹಳ್ಳಿ ರಮೇಶ್ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಗಿರೀಶ್, ಗಂಗಾಧರ್, ಚಂದ್ರಶೇಖರ್, ಸಿದ್ದಯ್ಯ ಮತ್ತಿತರರಿದ್ದರು.

ನಾಳೆಯಿಂದ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ



ಶ್ರೀರಂಗಪಟ್ಟಣ, ಜ.19– ಬಿಜೆಪಿ ವಿಜಯ ಸಂಕಲ್ಪ ಅಭಿಯಾನದ ಮೂಲಕ ಜನಸಾಮಾನ್ಯರಿಗೆ ಸರ್ಕಾರಗಳ ಸಾಧನೆ ತಿಳಿಸಲಾಗುವುದು ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಜ.21ರಿಂದ 9 ದಿನಗಳ ಕಾಲ ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ನಡೆಯಲಿದ್ದು, ವಿಜಯಪುರದ ಸಿಂಧಗಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದರು. ಶ್ರೀರಂಗಪಟ್ಟಣದಲ್ಲಿ ಮಂಡಲ ಅಧ್ಯಕ್ಷರು ಸೇರಿದಂತೆ ಇತರ ಮುಖಂಡರ ಸಮ್ಮುಖದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಕ್ಷೇತ್ರದ ಪ್ರತಿಯೊಂದು ಬೂತ್ ಮಟ್ಟದಲ್ಲಿ ಅಭಿಯಾನದ ಮೂಲಕ ಸರ್ಕಾರದ ಸಾಧನೆಗಳನ್ನು ಮತದಾರರಿಗೆ ತಲುಪಿಸಲಾಗುವುದು. ಕೇಂದ್ರ–ರಾಜ್ಯ ಸರ್ಕಾರಗಳ ಸಾಧನೆ ಕುರಿತು ಕರಪತ್ರಗಳನ್ನು ಮನೆಮನೆಗೆ ಹಂಚಲಿದ್ದೇವೆ ಎಂದರು.

ರಾಜ್ಯ ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ಕೆ.ಎಸ್.ನಂಜುಂಡೇಗೌಡ ಮಾತನಾಡಿ, ರಾಜ್ಯಾದ್ಯಂತ ಡಬಲ್ ಇಂಜಿನ್ ಸರ್ಕಾರಗಳ ಸಾಧನೆಯನ್ನು ಜನರಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ಈ ವೇಳೆ ಯುವ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ರಜತ್, ಜಿಲ್ಲಾ ಕಾರ್ಯದರ್ಶಿ ಪೈಲ್ವಾನ್ ಮಾದೇವು, ಕಾರ್ಯದರ್ಶಿ ಇಂದ್ರಕುಮಾರ್, ಮಾಜಿ ಉಪಾಧ್ಯಕ್ಷ ಎಸ್.ದೇವರಾಜ್, ಮಾಧ್ಯಮ ಪ್ರಮುಖ್ ಶ್ರೀನಿವಾಸ್, ಮಂಡಲ ಪ್ರಧಾನ ಕಾರ್ಯದರ್ಶಿಗಳದ ಸಂತೋಷ್ ಕುಮಾರ್, ನಂದೀಶ್, ನಗರ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ವಿಶ್ವನಾಥ್, ಯುವ ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ಓಬಿಸಿ ಅಧ್ಯಕ್ಷ ಎಂ.ವಿ.ಕಷ್ಣ ಇತರರಿದ್ದರು.

ಕೆ.ಆರ್.ಪೇಟೆ ಜೆಡಿಎಸ್ ಟಿಕೆಟ್ ಬಗ್ಗೆ ಮರು ಪರಿಶೀಲಿಸಿ

ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿ: ಹಿರಿಯ ಮುಖಂಡ ಬಿ.ಎಲ್.ದೇವರಾಜು ಮನವಿ

ಕೆ.ಆರ್.ಪೇಟೆ, ಜ.19– ಮುಂಬರುವ ಚುನಾವಣೆಗೆ ಈಗಾಗಲೇ ಘೋಷಿಸಿರುವ ಕ್ಷೇತ್ರದ ಜೆಡಿಎಸ್ ಟಿಕೆಟ್ ಬಗ್ಗೆ ಮರು ಪರಿಶೀಲಿಸಿ, ಕಳೆದ ಉಪ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋತಿರುವ ನನಗೆ ಕಣಕ್ಕಿಳಿಯಲು ಅವಕಾಶ ಮಾಡಿಕೊಡಬೇಕು ಎಂದು ಹಿರಿಯ ಜೆಡಿಎಸ್ ಮುಖಂಡ ಬಿ.ಎಲ್.ದೇವರಾಜು ಪಕ್ಷದ ವರಿಷ್ಠರನ್ನು ಆಗ್ರಹಿಸಿದರು.



ಪಟ್ಟಣದ ಎಂ.ಕೆ.ಬೊಮ್ಮೇಗೌಡ ಸಹಕಾರ ಭವನದಲ್ಲಿ ತಮ್ಮ ಅಭಿಮಾನಿಗಳು ಹಾಗೂ ಜೆಡಿಎಸ್ ನಿಷ್ಠಾವಂತ ಕಾರ್ಯಕರ್ತರು ಆಯೋಜಿಸಿದ್ದ ಬೃಹತ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ 45 ವರ್ಷಗಳಿಂದ ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿರುವ ನನಗೆ 2023ರ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸದೇ, ತಾಲೂಕಿನಲ್ಲಿ ನಿಷ್ಠಾವಂತ ಕಾರ್ಯಕರ್ತರ ಅಭಿಪ್ರಾಯ ಪಡೆಯದೇ, ಏಕಾಏಕಿ ಜಿಪಂ ಮಾಜಿ ಸದಸ್ಯ ಹೆಚ್.ಟಿ.ಮಂಜು ಅವರನ್ನು ಪಕ್ಷದ ಅಭ್ಯರ್ಥಿಯಾಗಿ ಘೋಷಿಸಿರುವುದು ಸರಿಯಲ್ಲ. ಇದರಿಂದಾಗಿ ಪಕ್ಷಕ್ಕಾಗಿ ದುಡಿದ ನನಗೆ ಅನ್ಯಾಯವಾಗಿದೆ. ಆದ್ದರಿಂದ ಟಿಕೆಟ್ ಹಂಚಿಕೆ ಮರುಪರಿಶೀಲಿಸಬೇಕು ಎಂದರು.

ನಾನು ಜೆಡಿಎಸ್ ವರಿಷ್ಠರ ವಿರುದ್ಧ ಬಂಡಾಯ ಸಾರುತ್ತಿಲ್ಲ. ರಾಜಕಾರಣದ ಸಂಧ್ಯಾಕಾಲದಲ್ಲಿರುವ ನನಗೆ ಅನ್ಯಾಯವಾಗಿದೆ ಎಂದು ಸ್ವತಃ ಕಾರ್ಯಕರ್ತರೇ ಇಂದು ಸಭೆ ಆಯೋಜಿಸಿದ್ದಾರೆ. ಕಾರ್ಯಕರ್ತರ ಭಾವನೆಗೆ ನೋವಾಗಬಾರದು ಎಂಬ ಕಾರಣಕ್ಕೆ ನಾನು ಸಭೆಗೆ ಆಗಮಿಸಿ ನನ್ನ ಮನಸ್ಸಿನ ಭಾವನೆಗಳನ್ನು ಕಾರ್ಯಕರ್ತರ ಮುಂದೆ ಹೇಳಿದ್ದೇನೆ. 45 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಹಲವು ಏಳುಬೀಳು ಕಂಡಿದ್ದೇನೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಶಿಷ್ಯನಾಗಿ ಗುರುತಿಸಿಕೊಂಡಿದ್ದ ನನಗೆ ಪಕ್ಷ ಮೈಸೂರು ಲ್ಯಾಂಪ್ಸ್ ಅಧ್ಯಕ್ಷ, ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಜಿಪಂ ಸದಸ್ಯನಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದೆ. ಕಳೆದ ಉಪ ಚುನಾವಣೆಯಲ್ಲಿ ಅಲ್ಪಮತಗಳ ಅಂತರದಿಂದ ಪರಾಭವಗೊಂಡಿರುವ ನನಗೆ ಪಕ್ಷ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಲು ಅವಕಾಶ ಮಾಡಿಕೊಡಬೇಕು ಎಂಬುದಷ್ಟೇ ನನ್ನ ಆಗ್ರಹ. ನನ್ನ ಮನವಿಗೆ ಇಲ್ಲಿ ನೆರದಿರುವ 10 ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರು ದನಿಯಾಗಿದ್ದಾರೆ. ಮಾಜಿ ಸಿಎಂ ಕುಮಾರಸ್ವಾಮಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಕೆ.ಆರ್.ಪೇಟೆ ತಾಲೂಕಿನ ವಾಸ್ತವ ಚಿತ್ರಣದ ವರದಿ ತರಿಸಿಕೊಂಡು ನೂರಕ್ಕೇ ನೂರು ಗೆಲ್ಲುವ ಸಾಮರ್ಥ್ಯ ಹಾಗೂ ಅವಕಾಶ ಹೊಂದಿರುವ ನನಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜೆಡಿಎಸ್ ಟಿಕೆಟ್ ಆಕಾಂಕ್ಷಿಗಳಾಗಿ ಪ್ರಸ್ತುತ ಬಿ.ಎಲ್.ದೇವರಾಜು ಅವರನ್ನು ಬೆಂಬಲಿಸುತ್ತಿರುವ ಮುಖಂಡ ಬಸ್ ಕೃಷ್ಣೇಗೌಡ, ಪುರಸಭೆ ಸದಸ್ಯ ಬಸ್ ಸಂತೋಷ್‌ಕುಮಾರ್, ಕೆ.ಆರ್.ಪೇಟೆ ತಾಲೂಕಿನ ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವೆಂಕಟೇಶ್, ಕುರುಬ ಸಮಾಜದ ಮುಖಂಡ ಕಡಹೆಮ್ಮಿಗೆ ಧನಂಜಯ, ವಕೀಲ ಬಳ್ಳೇಕೆರೆ ಯೋಗೇಶ್, ಜಿಪಂ ಮಾಜಿ ಸದಸ್ಯ ರಾಮದಾಸ್ ಮಾತನಾಡಿ, ಹಿರಿಯ ಮುಖಂಡರಾಗಿರುವ ಬಿ.ಎಲ್.ದೇವರಾಜು ಅವರಿಗೆ ಆಗಿರುವ ಅನ್ಯಾಯವನ್ನು ವರಿಷ್ಠರು ಸರಿಪಡಿಸಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಲು ಅವಕಾಶ ಮಾಡಿಕೊಡಬೇಕು ಎಂದರು.

ಸಭೆಯಲ್ಲಿ ತಾಪಂ ಮಾಜಿ ಸದಸ್ಯ ರಾಜಾಹುಲಿ ದಿನೇಶ್, ಕಿಕ್ಕೇರಿ ಕಾಯಿ ಸುರೇಶ್, ಟಿಎಪಿಸಿಎಂಎಸ್ ನಿರ್ದೇಶಕ ಶಶಿಧರ್, ಮುಖಂಡರಾದ ರಾಮಕೃಷ್ಣೇಗೌಡ, ಈರಪ್ಪಗೌಡ, ಶಿವರಾಂ, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜೇಗೌಡ, ಲೋಕೇಶ್, ಎ.ಎಂ. ಸಂಜೀವಪ್ಪ, ನಾಗೇಶ್, ಪ್ರಗತಿಪರ ಕೃಷಿಕ ಸುಬ್ಬೇಗೌಡ ಸೇರಿದಂತೆ ಹತ್ತು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಮರದಿಂದ ಬಿದ್ದು ವ್ಯಕ್ತಿ ಸಾವು

ಪಾಂಡವಪುರ, ಜ.19– ಮರದಿಂದ ಆಯತಪ್ಪಿ ಬಿದ್ದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಗುರುವಾರ ನಡೆದಿದೆ.



ಗ್ರಾಮದ ಶಿವಣ್ಣ ಅವರ ಪುತ್ರ ಸುನೀಲ್(31) ಸಾವನ್ನಪ್ಪಿದವರು. ಈತ ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನಿನಲ್ಲಿರುವ ಆಲದ ಮರದಲ್ಲಿ ಆಡಿಗೆ ಸೊಪ್ಪು ಕಡಿಯಲು ಹೋಗಿ ಆಯತಪ್ಪಿ ಕೆಳಗೆ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದ ಕುಟುಂಬಸ್ಥರು, ಗ್ರಾಮಸ್ಥರು ಸ್ಥಳಕ್ಕೆ ತೆರಳಿ ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲಿಸಿ ಮೃತದೇಹವನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು.

ಮೈಸೂರು ಮಿತ್ರ

ಶುಕ್ರವಾರ 20 ಜನವರಿ 2023

ಮೈಸೂರಲ್ಲಿ ಉತ್ತಮ ಆಡಳಿತ ನೆಲೆಗೊಳಿಸಲು ಆಗ್ರಹ

ಜ.29ರಂದು ಸ್ವಯಂಪ್ರೇರಿತ ಸತ್ಯಾಗ್ರಹಕ್ಕೆ ಮೈಸೂರು ನಾಗರಿಕರಿಗೆ ಎಂಜಿಪಿ ಕರೆ

ಮೈಸೂರು,ಜ.19(ಪಿಎಂ)– ಮೈಸೂರು ನಗರದಲ್ಲಿ ನಾಗರಿಕರಿಗೆ ಸಮರ್ಪಕ ಮೂಲಸೌಲಭ್ಯ ಕಲ್ಪಿಸಬೇಕು. ಪಾದಚಾರಿ ಮಾರ್ಗ, ಕೆರೆ-ಕಟ್ಟೆ ಹಾಗೂ ಕಾಲುವೆ ಒತ್ತುವರಿ ತೆರವುಗೊಳಿಸಬೇಕು. ಒಟ್ಟಾರೆ ನಗರದಲ್ಲಿ ಉತ್ತಮ ಆಡಳಿತ ನೆಲೆಗೊಳ್ಳಬೇಕು ಎಂಬ ಆಗ್ರಹದೊಂದಿಗೆ ಜ.29ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಮೈಸೂರು ನಗರದ ನಾಗರಿಕರು ಸ್ವಯಂಪ್ರೇರಿತ ಸತ್ಯಾಗ್ರಹ ನಡೆಸುವಂತೆ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ) ಕರೆ ನೀಡಿದೆ.

ಮೈಸೂರಿನ ಪ್ರತಿಯೊಬ್ಬರು (ಅಗತ್ಯ ಸೇವೆ ವ್ಯಾಪ್ತಿಯ ವೈದ್ಯರು, ನರ್ಸ್, ಪೊಲೀಸರು ಮೊದಲಾದವರನ್ನು ಹೊರತುಪಡಿಸಿ) ಅಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಯಾವುದೇ ವಾಹನ ಬಳಕೆ ಕೈಬಿಡಬೇಕು. ಶಾಪಿಂಗ್, ರೆಸ್ಟೋರೆಂಟ್‌ನಿಂದ ದೂರ ಉಳಿಯಬೇಕು. ಕೋವಿಡ್ ಸಂದರ್ಭದಂತೆ ಅಂದು ಸ್ವಯಂ ಲಾಕ್‌ಡೌನ್ ವಿಧಿಸಿಕೊಂಡು ಆ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಬೇಕು. ಹೋರಾಟ ದಾಖಲಿಸಲು ನಾಗರಿಕರು ತಮಗೆ ಅನುಕೂಲವಾದ ಉದ್ಯಾನವನಗಳಲ್ಲಿ ಸಮಾವೇಶಗೊಂಡು ಪ್ರತಿಭಟನೆ ದಾಖಲಿಸಬೇಕು. ಅಥವಾ ಎರಡು ಗಂಟೆ ಕಾಲ ಮೌನವಾಗಿ ಸತ್ಯಾಗ್ರಹ ಕೂರಬೇಕು ಎಂದು ಎಂಜಿಪಿ ಮನವಿ ಮಾಡಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಂಜಿಪಿ ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ.ಶೆಣೈ, ಮೈಸೂರು ನಗರದ ಸಾಕಷ್ಟು ರಸ್ತೆಗಳಲ್ಲಿ ಫುಟ್‌ಪಾತ್ ಒತ್ತುವರಿಯಾದ ಪರಿಣಾಮ ಪಾದಚಾರಿಗಳು ನಡೆದುಕೊಂಡು ಹೋಗಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಉದ್ಯಾನವನಗಳಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲ. 2 ಹೆಕ್ಟೇರ್ ವಿಸ್ತೀರ್ಣ ಹೊಂದಿರುವ ಉದ್ಯಾನದಲ್ಲಿ ಅಲ್ಲಿನ ಅಗತ್ಯತೆಗೆ ಅನುಗುಣವಾಗಿ ಶೇ.5ರಷ್ಟು ಕಟ್ಟಡ ನಿರ್ಮಿಸಲು ಅವಕಾಶವಿದೆ. ಆದರೆ ಮೈಸೂರಿನಲ್ಲಿ ಉದ್ಯಾನವನಗಳಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ ಎಂದು ಆರೋಪಿಸಿದರು.

ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಪ್ರಸ್ತುತ ಕೊಳಚೆ ನೀರು ಸೇರುವುದು ಕಡಿಮೆಯಾಗಿದೆ. ಆದರೆ ಈ ಕೆರೆಗೆ ನೀರು ಹರಿಸುವ ಪೂರ್ಣಯ್ಯ ನಾಲೆ ಒತ್ತುವರಿ ತೆರವಿಗೆ ಕ್ರಮ ವಹಿಸುವಂತೆ ಎಷ್ಟು ಮನವಿ ಮಾಡಿದರೂ ಪ್ರಯೋಜನವೇ ಆಗಿಲ್ಲ. ಚಾಮುಂಡಿಬೆಟ್ಟದಲ್ಲಿ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡ ನಿರ್ಮಾಣ ಮಾಡದಂತೆ ಒತ್ತಾಯಿಸಿದ್ದೆವು. ಆದರೆ ಇದಕ್ಕೂ ಮನ್ನಣೆ ನೀಡಲಿಲ್ಲ. ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಒಳಚರಂಡಿ ಅವ್ಯವಸ್ಥೆಯಿಂದ ಕೂಡಿವೆ. ಸರ್ಕಾರಿ ಕಚೇರಿಗಳಲ್ಲಿ ಉತ್ತಮ ಆಡಳಿತದ ಕೊರತೆ ಇದೆ ಎಂದು ದೂರಿದರು.

ಎಂಜಿಪಿ ಸೇರಿದಂತೆ ವಿವಿಧ ಸಂಘಟನೆಗಳು ಇಂತಹ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಎಷ್ಟು ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಹಾಗಾಗಿ ಈ ರೀತಿಯ ವಿಭಿನ್ನ ಹೋರಾಟಕ್ಕೆ ಮುಂದಾಗಲಾಗಿದೆ. ಎಂಜಿಪಿ ವತಿಯಿಂದ ಅಂದೂ ಯಾವುದೇ ಸಾಂಕೇತಿಕ ಹೋರಾಟವೂ ಇರುವುದಿಲ್ಲ. ಈಗಾಗಲೇ ಹೋರಾಟ ಮಾಡಿ ಸಾಕಾಗಿದೆ. ಇನ್ನೇನಿದ್ದರೂ ಜನರು ಜಾಗೃತರಾಗಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಿರಿಯರು, ಖ್ಯಾತ ಕಾದಂಬರಿಕಾರರೂ ಆದ ಡಾ.ಎಸ್.ಎಲ್.ಭೈರಪ್ಪ ಅವರಿಗೆ ಇಂದು ಬೆಳಗ್ಗೆ ಕರೆ ಮಾಡಿದ್ದಾಗ ಅವರು ನಮ್ಮ ಈ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದ್ದಾರೆ. ಅವರಂತೆ ಅನೇಕ ಗಣ್ಯರು ಬೆಂಬಲ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಕಸ ಸಂಗ್ರಹ ನಿರ್ವಹಣೆ ಉತ್ತಮವಾಗಿ ನಡೆಯುತ್ತಿದೆ. ಈ ವಿಚಾರದಲ್ಲಿ ದೂಷಣೆ ಮಾಡಲಾಗದು. ಆದರೆ ಸಾಕಷ್ಟು ನಾಗರಿಕರೇ ಎಲ್ಲಿ ಬೇಕೆಂದರಲ್ಲಿ ತ್ಯಾಜ್ಯ ಬಿಸಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಎಂಜಿಪಿ ಕಾರ್ಯಾಧ್ಯಕ್ಷೆ ಶೋಭನಾ, ಅಧ್ಯಕ್ಷ ಶ್ರೀಶೈಲ ರಾಮಣ್ಣನವರ್, ಖಜಾಂಚಿ ಬಿ.ಎನ್.ಶಂಕರ್, ಕಾರ್ಯಕಾರಿ ಸಮಿತಿ ಸದಸ್ಯ ಅರುಣ್‌ಕುಮಾರ್ ಶೆಟ್ಟರ್ ಗೋಷ್ಠಿಯಲ್ಲಿದ್ದರು.

'ಕಾಣನಕಟ್ಟೆ' ಮುಚ್ಚಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಬೇಡ...

ಹಂಚ್ಯಾ-ಸಾತಗಳ್ಳಿಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಗುರುತಿಸಿರುವ ಜಾಗದಲ್ಲಿ 'ಕಾಣನಕಟ್ಟೆ' ಎಂಬ ಕಟ್ಟೆ ಇತ್ತು. ಈ ಹಿನ್ನೆಲೆಯಲ್ಲಿ ಸದರಿ ಜಾಗದಲ್ಲಿ ಸ್ಟೇಡಿಯಂ ನಿರ್ಮಾಣ ಯೋಜನೆ ಕೈಬಿಟ್ಟು ಆ ಕಟ್ಟೆಯ ಪುನರ್‌ಜೀವನಕ್ಕೆ ಕ್ರಮ ವಹಿಸಬೇಕು. ಜೊತೆಗೆ ಇದರ ಪಕ್ಕದಲ್ಲೇ 'ಮೇಗಲಕಟ್ಟೆ' ಎಂಬ ಮತ್ತೊಂದು ಕಟ್ಟೆ ಇತ್ತು. ಈ ಜಾಗದಲ್ಲಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಿದ್ದು, ಇದನ್ನೂ ಕೈಬಿಟ್ಟು, ಇದರ ಪುನರ್ ಜೀವನಕ್ಕೂ ಕ್ರಮ ವಹಿಸಬೇಕು ಎಂದು ಎಂಜಿಪಿ ಕಾರ್ಯಾಧ್ಯಕ್ಷೆ ಶೋಭನಾ ಒತ್ತಾಯಿಸಿದರು.

'ಒಡನಾಡಿ'ಯಲ್ಲಿ ಸ್ಯಾಂಟ್ರೋ ರವಿ, ಮುರುಘಾ ಶ್ರೀಗಳ ಪ್ರಕರಣದ ಸಂತ್ರಸ್ತರ ಭೇಟಿಯಾದ ನಟ ಚೇತನ್

ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಬಸವರಾಜನ್ ದಂಪತಿಯಿಂದಲೂ ಸಂತ್ರಸ್ತ ವಿದ್ಯಾರ್ಥಿನಿಯರ ಭೇಟಿ

ಮೈಸೂರು, ಜ.19(ಎಂಟಿವೈ)– ಸ್ಯಾಂಟ್ರೋ ರವಿ ಹಾಗೂ ಚಿತ್ರದುರ್ಗದ ಮುರುಘಾ ಮಠದ ಶ್ರೀಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಚೇತನ್ ಗುರುವಾರ ಮೈಸೂರಿನ ಹೂಟಗಳ್ಳಿಯಲ್ಲಿರುವ ಒಡನಾಡಿ ಸಂಸ್ಥೆಗೆ ಭೇಟಿ ನೀಡಿ, ಸಂತ್ರಸ್ತೆಯೊಂದಿಗೆ ಚರ್ಚಿಸಿ, ಮಾಹಿತಿ ಪಡೆದರು.



ಎರಡೂ ಪ್ರಕರಣದಲ್ಲಿ ಸಂತ್ರಸ್ತರಾಗಿರುವವರಿಗೆ ಸಾಂತ್ವನ ಹೇಳಲು ನಟ ಚೇತನ್, ಒಡನಾಡಿ ಸಂಸ್ಥೆಗೆ ಭೇಟಿ ನೀಡಿದ್ದರು. ಬಳಿಕ ಒಡನಾಡಿ ಮುಖ್ಯಸ್ಥರಾದ ಸ್ಟ್ಯಾನ್ಲಿ ಹಾಗೂ ಪರಶು ಅವರೊಂದಿಗೂ ಚರ್ಚಿಸಿದರು. ಇದೇ ವೇಳೆ ಸ್ಯಾಂಟ್ರೋ ರವಿ ಪತ್ನಿಯಿಂದ ಮಾಹಿತಿ ಪಡೆದರು.

ಬಳಿಕ ಪತ್ರಕರ್ತರೊಂದಿಗೆ ನಟ ಚೇತನ್ ಮಾತನಾಡಿ, ಒಡನಾಡಿ ಸಂಸ್ಥೆ 32 ವರ್ಷಗಳಿಂದ ಅನ್ಯಾಯದ ವಿರುದ್ಧ ಕೆಲಸ ಮಾಡಿಕೊಂಡು ಬಂದಿದೆ. ಬಲಹೀನರ ಪರ ನಿಂತು, ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ಮುರುಘಾ ಮಠ ಹಾಗೂ ಸ್ಯಾಂಟ್ರೋ ರವಿ ಪ್ರಕರಣದಲ್ಲಿ ನ್ಯಾಯ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ನಾನು ಕುಟುಂಬ ಸಮೇತ ಅವರನ್ನು ನೋಡಲು ಬಂದಿದ್ದೇನೆ. ಇದು ಕೇವಲ ಸೇವೆಯಲ್ಲ, ರಚನಾತ್ಮಕ ಹೋರಾಟ. ನಾನು ಸಹ ಒಡನಾಡಿ ಸಂಸ್ಥೆಯೊಂದಿಗೆ ಇರುತ್ತೇನೆ. 2018ರಲ್ಲಿ ಮೀಟೂ ಹೋರಾಟ ನಡೆದಾಗ ಮಹಿಳೆಯರಿಗೆ ಘನತೆ-ಗೌರವ ಸಿಗಬೇಕು ಎಂದು ಹೋರಾಡಿದ್ದೇವೆ. ಇಂತಹ ಸಂಸ್ಥೆಗಳು ರಾಜ್ಯದಲ್ಲಿ ಹೆಚ್ಚು ಹೆಚ್ಚು ಬೆಳೆಯಬೇಕು ಎಂದರು.

ಪಠಾಣ್ ಸಿನಿಮಾದಲ್ಲಿ ಕೇಸರಿ ಬಿಕಿನಿ ವಿವಾದ ವಿಚಾರ ಕುರಿತು ಪ್ರತಿಕ್ರಿಯಿಸಿದ ನಟ ಚೇತನ್, ಕೇಸರಿ ತ್ಯಾಗದ ಸಂಕೇತ. ಬಸವಣ್ಣ, ಬುದ್ಧ ಸೇರಿ ಹಲವು ಮಂದಿ ಕೇಸರಿ ಧರಿಸಿದ್ದಾರೆ. ಇಂತಹ ಬಣ್ಣವನ್ನು ಒಂದು ಸಿದ್ಧಾಂತಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಇದನ್ನು ಯಾರೂ ಹೈಜಾಕ್ ಮಾಡಬಾರದು. ಕೇಸರಿ ಹಿಂದುತ್ವದ ಬಣ್ಣ ಆಗಲಾರದು. ನಮ್ಮ ದೇಶದ ತ್ರಿವರ್ಣ ಧ್ವಜದಲ್ಲೂ ಕೇಸರಿ ಇದೆ. ಹಸಿರು ಬಣ್ಣವೂ ಒಂದು ವರ್ಗದ ಬಣ್ಣ ಅಲ್ಲ. ಸಣ್ಣ ಸಣ್ಣದಕ್ಕೂ ತಪ್ಪು ಹುಡುಕೋದು ಇವರ ಫ್ರೇಮ್ ವರ್ಕ್ ಆಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಹುನ್ನಾರ. ಇದನ್ನು ರಾಜಕೀಯವಾಗಿ ಬಳಸುತ್ತಿರೋದು, ವಿರೋಧ ಮಾಡುತ್ತಿರುವವರ ವಿಚಾರದ ಕೊರತೆಯನ್ನು ತೋರಿಸುತ್ತದೆ ಎಂದು ಹೇಳಿದರು.

ಒಡನಾಡಿಗೆ ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಭೇಟಿ: ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಚಿತ್ರದುರ್ಗದ ಮುರುಘಾ ಮಠದ ಶ್ರೀಗಳ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಬಾಲಕಿಯರನ್ನು ಭೇಟಿ ಮಾಡಲು ಮಾಜಿ ಶಾಸಕ ಹಾಗೂ ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಬಸವರಾಜನ್ ಒಡನಾಡಿ ಸಂಸ್ಥೆಗೆ ಭೇಟಿ ನೀಡಿ, ಸಂತ್ರಸ್ತ ಬಾಲಕಿಯರೊಂದಿಗೆ ಚರ್ಚಿಸಿರುವುದು ಕುತೂಹಲ ಕೆರಳಿಸಿದೆ. ಒಡನಾಡಿ ಸಂಸ್ಥೆಗೆ ಭೇಟಿ ನೀಡಿದ ವೇಳೆ ಪರಶು, ಸ್ಟ್ಯಾನ್ಲಿ ಹಾಗೂ ಮಾಜಿ ಮೇಯರ್ ಪುರುಷೋತ್ತಮ್ ಅವರೊಂದಿಗೆ ಚರ್ಚೆ ನಡೆಸಿದರು.

ಮುರುಘಾ ಶ್ರೀ ವಿರುದ್ಧ ದೌರ್ಜನ್ಯ ಪ್ರಕರಣದಲ್ಲಿ ಬಸವರಾಜನ್ ಕೈವಾಡದ ಆರೋಪ ಕೇಳಿ ಬಂದಿತ್ತು ದೂರು ಸಲ್ಲಿಸಿದ ಸಂತ್ರಸ್ತ ಬಾಲಕಿಯರ ಹಿಂದೆ ಬಸವರಾಜನ್ ಇದ್ದಾರೆ ಎಂಬ ಆರೋಪವೂ ಇತ್ತು. ಒಡನಾಡಿ ಸಂಸ್ಥೆಯೊಂದಿಗೆ ಕೈಜೋಡಿಸಿ ದೂರು ಕೊಡಿಸಿದ್ದಾರೆ ಎಂಬ ಮಾತು ಹರಿದಾಡಿತ್ತು. ಸಂತ್ರಸ್ತ ಬಾಲಕಿಯರು ಒಡನಾಡಿ ಸಂಸ್ಥೆ ಆಶ್ರಯದಲ್ಲೇ ಇರುವುದರಿಂದ ಯೋಗಕ್ಷೇಮ ವಿಚಾರಿಸಲು ಬಸವರಾಜನ್ ದಂಪತಿ ಆಗಮಿಸಿದ್ದರು ಎಂದು ಹೇಳಲಾಗಿದೆ. ಆದರೂ, ಇವರ ಭೇಟಿ ಪ್ರಕರಣದ ಬಗ್ಗೆ ಮತ್ತಷ್ಟು ಕುತೂಹಲ ಮೂಡಿಸಿದೆ.

ಮೃಗಾಲಯಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಮಾಹಿತಿಗೆ ಒತ್ತು ಅವಶ್ಯ

ಕೇಂದ್ರ ಮೃಗಾಲಯ ಸದಸ್ಯ ಕಾರ್ಯದರ್ಶಿ ಡಾ. ಸಂಜಯ್ ಕುಮಾರ್ ಶುಕ್ಲಾ ಸಲಹೆ

ಮೈಸೂರು, ಜ.19(ಜಿಎ)– ಮೃಗಾಲಯಗಳಿಗೆ ಭೇಟಿ ನೀಡುವ ಪ್ರೇಕ್ಷಕರಿಗೆ ಮೃಗಾಲಯ ಮತ್ತು ಪ್ರಾಣಿಗಳ ಸಂರಕ್ಷಣೆಯ ಮಾಹಿತಿಯನ್ನು ಪ್ರಾದೇಶಿಕ ಭಾಷೆಯಲ್ಲಿ ನೀಡಲು ಹೆಚ್ಚು ಒತ್ತು ನೀಡಬೇಕು ಎಂದು ಕೇಂದ್ರ ಮೃಗಾಲಯದ ಸದಸ್ಯ ಕಾರ್ಯದರ್ಶಿ ಡಾ. ಸಂಜಯ್ ಕುಮಾರ್ ಶುಕ್ಲಾ ಸಲಹೆ ನೀಡಿದರು.

ಮೈಸೂರಿನ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರ ಹಾಗೂ ಮೈಸೂರು ಮೃಗಾಲಯದ ಸಂಯುಕ್ತಾಶಯದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಮೃಗಾಲಯ ನಿರ್ದೇಶಕರ ರಾಷ್ಟ್ರೀಯ ಸಮ್ಮೇಳನ ಗುರುವಾರ ಸಮಾರೋಪಗೊಂಡಿತು.



ಈ ವೇಳೆ ಮಾತನಾಡಿದ ಅವರು, ಕಳೆದ ಎರಡು ದಿನಗಳಿಂದ ನಡೆದ ಸಮ್ಮೇಳನ ಅದ್ಭುತವಾಗಿತ್ತು ಮೈಸೂರು ಮೃಗಾಲಯದ ವತಿಯಿಂದ ಉತ್ತಮವಾಗಿ ಆಯೋಜಿಸಿದ್ದಾರೆ ಎಂದು ಪ್ರಶಂಸಿಸಿದರು. ಸಮ್ಮೇಳನದಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚೆಗಳು ನಡೆದಿದ್ದು, ಅದರೊಟ್ಟಿಗೆ ಅನೇಕ ಸಲಹೆಗಳು ಕೇಳಿಬಂದಿವೆ.

ಸಮ್ಮೇಳನದಲ್ಲಿ ಸಂವಾದಕ್ಕಿಂತ ಗೋಷ್ಠಿಗಳು ಹೆಚ್ಚು ಸಮಯವನ್ನು ತೆಗೆದುಕೊಂಡಿವೆ. ಮುಂದಿನ ದಿನಗಳಲ್ಲಿ ಆಯೋಜಿಸುವ ಸಮ್ಮೇಳನವನ್ನು ಮೂರು ದಿನಕ್ಕೂ ಹೆಚ್ಚು ಕಾಲ ಏರ್ಪಡಿಸಬೇಕಿದೆ. ಏಕೆಂದರೆ ಸಮ್ಮೇಳನಗಳಲ್ಲಿ ಗೋಷ್ಠಿಗಳಿಗಿಂತ ಸಂವಾದಕ್ಕೆ ಹೆಚ್ಚು ಆದ್ಯತೆ ನೀಡಬೇಕು. ಇದರಿಂದ ಮತ್ತಷ್ಟು ಸಲಹೆ ಮತ್ತು ವಿಚಾರ ವಿನಿಮಯವಾಗುತ್ತದೆ. ಮೃಗಾಲಯದ ಬಗ್ಗೆ ಮತ್ತು ಇಲ್ಲಿ ನಡೆಯುವ ಪುನರುಜ್ಜೀವನಗೊಳಿಸುತ್ತಿರುವ ಬಗ್ಗೆ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸ ಮಾಡಿ ಎಂದು ತಿಳಿಸಿದರು.

ನಂತರ ಕರ್ನಾಟಕ ಅರಣ್ಯ ಇಲಾಖೆಯ ಅರಣ್ಯ ಮತ್ತು ಮುಖ್ಯ ವನ್ಯಜೀವಿಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ರಾಜೀವ್ ರಂಜನ್ ಮಾತನಾಡಿ, ಯುವ ಪೀಳಿಗೆಗೆ ವನ್ಯಜೀವಿಗಳ ಬಗ್ಗೆ ತಿಳಿಸಬೇಕಿದ್ದು, ಅದರೊಟ್ಟಿಗೆ ವನ್ಯಜೀವಿಗಳ ಮನಸ್ಥಿತಿಯನ್ನು ತಿಳಿಯುವ ಮತ್ತು ಪ್ರೀತಿಸುವ ಬಗ್ಗೆ ಜಾಗೃತಿ ಮೂಡಿಸಬೇಕಿದೆ ಎಂದ ಅವರು, ಸಿಎಸ್‌ಆರ್ ಫಂಡ್ ಮತ್ತು ಪ್ರಾಣಿ ದತ್ತು ಯೋಜನೆಯಡಿ ಮೈಸೂರು ಮೃಗಾಲಯಕ್ಕೆ ಈಗಾಗಲೇ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗಿದ್ದು, ಬೆಳಗಾವಿಯಲ್ಲಿ ಇತ್ತೀಚೆಗೆ ನೂತನ ಮೃಗಾಲಯವು ಆರಂಭಗೊಂಡಿದೆ. ದೇಶದ ಪ್ರತಿಯೊಂದು ಮೃಗಾಲಯವು ಕಷ್ಟದ ದಿನಗಳನ್ನು ನೋಡಿದ್ದು, ಹಾಗೇ ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆಗಳು ಎದುರಾದರೂ ಸಿದ್ಧರಿರೋಣ ಎಂದು ಕರೆ ನೀಡಿದರು.

ದೇಶದಲ್ಲಿರುವ ಅನೇಕ ಮೃಗಾಲಯಗಳಿಗೆ ಅಲ್ಲಿನ ರಾಜ್ಯ ಸರ್ಕಾರಗಳು ಸಹಕಾರಿಯಾಗಿವೆ. ಕರ್ನಾಟಕದಲ್ಲಿಯೂ ಸಹಕಾರಿಯಾಗಿದ್ದು ಮತ್ತಷ್ಟು ಒತ್ತು ನೀಡಬೇಕಿದೆ. ನಾನು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷನಾಗುವ ಮೊದಲು ದೇಶದಲ್ಲಿ ಇಷ್ಟು ಮೃಗಾಲಯಗಳಿವೆ ಎಂದು ತಿಳಿದಿರಲಿಲ್ಲ. ಆದ್ದರಿಂದ ಪ್ರತಿಯೊಂದು ಮೃಗಾಲಯಗಳ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕಿದೆ. ಆ ನಿಟ್ಟಿನಲ್ಲಿ ತಾವೆಲ್ಲರೂ ಸಹಕಾರ ನೀಡಿ ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮೃಗಾಲಯದ ಅಧಿಕಾರ ಸದಸ್ಯ ಬಿ.ಪಿ.ರವಿ, ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ ಕುಲಕರ್ಣಿ, ಪ್ರಾಧಿಕಾರದ ಸದಸ್ಯೆ ಜ್ಯೋತಿ ರೇಚಣ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯ ಸರಕಳವು

ಮೈಸೂರು, ಜ.19– ತರಕಾರಿ ಖರೀದಿಸಲು ಹೋಗುತ್ತಿದ್ದ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ನೇತಾಜಿ ನಗರದ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಪ್ರಭಾಮಣಿ(65) ಸರ ಕಳೆದುಕೊಂಡವರಾಗಿದ್ದು, ಇವರು ಜ.16ರಂದು ಸಂಜೆ 6.30ರ ಸುಮಾರಿನಲ್ಲಿ ತರಕಾರಿ ತರಲು ನೇತಾಜಿನಗರದ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿಗೆ ಬಂದ ವ್ಯಕ್ತಿಯೋರ್ವ ಇವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಓಡಿ ಹೋಗಿ, ಮತ್ತೊರ್ವ ವ್ಯಕ್ತಿ ಸ್ಟಾರ್ಟ್ ಮಾಡಿಕೊಂಡು ನಿಲ್ಲಿಸಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ದೂರನ್ನು ದಾಖಲಿಸಿಕೊಂಡ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಂದು ರಾಜ್ಯಮಟ್ಟದ ವಿಕಲಚೇತನರ ಸೀನಿಯರ್ ವಿಭಾಗದ ಕ್ರೀಡಾಕೂಟ



ಮೈಸೂರು,ಜ.19(ಪಿಎಂ)– ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ವತಿಯಿಂದ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಸಹಯೋಗದಲ್ಲಿ ಜ.20ರಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ವಿಕಲಚೇತನರ ಸೀನಿಯರ್ ವಿಭಾಗದ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಸಂಸ್ಥೆ ಉಪಾಧ್ಯಕ್ಷ ಆರ್.ರಾಮಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು (ಜ.19) ಜೂನಿಯರ್ ವಿಭಾಗದಲ್ಲಿ ಕ್ರೀಡಾಕೂಟ ನಡೆಯುತ್ತಿದೆ. ಅಂತೆಯೇ ನಾಳೆ (ಜ.20) ಸೀನಿಯರ್ ವಿಭಾಗದಲ್ಲಿ ಕ್ರೀಡಾಕೂಟ ನಡೆಯಲಿದೆ. ಓಟ, ಈಟಿ ಎಸೆತ, ಗುಂಡು ಎಸೆತ ಸೇರಿದಂತೆ ಹಲವು ಕ್ರೀಡೆಗಳು ನಡೆಯಲಿದ್ದು, ಉತ್ತಮ ಪ್ರದರ್ಶನ ನೀಡುವ ಆಟಗಾರರನ್ನು ರಾಷ್ಟ್ರಮಟ್ಟದ ವಿಕಲಚೇತನರ ಕ್ರೀಡಾಕೂಟಕ್ಕೆ ಆಯ್ಕೆ ಮಾಡಲಾಗುವುದು ಎಂದರು.

ಜ.20ರಂದು ಬೆಳಗ್ಗೆ 9.30ಕ್ಕೆ ರೋಟರಿ ಜಿಲ್ಲೆ 3181ರ ಜಿಲ್ಲಾ ಗೌರ್ನರ್ ಆಗಿ ಆಯ್ಕೆಯಾಗಿರುವ ಹೆಚ್.ಆರ್.ಕೇಶವ್ ಉದ್ಘಾಟಿಸಲಿದ್ದಾರೆ. ಅರ್ಜುನ ಪ್ರಶಸ್ತಿ ವಿಜೇತ ಮಹದೇವು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಸದಸ್ಯೆ ಲಕ್ಷ್ಮೀ ಕಿರಣ್‌ಗೌಡ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ಜಿ.ಎಂ.ಸುರೇಶ್, ಕಾರ್ಯದರ್ಶಿ ಪ್ರಭಾಕರ್, ಅರ್ಜುನ ಪ್ರಶಸ್ತಿ ವಿಜೇತ ಮಹದೇವು, ಮುಖಂಡ ರಾಮಚಂದ್ರರಾವ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಕೆವೈಸಿ ಅಪ್‌ಡೇಟ್ ನೆಪದಲ್ಲಿ ವೃದ್ಧೆಯ ಖಾತೆಗೆ ಕನ್ನ: 2 ಲಕ್ಷ ರೂ. ವಂಚನೆ

ಮೈಸೂರು, ಜ.19–ಮೊಬೈಲ್ ಸಂಖ್ಯೆಗೆ ಕೆವೈಸಿ ಅಪ್‌ಡೇಟ್ ಮಾಡಬೇಕೆಂದು ಸಂದೇಶ ರವಾನಿಸಿ, ವೃದ್ಧೆಯೊಬ್ಬರ ಬ್ಯಾಂಕ್ ಖಾತೆಯಲ್ಲಿದ್ದ 2 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡ ಬಗ್ಗೆ ವರದಿಯಾಗಿದೆ. ಮೈಸೂರಿನ ಚಾಮರಾಜಪುರಂ ನಿವಾಸಿ ದಿವಂಗತ ಟಿ.ಹೆಚ್.ಗೋಪಾಲಕೃಷ್ಣ ಎಂಬುವರ ಪತ್ನಿ ಗೀತಾ ಜಿ.ಕೃಷ್ಣ(76) ಹಣ ಕಳೆದುಕೊಂಡವರಾಗಿದ್ದು, ಜ.16ರಂದು ಸಂಜೆ 7 ಗಂಟೆ ಸುಮಾರಿನಲ್ಲಿ ಇವರ ಮೊಬೈಲ್‌ಗೆ ಕೆವೈಸಿ ಅಪ್‌ಡೇಟ್ ಮಾಡುವಂತೆ ಸಂದೇಶ ಬಂದಿದೆ. ನಂತರ ಓಟಿಪಿ ಕೂಡ ಬಂದಿದ್ದು, ಮೆಸೇಜ್ ರವಾನೆಯಾಗಿದ್ದ ಮೊಬೈಲ್ ಸಂಖ್ಯೆಗೆ ಗೀತಾ ಅವರು ಕರೆ ಮಾಡಿ ಓಟಿಪಿ ಹೇಳುತ್ತಿದ್ದಂತೆಯೇ ಅವರ ಖಾತೆಯಲ್ಲಿದ್ದ 2,01,289 ರೂ. ಕಡಿತಗೊಂಡಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಡಿಕ್ಕಿ ಹೊಡೆದು ಮತ್ತೊಂದು ಬೈಕ್ ಸವಾರ ಸಾವು

ಹುಣಸೂರು, ಜ.19–ಇಂಡಿಕೇಟರ್ ಹಾಕದೇ ಹಠಾತ್ತಾಗಿ ತಿರುಗಿಸಿದ ಬೈಕ್‌ಗೆ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಹುಣಸೂರು ಪಟ್ಟಣದ ಮೀನು ಮನೆ ಮುಂಭಾಗ ಸಂಭವಿಸಿದೆ. ಹುಣಸೂರಿನ ಕಲ್ಲುಹಳ್ಳಿ ನಿವಾಸಿ ಡಿ.ಶ್ರೀನಿವಾಸ(32) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜ.17ರಂದು ರಾತ್ರಿ 10.40ರ ಸುಮಾರಿನಲ್ಲಿ ಹುಣಸೂರಿನ ಹಳೇ ಸೇತುವೆ ಕಡೆಯಿಂದ ಬೈಕ್‌ನಲ್ಲಿ (ಕೆಎ 45 ಡಬ್ಲ್ಯೂ 3527) ತೆರಳುತ್ತಿದ್ದಾಗ ಮುಂಬದಿ ಬೈಕ್‌ನಲ್ಲಿ ಹೋಗುತ್ತಿದ್ದ ಮಾರುತಿ ಬಡಾವಣೆಯ ಸೋಮಶೇಖರ್ ಎಂಬುವರು ತಮ್ಮ ಬೈಕ್ ಅನ್ನು (ಕೆಎ 45 ಕ್ಯೂ 8302) ಇಂಡಿಕೇಟರ್ ಹಾಕದೇ ರಸ್ತೆಯ ಮಧ್ಯ ಭಾಗದಿಂದ ಹಠಾತ್ತನೇ ಎಡ ಭಾಗಕ್ಕೆ ತಿರುಗಿಸಿದಾಗ ಹಿಂದೆ ಬರುತ್ತಿದ್ದ ಶ್ರೀನಿವಾಸ ಅವರ ಬೈಕ್ ಈ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಶ್ರೀನಿವಾಸ್ ಅವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಸೋಮಶೇಖರ್ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಈ ಸಂಬಂಧ ಹುಣಸೂರು ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಲಿಂಗದೇವರಕೊಪ್ಪಲಿನಲ್ಲಿ ಕಾಂಗ್ರೆಸ್ ಬೃಹತ್ ಸಮಾವೇಶ

- ಚಾಮುಂಡೇಶ್ವರಿ ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಜೆಡಿಎಸ್‌ನ ಸಾವಿರಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಸೇರ್ಪಡೆ
- ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಸೇರಿ ಹಲವು ಘಟಾನುಘಟಿ ನಾಯಕರ ಭಾಗಿ



ಮೈಸೂರು,ಜ.19(ಪಿಎಂ)– ಮೈಸೂರು ತಾಲೂಕು ಇಲವಾಲ ಹೋಬಳಿಯ ಲಿಂಗದೇವರಕೊಪ್ಪಲಿನ ಕೆಐಎಡಿಬಿ ಮೈದಾನದಲ್ಲಿ ಜ.20ರಂದು ಬೆಳಗ್ಗೆ 10.30ಕ್ಕೆ 'ಸ್ವಾಭಿಮಾನಿ ಪಡೆ, ಕಾಂಗ್ರೆಸ್ ಸೇರ್ಪಡೆ' ಶೀರ್ಷಿಕೆಯಡಿ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾವೇಶ ಹಮ್ಮಿಕೊಂಡಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ-ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್‌ಕುಮಾರ್ ಈ ವಿಷಯ ತಿಳಿಸಿದರು.

ಈ ಬೃಹತ್ ಸಮಾವೇಶವು ಮಾಜಿ ಮುಖ್ಯಮಂತ್ರಿಗಳೂ ಆದ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನವೂ ಆಗಲಿದೆ. ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಉಪಮುಖ್ಯಮಂತ್ರಿಗಳೂ ಆದ ಮಾಜಿ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಅವರು ಸಮಾವೇಶದಲ್ಲಿ ಪಾಲ್ಗೊಂಡು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಹೇಳಿದರು.

ಹೂಟಗಳ್ಳಿ ವೃತ್ತದಿಂದ ಲಿಂಗದೇವರಕೊಪ್ಪಲಿನವರೆಗೆ 10 ಸಾವಿರಕ್ಕೂ ಹೆಚ್ಚು ಮಂದಿ ಮೆರವಣಿಗೆ ನಡೆಸಲಿದ್ದಾರೆ. ಅಲ್ಲದೆ, ಮೆರವಣಿಗೆಯಲ್ಲಿ ವಿವಿಧ ಕಲಾಪ್ರಕಾರಗಳ 500 ಜನರನ್ನು ಒಳಗೊಂಡ ಕಲಾತಂಡಗಳು, 5 ಸಾವಿರ ಬೈಕ್‌ಗಳು, 1101 ಮಂದಿ ಮಹಿಳೆಯರು ಕಳಸ ಹೊತ್ತು ಸಾಗಲಿದ್ದಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್ ಸೇರಿದಂತೆ ಕಾಂಗ್ರೆಸ್ ನಾಯಕರಿಗೆ ಇದೇ ವೇಳೆ ಬೃಹತ್ ಸೇಬಿನ ಹಾರ ಅರ್ಪಿಸಲಾಗುವುದು. ಒಟ್ಟಾರೆ 25ರಿಂದ 30 ಸಾವಿರ ಮಂದಿ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ಕೆ.ಎಸ್.ಸಿದ್ದರಾಜು ಮಾತನಾಡಿ, ಜೆಡಿಎಸ್ ಮುಖಂಡರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಹಿನಕಲ್ ಕೆಂಪನಾಯಕ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುತ್ತಿರುವ ಪ್ರಮುಖರು. ಇವರು ಮಾತ್ರವಲ್ಲದೆ, ಚಾಮುಂಡೇಶ್ವರಿ ಕ್ಷೇತ್ರದ ಸಾವಿರಕ್ಕೂ ಹೆಚ್ಚು ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಿದರು. ಇಲವಾಲ-ಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಗುರುಸ್ವಾಮಿ, ಕಾಂಗ್ರೆಸ್ ಮುಖಂಡರಾದ ಪಿ.ರವಿ, ಕೆರೆಹುಂಡಿ ಮಹೇಶ್ ಗೋಷ್ಠಿಯಲ್ಲಿದ್ದರು.

ಕ್ಷೇತ್ರದ ಅಭ್ಯರ್ಥಿ ಸಾಲಿನಲ್ಲಿ ಕೆ.ಮರೀಗೌಡ ಮುಂಚೂಣಿಯಲ್ಲಿ

ಮುಂಬರುವ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ಕೆ.ಎಸ್.ಸಿದ್ದರಾಜು, ಪಕ್ಷದ ಸೂಚನೆಯಂತೆ 12 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ಕ್ಷೇತ್ರದ ಮುಖಂಡರೂ ಆದ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮುಂಚೂಣಿಯಲ್ಲಿದ್ದಾರೆ. ಒಟ್ಟಾರೆ ಹೈಕಮಾಂಡ್ ಯಾರನ್ನೇ ಅಭ್ಯರ್ಥಿ ಮಾಡಿದರೂ ಕ್ಷೇತ್ರದ ಎಲ್ಲಾ ಮುಖಂಡರು, ಕಾರ್ಯಕರ್ತರು ಒಗ್ಗೂಡಿ ಕೆಲಸ ಮಾಡಲಿದ್ದೇವೆ. ಕ್ಷೇತ್ರದಲ್ಲಿ ಪಕ್ಷ ಗೆಲುವು ಸಾಧಿಸುವುದೇ ನಮಗೆ ಮುಖ್ಯ ಎಂದು ತಿಳಿಸಿದರು.

ಮೈಸೂರು ಮಿತ್ರ ಶುಕ್ರವಾರ 20 ಜನವರಿ 2023

ನಾಳೆ ಬೂತ್ ವಿಜಯ ಸಂಕಲ್ಪ ಅಭಿಯಾನ

ಮಡಿಕೇರಿಯಲ್ಲಿ ಸಚಿವ ನಾಗೇಶ್, ವಿರಾಜಪೇಟೆಯಲ್ಲಿ ಸಂಸದ ಪ್ರತಾಪ್‌ಸಿಂಹ ಉದ್ಘಾಟನೆ



ಮಡಿಕೇರಿ, ಜ.19– ಮುಂಬರುವ ವಿಧಾನ ಸಭಾ ಚುನಾವಣೆಯನ್ನು ದೃಷ್ಟಿಯಲ್ಲಿರಿಸಿ ಕೊಂಡ 'ಮಿಷನ್–150' ಅನ್ನು ಕಾರ್ಯಗತಗೊಳಿಸುವ ಮೂಲಕ ಪೂರ್ಣ ಬಹುಮತದ ಬಿಜೆಪಿ ಸರ್ಕಾರವನ್ನು ರಾಜ್ಯದಲ್ಲಿ ಅಸ್ತಿತ್ವಕ್ಕೆ ತರುವ ಸಲುವಾಗಿ ರಾಜ್ಯಾದ್ಯಂತ ಬಿಜೆಪಿ ವತಿಯಿಂದ ಜ.21 ರಿಂದ 29ರವರೆಗೆ ಬೂತ್ ವಿಜಯ ಸಂಕಲ್ಪ ಅಭಿಯಾನ ನಡೆಯಲಿದ್ದು, ಜ.21ರಂದು ಜಿಲ್ಲೆಯಲ್ಲಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2008 ಮತ್ತು 2018ರ ಚುನಾವಣೆಯಲ್ಲಿ ಸರ್ಕಾರ ರಚನೆಗೆ ಅಗತ್ಯವಾದ ಸ್ಥಾನಗಳಿಗಿಂತ ಬಿಜೆಪಿ ಕಡಿಮೆ ಸ್ಥಾನಗಳನ್ನು ಪಡೆದಿತ್ತು. ಆದರೆ, ಈ ಬಾರಿ ನಮ್ಮದೇ ಸ್ವಂತ ಶಕ್ತಿಯಿಂದ ರಾಜ್ಯದಲ್ಲಿ ಸರ್ಕಾರ ರಚನೆ ಸಾಧ್ಯವಾಗಲಿದೆ. ಪ್ರಸ್ತುತ ಚುನಾವಣೆ ಘೋಷಣೆ ಆಗದಿದ್ದರೂ, ಪಕ್ಷವನ್ನು ಬೂತ್ ಮಟ್ಟದಿಂದ ಸಶಕ್ತಗೊಳಿಸುವ ಕಾರ್ಯ ನಡೆದಿದ್ದು, ಪಕ್ಷವು ಚುನಾವಣೆಯನ್ನು ಯಾವಾಗ ಬಂದರೂ ಎದುರಿಸಲು ಸದಾ ಸಿದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿಯನ್ನು ತಳಮಟ್ಟದಿಂದ ಶಕ್ತಿಯುತಗೊಳಿಸುವ ಭಾಗವಾಗಿ ಇದೇ ಜ.2ರಿಂದ 12ರವರೆಗೆ ಬೂತ್ ಅಭಿಯಾನ ಕಾರ್ಯಕ್ರಮ ನಡೆಸಲಾಗಿದ್ದು, ಇದೀಗ 'ಬೂತ್ ವಿಜಯ ಸಂಕಲ್ಪ ಅಭಿಯಾನ'ವನ್ನು ಐತಿಹಾಸಿಕ ಕಾರ್ಯಕ್ರಮವನ್ನಾಗಿ ನಡೆಸುವ ಮೂಲಕ, ಪಕ್ಷದ ಬಲವರ್ಧನೆಯೊಂದಿಗೆ ರಾಜಕೀಯ ಸ್ಥಿರತೆಯನ್ನು ಕಂಡುಕೊಳ್ಳುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಬೂತ್ ವಿಜಯ ಸಂಕಲ್ಪ ಅಭಿಯಾನವನ್ನು, ಕೊಡಗಿನ 543 ಕೇಂದ್ರಗಳಲ್ಲಿ ನಡೆಸುವ ಮೂಲಕ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಕರಪತ್ರದ ಮೂಲಕ ಜನರ ಮನೆ ಮನೆಗಳಿಗೆ ತಲುಪಿಸಲಾಗುತ್ತದೆಂದು ತಿಳಿಸಿದರು.

ಮಡಿಕೇರಿ ವಿಧಾನಸಭಾ ಕ್ಷೇತ್ರದ ಬೂತ್ ವಿಜಯ ಸಂಕಲ್ಪ ಅಭಿಯಾನವನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್ ಹಾಗೂ ವಿರಾಜಪೇಟೆ ಕ್ಷೇತ್ರದ ಕಾರ್ಯಕ್ರಮವನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಹಾಗೂ ಸಂಸದ ಪ್ರತಾಪ ಸಿಂಹ ಅವರು ಜ.21 ರಂದು ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮಗಳಲ್ಲಿ ಜಿಲ್ಲಾ ಶಾಸಕರು, ಪಕ್ಷದ ಪ್ರಮುಖರು ಪಾಲ್ಗೊಳ್ಳಲಿದ್ದಾರೆಂದು ವಿವರಿಸಿದರು.

ಅಭಿಯಾನದ ಭಾಗವಾಗಿ ಜಿಲ್ಲೆಯ ಪ್ರತಿ ಬೂತ್ ವ್ಯಾಪ್ತಿಯಲ್ಲಿ ಕನಿಷ್ಠ 10 ಗೋಡೆ ಬರಹಗಳ ಪ್ರದರ್ಶಿಸಲು ನಿರ್ಧರಿಸಲಾಗಿದೆ. ಈ ಗೋಡೆ ಬರಹಗಳು ಕೇಂದ್ರ ಮತ್ತು ರಾಜ್ಯದ ಜನಪರ ಯೋಜನೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ಅವರು ತಿಳಿಸಿದರು. ರಾಜ್ಯ ವ್ಯಾಪಿ 1 ಕೋಟಿ ಸದಸ್ಯತ್ವವನ್ನು ಪಡೆಯುವ ಗುರಿಯನ್ನು ಬಿಜೆಪಿ ಹೊಂದಿದ್ದು, ಕೊಡಗಿನಲ್ಲಿ 1 ಲಕ್ಷ ಸದಸ್ಯತ್ವ ನಮ್ಮ ಗುರಿಯಾಗಿದೆ. ಪಕ್ಷದ ಮೊಬೈಲ್‌ಗೆ ಒಂದು ಮಿಸ್ ಕಾಲ್ ಮಾಡುವ ಮೂಲಕ ಸದಸ್ಯತ್ವವನ್ನು ಪಡೆಯಬಹುದಾಗಿದೆ ಎಂದು ರಾಬಿನ್ ದೇವಯ್ಯ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಬೂತ್ ವಿಜಯ ಸಂಕಲ್ಪ ಅಭಿಯಾನದ ಜಿಲ್ಲಾ ಸಂಚಾಲಕ ಡಾ.ನವೀನ್, ಸಹ ಸಂಚಾಲಕಿ ಯಮುನಾ ಚಂಗಪ್ಪ ಮಾಧ್ಯಮ ವಕ್ತಾರ ಸಜಿಲ್ ಕೃಷ್ಣ, ಜಿಲ್ಲಾ ಉಪಾಧ್ಯಕ್ಷ ಅರುಣ್ ಕುಮಾರ್ ಉಪಸ್ಥಿತರಿದ್ದರು.

ನಾಳೆ ಆರ್ಜಿ ಗ್ರಾಮದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಪೂರ್ಣಕುಂಭದೊಂದಿಗೆ ಸ್ತಬ್ಧ ಚಿತ್ರ ಮೆರವಣಿಗೆ, ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು



ವಿರಾಜಪೇಟೆ, ಜ.19– ಕನ್ನಡ ನಾಡು ನುಡಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜ.21 ರಂದು ಗಡಿ ಭಾಗವಾದ ವಿರಾಜಪೇಟೆ ತಾಲೂಕಿನ ಆರ್ಜಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 9ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದ್ದು ಸಮ್ಮೇಳನ ಯಶಸ್ವಿಗೊಳಿಸುವಂತೆ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಡಿ.ರಾಜೇಶ್ ಪದ್ಮನಾಭ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಒಂಬತ್ತನೇ ಸಮ್ಮೇಳನ ನಡೆಸಲಾಗುತ್ತಿದ್ದು ಗಡಿ ಭಾಗದಲ್ಲಿ ಕನ್ನಡ ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಅತ್ಯಂತ ಯಶಸ್ವಿಯಾಗಿ ಸಮ್ಮೇಳನ ನಡೆಯಬೇಕಾಗಿದೆ. ಸಮ್ಮೇಳನಕ್ಕೆ ಈಗಾಗಲೇ ಎಲ್ಲಾ ಸಿದ್ಧತೆಗಳು ನಡೆದಿದ್ದು ವಿವಿಧ ಸಮಿತಿಗಳನ್ನು ರಚನೆ ಮಾಡಿ ಜವಾಬ್ದಾರಿ ವಹಿಸಲಾಗಿದೆ. ಸಮ್ಮೇಳನದ ಅಧ್ಯಕ್ಷರಾಗಿ ಹೆಸರಾಂತ ಪಕ್ಷಿತಜ್ಞ, ಸಾಹಿತಿ, ವೈದ್ಯರಾದ ಡಾ. ಎಸ್.ವಿ. ನರಸಿಂಹನ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದರು.

ಜ.21 ರಂದು ಬೆಳಗ್ಗೆ 8.30 ಗಂಟೆಗೆ ಧ್ವಜಾರೋಹಣದ ನಂತರ ಸ್ತಬ್ಧಚಿತ್ರ ಹಾಗೂ ಪೂರ್ಣಕುಂಭದೊಂದಿಗೆ ಬೇಟೋಳಿ ಗ್ರಾಮ ಪಂಚಾಯಿತಿ ಮುಂಭಾಗದಿಂದ ಮೆರವಣಿಗೆ ಹೊರಟು ಮೊರಾರ್ಜಿ ದೇಸಾಯಿ ಶಾಲೆವರೆಗೆ ಸಾಗಲಿದೆ. ಮೆರವಣಿಗೆಯ ಉದ್ಘಾಟನೆಯನ್ನು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಅವರು ನೆರವೇರಿಸಲಿದ್ದಾರೆ. ಬಳಿಕ ದ್ವಾರಗಳ ಉದ್ಘಾಟನೆ ನಂತರ ಸಭಾ ಕಾರ್ಯಕ್ರಮಗಳು ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ಒತ್ತು ನೀಡುವಂತಹ ಹಾಡುಗಳಿಗೆ ಅವಕಾಶ ನೀಡಲಾಗಿದೆ. ಸಮ್ಮೇಳನದಲ್ಲಿ ಬೃಹತ್ ನಾಣ್ಯ ಮತ್ತು ನೋಟುಗಳ ಪ್ರದರ್ಶನ ನಡೆಯಲಿದೆ, ಮಧ್ಯಾಹ್ನ ಗೋಷ್ಠಿಯಲ್ಲಿ ವಿರಾಜಪೇಟೆ ತಾಲೂಕಿನ ಗಡಿಭಾಗದ ಜನರ ಬದುಕು ಮತ್ತು ಬವಣೆಯ ಬಗ್ಗೆ ಸೋಮೆಯಂಡ ಕೌಸಲ್ಯ ಹಾಗೂ ಗಡಿ ಭಾಗದಲ್ಲಿ ಸಮ್ಮೇಳನದ ಅಗತ್ಯತೆ ಬಗ್ಗೆ ಡಾ. ಡಿ.ಕೆ.ಉಷಾ ಮತ್ತು ತಾಲೂಕಿನಲ್ಲಿ ಕನ್ನಡ ಭಾಷಾ ಶಿಕ್ಷಣ ಮತ್ತು ಸ್ಥಿತಿಗತಿ ಬಗ್ಗೆ ಅರ್ಜುನ್ ಅವರುಗಳು ಉಪನ್ಯಾಸ ನೀಡಲಿದ್ದಾರೆ.

ಕೊಡಗಿನ ಪಕ್ಷಿಲೋಕದ ಹಿನ್ನೋಟದ ಬಗ್ಗೆ ಶ್ರೀಕಾಂತ್ ರಾವ್, ನಂತರ ಗಣ್ಯವ್ಯಕ್ತಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ವಿರಾಜಪೇಟೆ ಕಸಾಪದ ಕೋಶಾಧಿಕಾರಿ ಶಬರೀಶ್ ಶೆಟ್ಟಿ ಮಾತನಾಡಿ, ಸಮಾರೋಪ ಸಮಾರಂಭದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದಲ್ಲಿ ಸ್ತ್ರೀಶಕ್ತಿ, ಸ್ವ ಸಹಾಯ ಸಂಘಗಳು, ಗ್ರಾಮ ಅಭಿವೃದ್ಧಿ ಯೋಜನೆಯ ಸದಸ್ಯರು, ಸಂಜೀವಿನಿ ಒಕ್ಕೂಟದ ಸದಸ್ಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಆರ್ಜಿ ಮತ್ತು ಬೇಟೋಳಿ ಗ್ರಾಮ ಪಂಚಾಯಿತಿ ಸದಸ್ಯರು, ಸಾಹಿತ್ಯಾಭಿಮಾನಿಗಳು, ಗ್ರಾಮಸ್ಥರು, ಸಾರ್ವಜನಿಕರು ಭಾಗವಹಿಸಲಿದ್ದು, ವ್ಯವಸ್ಥಿತವಾಗಿ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದಂದು ಸದಸ್ಯತ್ವ ನೋಂದಣಿಯನ್ನು ಸ್ಥಳದಲ್ಲೇ ಮಾಡಲಾಗುವುದು. ಮಾಜಿ ಸೈನಿಕರಿಗೆ ಉಚಿತವಾಗಿ ನೋಂದಣಿ ಮಾಡಿಕೊಡಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸದಸ್ಯತ್ವ ನೋಂದಣಿ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ



ಮಡಿಕೇರಿ, ಜ.19– ಮಡಿಕೇರಿ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅನಾವರಣಗೊಳಿಸಿದರು. ನಗರದ ಶಾಸಕರ ಕಚೇರಿಯಲ್ಲಿ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿ, ಸಮ್ಮೇಳನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವಕಾಮತ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಮಡಿಕೇರಿ ತಾಲೂಕು ಅಧ್ಯಕ್ಷ ಅಂಬೆಕಲ್ ನವೀನ್, ಜಿಲ್ಲಾ ಗೌರವ ಕಾರ್ಯದರ್ಶಿ ರೇವತಿ ರಮೇಶ್, ತಾಲೂಕು ಗೌರವ ಕಾರ್ಯದರ್ಶಿ ಕಡ್ಲೆರ ತುಳಸಿ ಮೋಹನ್, ನಿರ್ದೇಶಕಿ ಪ್ರೇಮ ರಾಘವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಚಾಲಕನ ಸಮಯಪ್ರಜ್ಞೆಯಿಂದ ತಪ್ಪಿದ ಭಾರೀ ಅನಾಹುತ

ಬ್ರೇಕ್ ವಿಫಲಗೊಂಡು ರಸ್ತೆ ಬದಿಗೆ ಮಗುಚಿದ ಲಾರಿ; ಚಾಲಕ, ಕ್ಲೀನರ್ ಪಾರು




ಮಡಿಕೇರಿ, ಜ.19– ನೂರಾರು ಸುಣ್ಣದ ಚೀಲ ತುಂಬಿದ ಲಾರಿಯೊಂದು ಬ್ರೇಕ್ ವಿಫಲಗೊಂಡು ರಸ್ತೆ ಬದಿಗೆ ಮಗುಚಿ ಬಿದ್ದ ಘಟನೆ ಮೇಕೇರಿ ಮಸೀದಿ ಬಳಿ ನಡೆದಿದೆ. ಗುರುವಾರ ಬೆಳಗ್ಗೆ 8.30ರ ಸಮಯದಲ್ಲಿ ಮಡಿಕೇರಿ ಮಾರ್ಗವಾಗಿ ಮೂರ್ನಾಡುವಿಗೆ ಸುಣ್ಣದ ಚೀಲಗಳನ್ನು ಸಾಗಿಸುತ್ತಿದ್ದ 12 ಚಕ್ರದ ಲಾರಿಯ ಬ್ರೇಕ್ ಮೇಕೇರಿ ಮಸೀದಿ ಇಳಿಜಾರು ರಸ್ತೆಯಲ್ಲಿ ವಿಫಲವಾಗಿದೆ.

ಬೆಳಗಿನ ಸಮಯವಾದ ಕಾರಣ ಮಡಿಕೇರಿ–ಮೂರ್ನಾಡು–ವಿರಾಜಪೇಟೆ ರಾಜ್ಯ ಹೆದ್ದಾರಿಯಲ್ಲಿ ಹತ್ತಾರು ವಾಹನಗಳು ಸಂಚರಿಸುತ್ತಿದ್ದವು. ಮಾತ್ರವಲ್ಲದೇ ಇದೇ ರಸ್ತೆಯಲ್ಲಿ ಶಾಲಾ ಮಕ್ಕಳು ಕೂಡ ನಡೆದುಕೊಂಡು ಮೇಕೇರಿ ಶಾಲೆಗೆ ತೆರಳುತ್ತಿದ್ದರು. ಮುಂದಾಗಬಹುದಾದ ಭಾರಿ ಅನಾಹುತವನ್ನು ಅರಿತ ಚಾಲಕ ಲಾರಿಯನ್ನು ನಿಯಂತ್ರಿಸಲು ಹರಸಾಹಸಪಟ್ಟಿದ್ದಾನೆ. ಲಾರಿ ನಿಯಂತ್ರಣಕ್ಕೆ ಬಾರದ ಸಂದರ್ಭ ಸಮಯಪ್ರಜ್ಞೆ ಮೆರೆದ ಚಾಲಕ ಸರಕು ತುಂಬಿದ್ದ ಲಾರಿಯನ್ನು, ರಸ್ತೆ ಬದಿಗೆ ಕೊಂಡೊಯ್ದು ಬರೆಗೆ ಡಿಕ್ಕಿ ಹೊಡೆದು ನಿಲ್ಲಿಸಲು ಪ್ರಯತ್ನಿಸಿದ್ದಾನೆ. ಈ ವೇಳೆ ಲಾರಿ ಕಲ್ಲಿನ ಮೇಲೇರಿ ರಸ್ತೆಯಲ್ಲಿ ಮಗುಚಿ ಬಿದ್ದಿದೆ. ಪರಿಣಾಮ ಲಾರಿ ಜಖಂಗೊಂಡಿದ್ದು, ಸುಣ್ಣ ತುಂಬಿದ ಚೀಲಗಳು ರಸ್ತೆಗೆ ಬಿದ್ದಿವೆ. ಲಾರಿ ಚಾಲಕ ಮತ್ತು ಕ್ಲೀನರ್ ಇಬ್ಬರೂ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಲಾರಿ ಚಾಲಕನ ಸಮಯಪ್ರಜ್ಞೆಯಿಂದ ಭಾರೀ ಅನಾಹುತವೊಂದು ಕೂದಲೆಳೆಯ ಅಂತರದಲ್ಲಿ ತಪ್ಪಿದಂತಾಗಿದೆ. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮೇಕೇರಿ ಮಸೀದಿ ರಸ್ತೆ ತೀರಾ ಇಳಿಜಾರು ಮತ್ತು ತಿರುವುಗಳಿಂದ ಕೂಡಿದ್ದು, ಈ ಹಿಂದೆ ಘಟಿಸಿದ್ದ ರಸ್ತೆ ಅಪಘಾತಗಳಲ್ಲಿ ಜೀವ ಹಾನಿಗಳು ಸಂಭವಿಸಿವೆ.

ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಅರುಣ್ ಅಪ್ಪಣ್ಣ ನಿಧನ



ವಿರಾಜಪೇಟೆ, ಜ.19– ಸಮೀಪದ ಕಂಡಂಗಾಲ ಗ್ರಾಮದ ನಿವಾಸಿ ವಿರಾಜಪೇಟೆಯ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ, ಹಾಲಿ ಕಾರ್ಯದರ್ಶಿ ಮೂಕಚಂಡ ಅರುಣ್ ಅಪ್ಪಣ್ಣ (63) ಅವರು ಗುರುವಾರ ಮುಂಜಾನೆ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅರುಣ್ ಅಪ್ಪಣ್ಣ ಅವರು ಕನ್ನಡ ಸಾಹಿತ್ಯ ಪರಿಷತ್, ಬೇರಳಿನಾಡು ಉರುತಕ್ಕರಾಗಿ, ಬೂಟ್ಟಿಯತ್ ಮೊಂದ್, ಕೈಮುಡಿ ಕೋಲ್ ಮೊಂದ್‌ನಲ್ಲಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಹಾಗೂ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕಂಡಂಗಾಲದಲ್ಲಿ ನಡೆಯಿತು.

ಸಂತಾಪ: ಅರುಣ್ ಅಪ್ಪಣ್ಣ ಅವರ ನಿಧನಕ್ಕೆ ವಿರಾಜಪೇಟೆ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸಭೆ ನಡೆಸಿ ಸಂತಾಪ ಸೂಚಿಸಲಾಯಿತು. ಸಂಘದ ಅಧ್ಯಕ್ಷ ಮಾಳೇಟಿರ ಎಂ.ಬೆಲ್ಲು ಬೋಪಯ್ಯ, ಕರ್ನಾಟಕ ಸಂಘದ ಉಪಾಧ್ಯಕ್ಷರು, ಸಹ ಕಾರ್ಯದರ್ಶಿ, ಕೋಶಾಧಿಕಾರಿ ಸೇರಿದಂತೆ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದು, ಸಂತಾಪ ಸೂಚಿಸಿದರು.

ಸಾವಿತ್ರಿ ರಾಮಕುಟ್ಟಿ ನಾಯರ್



ವಿರಾಜಪೇಟೆ, ಜ.19– ವಿರಾಜಪೇಟೆಯ ಅರಸು ನಗರದ ನಿವಾಸಿ ಸಾವಿತ್ರಿ ರಾಮಕುಟ್ಟಿ ನಾಯರ್ (63) ಬುಧವಾರ ರಾತ್ರಿ ನಿಧನರಾಗಿದ್ದಾರೆ. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ಓರ್ವ ಪುತ್ರಿ ಮತ್ತು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಗರದ ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕುಶಾಲನಗರದಲ್ಲಿ ಅವಧಿ ಮೀರಿದ ಮದ್ಯ ನಾಶ

ಕುಶಾಲನಗರ, ಜ.19– ಸಮೀಪದ ಸುಂದರ ನಗರದ ಕೈಗಾರಿಕಾ ಬಡಾವಣೆಯಲ್ಲಿರುವ ಕರ್ನಾಟಕ ರಾಜ್ಯ ಪಾನೀಯ ನಿಗಮದ ಘಟಕದ ಗೋದಾಮಿನಲ್ಲಿ ಮಾರಾಟವಾಗದ ಅವಧಿ ಮೀರಿ ಉಳಿದ, ಸೇವನೆಗೆ ಯೋಗ್ಯವಲ್ಲದ ಮದ್ಯವನ್ನು ನಾಶಪಡಿಸಲಾಯಿತು.

ಅಬಕಾರಿ ಇಲಾಖೆಯ ಸೋಮವಾರಪೇಟೆ ತಾಲೂಕು ಉಪ ಅಧೀಕ್ಷಕಿ ಆರ್.ಎಂ. ಚೈತ್ರಾ ನೇತೃತ್ವದಲ್ಲಿ 4.33 ಲಕ್ಷ ರೂ. ಮೌಲ್ಯದ ಅವಧಿ ಮೀರಿದ 237 ಬಾಕ್ಸ್ ವಿವಿಧ ಕಂಪನಿಯ ಬಿಯರ್ ಅನ್ನು ಹಾಗೂ 103 ಬಿಡಿ ಬಾಟಲ್‌ಗಳನ್ನು ಅಧಿಕಾರಿಗಳ ಸಮ್ಮುಖದಲ್ಲಿ ಗುಂಡಿಗೆ ಸುರಿದು ನಾಶಪಡಿಸಲಾಯಿತು. ಈ ಸಂದರ್ಭ ಕೆಎಸ್‌ಬಿಸಿಎಲ್ ಘಟಕದ ವ್ಯವಸ್ಥಾಪಕ ಜಿ.ಎಂ.ಮಹಾದೇವಯ್ಯ, ಘಟಕದ ಮೇಲುಸ್ತುವಾರಿ ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಬಿ.ಎಸ್.ಲೋಕೇಶ್, ಅಬಕಾರಿ ಸಿಬ್ಬಂದಿಗಳಾದ ನಾಗರಾಜು, ರಶ್ಮಿ, ಎಎಸ್‌ಐ ಕುಮಾರಿ ಸೇರಿದಂತೆ ಅಬಕಾರಿ ಸಿಬ್ಬಂದಿಗಳು, ಪೊಲೀಸ್, ಕಂದಾಯ ಇಲಾಖೆಯ ಸಿಬ್ಬಂದಿಗಳು ಇದ್ದರು.



ಜಮೀನಿನಲ್ಲಿ ಹುಲಿ ಹೆಜ್ಜೆ ಪತ್ತೆ

ಕಮರಹಳ್ಳಿ ಕೆರೆಯಲ್ಲಿ ನೀರು ಕುಡಿದು ಹಿಂತಿರುಗಿರುವ ಹುಲಿ



ಬೇಗೂರು(ಗುಂಡ್ಲುಪೇಟೆ), ಜ.19– ಸೋಮಹಳ್ಳಿ ರಸ್ತೆಯ ಜಮೀನೊಂದರಲ್ಲಿ ಹುಲಿಯ ಹೆಜ್ಜೆ ಗುರುತುಗಳು ಕಾಣಿಸಿಕೊಂಡಿದ್ದು, ರೈತರು ಆತಂಕಗೊಂಡಿದ್ದಾರೆ.

ಬೇಗೂರು–ಸೋಮಹಳ್ಳಿ ರಸ್ತೆಯ ಕೆ.ಇ.ಬಿ ಪವರ್ ಸ್ಟೇಷನ್ ಸಮೀಪದಲ್ಲಿರುವ ಕಂಟ್ರಾಕ್ಟರ್ ನಾಗರಾಜು ಎಂಬುವರ ಜಮೀನಿನಲ್ಲಿ ಹುಲಿಯ ಹೆಜ್ಜೆ ಗುರುತುಗಳು ಕಾಣಿಸಿಕೊಂಡಿದ್ದು ಜಮೀನಿನ ಮೂಲಕವೇ ಕಮರಹಳ್ಳಿ ಕೆರೆಗೆ ನೀರು ಕುಡಿಯಲು ಹುಲಿ ತೆರಳಿದ್ದು ಅದೇ ಮಾರ್ಗದಲ್ಲಿ ವಾಪಸ್ಸಾಗಿರುವ ಗುರುತುಗಳು ಕಾಣಿಸಿಕೊಂಡಿವೆ. ಹೀಗಾಗಿ ಬೇಗೂರಿನಿಂದ ಸೋಮಹಳ್ಳಿ ಗ್ರಾಮಕ್ಕೆ ತೆರಳುವ ವಾಹನ ಸವಾರು ಎಚ್ಚರಿಕೆಯಿಂದ ಸಂಚರಿಸಬೇಕಾಗಿದೆ. ಕೂಡಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಇತ್ತ ಗಮನ ಹರಿಸಿ ಪರಿಶೀಲಿಸಿ ಬೋನ್ ಇಡಲು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷ ಆಗ್ರಹಿಸಿದ್ದಾರೆ. ಓಂಕಾರ ಅರಣ್ಯ ವಲಯದಿಂದ ಹುಲಿ, ಚಿರತೆ ಸೇರಿದಂತೆ ಇನ್ನಿತರ ಕಾಡು ಪ್ರಾಣಿಗಳು ನಾಡಿನತ್ತ ಧಾವಿಸುತ್ತಿದ್ದು ಅವುಗಳ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಅಪ್ರಾಪ್ತೆಯ ಅಪಹರಣ, ಲೈಂಗಿಕ ದೌರ್ಜನ್ಯ: 2 ವರ್ಷ ಜೈಲು

ಚಾಮರಾಜನಗರ, ಜ.19– ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ ನಗರದ ಮಕ್ಕಳ ಸ್ನೇಹಿ ಹಾಗೂ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಪೋಕ್ಸೋ ಕಾಯ್ದೆಯಡಿ 2 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ಜಿಲ್ಲೆಯ ಹನೂರು ತಾಲೂಕಿನ ಮಂಗಲ ಗ್ರಾಮದ ರಮೇಶ (23) ಶಿಕ್ಷೆಗೊಳಗಾದ ಅಪರಾಧಿ. ಈತ 2020ರ ಸೆ.29 ರಂದು ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಲೈಂಗಿಕ ಕಿರುಕುಳ ಎಸಗಿದ್ದಾನೆ ಎಂದು ಹನೂರು ಠಾಣೆಯ ಅಂದಿನ ಎಸ್‌ಐ ನಾಗೇಶ್ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು. ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಎ.ಸಿ. ನಿಶಾರಾಣಿಯವರು ಅಪರಾಧಿಗೆ 2 ವರ್ಷ ಜೈಲು ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿದ್ದಾರೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಬಾಲಕಿಗೆ 20 ಸಾವಿರ ರೂ. ಪರಿಹಾರ ನೀಡಬೇಕೆಂದು ತೀರ್ಪು ನೀಡಿದ್ದಾರೆ.

ಕಾಡಾನೆ ದಾಳಿಗೆ ವಾಚರ್ ಸಾವು

ಗಜಪಡೆ ಹಿಂಡು ಕಾಡಿಗಟ್ಟುವ ವೇಳೆ ದುರಂತ



ಚಾಮರಾಜನಗರ, ಜ.19– ಜಿಲ್ಲೆಯಲ್ಲಿ ಕಳೆದೊಂದು ತಿಂಗಳಿನಿಂದ ಕಾಡಾನೆಗಳ ಉಪಟಳ ಹೆಚ್ಚಾಗಿದ್ದು, ಕಾಡಾನೆ ದಾಳಿ ಪರಿಣಾಮ ಅರಣ್ಯ ಇಲಾಖೆ ದಿನಗೂಲಿ ನೌಕರ(ವಾಚರ್) ಸಾವನ್ನಪ್ಪಿರುವ ಘಟನೆ ತಾಲೂಕಿನ ಪ್ರಾದೇಶಿಕ ವಲಯ ವ್ಯಾಪ್ತಿಯ ಎತ್ತುಗಟ್ಟಿ ಬೆಟ್ಟದಲ್ಲಿನ ದೇವಸ್ಥಾನ ಬಳಿ ನಡೆದಿದೆ. ತಾಲೂಕಿನ ಪುಣಜನೂರು ವಲಯದ ಹೊಸಪೋಡಿನ ನಂಜಯ್ಯ (35) ಮೃತ ವ್ಯಕ್ತಿ.

ಘಟನೆಯ ವಿವರ: ಕಳೆದ ಕೆಲವು ದಿನಗಳಿಂದಲೂ ಕಾಡಾನೆಗಳ ಹಿಂಡು ತಾಲೂಕಿನ ವಡ್ಗಲ್‌ಪುರ, ಚೆನ್ನಪ್ಪನಪುರ ಸೇರಿದಂತೆ ಇತರೆ ಗ್ರಾಮಗಳ ಜಮೀನುಗಳ ವ್ಯಾಪ್ತಿಯಲ್ಲಿ ಬೀಡು ಬಿಟ್ಟಿದ್ದು ಜಮೀನುಗಳಲ್ಲಿ ಬೆಳೆದಿದ್ದ ಫಸಲು ನಾಶ ಪಡಿಸಿರುವುದಲ್ಲದೇ ಒಂದು ಎತ್ತು ಸಾವಿಗೂ ಕಾರಣವಾಗಿದ್ದವು. ಇದರಿಂದ ಈ ಭಾಗದ ಜನರು ಭಯಭೀತರಾಗಿದ್ದರು.

ತಮಿಳುನಾಡಿನ ಸತ್ಯಮಂಗಲ ಅರಣ್ಯ ಪ್ರದೇಶದಿಂದ ಬಂದಿದ್ದ ಆನೆಗಳ ಹಿಂಡನ್ನು ವಾಪಸ್ಸು ಕಳುಹಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ ಕೈಗೊಂಡಿತ್ತು.

ಈ ಹಿನ್ನೆಲೆಯಲ್ಲಿ ಎತ್ತುಗಟ್ಟಿ ಕ್ಯಾಂಪ್‌ಗೆ ಒಳಪಡುವ ಚೆನ್ನಪ್ಪನಪುರ ಗುಡ್ಡದಲ್ಲಿ ಬೀಡು ಬಿಟ್ಟಿದ್ದ ಸುಮಾರು 60ರಿಂದ 65 ಆನೆಗಳನ್ನು ಕಾಡಿನತ್ತ ಓಡಿಸಲು ಕಾರ್ಯ ಪ್ರವೃತ್ತರಾದ ಅರಣ್ಯ ಇಲಾಖೆ ಸಿಬ್ಬಂದಿ ಚೆನ್ನಪ್ಪನಪುರ ಗುಡ್ಡದಲ್ಲಿನ ದೇವಸ್ಥಾನದ ಬಳಿಯಿಂದ ಆನೆಗಳನ್ನು ಅಟ್ಟುವ ಕಾರ್ಯ ನಡೆಸಿದ್ದಾರೆ. ಈ ವೇಳೆ ಇಲ್ಲಿಂದ ಹೊರಟ ಆನೆಗಳ ಹಿಂಡು ತಮಿಳುನಾಡು ಗಡಿಯಲ್ಲಿನ ಎತ್ತುಗಟ್ಟಿ ದೇವಸ್ಥಾನದ ಹತ್ತಿರ ತೆರಳಿವೆ.

ಈ ವೇಳೆ ಆನೆಗಳನ್ನೇ ಹಿಂಬಾಲಿಸಿದ ಅರಣ್ಯ ಇಲಾಖೆಯ ಸುಮಾರು 20ರಿಂದ 30 ಸಿಬ್ಬಂದಿಯನ್ನು ಕಂಡು ಗಾಬರಿಗೊಂಡ ತಾಯಿ ಆನೆಯೊಂದು ಹಿಂದಿರುಗಿ ಸಿಬ್ಬಂದಿ ಮೇಲೆ ದಾಳಿ ಮಾಡಲು ಮುಂದಾಗಿದೆ. ಈ ವೇಳೆ ಸಿಬ್ಬಂದಿ ಚದುರಿ ಹೋಗಿದ್ದು ಆನೆಯು ನಂಜಯ್ಯ ಮೇಲೆ ದಾಳಿ ನಡೆಸಿ ತುಳಿದಿದೆ.

ಬಳಿಕ ಸಿಬ್ಬಂದಿ ಕೂಗಾಟದಿಂದ ಸ್ಥಳದಿಂದ ಆನೆ ಕಾಲ್ಕಿತ್ತಿದೆ. ತೀವ್ರ ಗಾಯಗೊಂಡಿದ್ದ ನಂಜಯ್ಯನನ್ನು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

ಮರಣೋತ್ತರ ಪರೀಕ್ಷೆ ಬಳಿಕ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ನಂಜಯ್ಯ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಶಾಸಕರ ಭೇಟಿ: ವಿಷಯ ತಿಳಿದು ಸಿಮ್ಸ್ ಆಸ್ಪತ್ರೆಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಭೇಟಿ ನೀಡಿ ಮೃತ ನಂಜಯ್ಯ ಅವರ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬಳಿಕ ಮಾತನಾಡಿ, ಮೃತರ ಕುಟುಂಬಕ್ಕೆ 50ಲಕ್ಷ ರೂ. ಪರಿಹಾರ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದರು. ಈ ವೇಳೆ ಆರ್‌ಎಫ್‌ಒ ಉಮೇಶ್, ಡಿಆರ್‌ಎಫ್‌ಒ ಚಂದ್ರಕುಮಾರ್, ಎಸಿಎಫ್ ಸುರೇಶ್ ಹಾಜರಿದ್ದರು.

ಕೆಲಸಕ್ಕೆ ಸೇರಿ 2 ದಿನ ಕಳೆದಿತ್ತು

ಆನೆ ದಾಳಿಯಿಂದ ಮೃತಪಟ್ಟಿರುವ ನಂಜಯ್ಯ ಕೆಲಸಕ್ಕೆ ಸೇರಿ ಕೇವಲ ಎರಡು ದಿನಗಳಾಗಿತ್ತು. ಆನೆಗಳ ಹಿಂಡನ್ನು ಓಡಿಸಲು ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ದಿನಗೂಲಿಯಲ್ಲಿ ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೆ ಅರಣ್ಯ ಇಲಾಖೆ ಮುಂದಾಗಿತ್ತು. ಈ ವೇಳೆ ನಂಜಯ್ಯ ಕೂಡ ದಿನಗೂಲಿ ನೌಕರನಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ಎರಡು ದಿನಗಳ ಹಿಂದೆ ಕೆಲಸಕ್ಕೆ ಸೇರಿದ್ದ ನಂಜಯ್ಯನನ್ನು ವಿಧಿ ಆನೆಯ ರೂಪದಲ್ಲಿ ಬಲಿ ಪಡೆದಿದೆ. ನಂಜಯ್ಯ ಕುಟುಂಬಸ್ಥರ ರೋದನ ಮುಗಿಲು ಮುಟ್ಟಿತ್ತು.



ಇಂದಿನಿಂದ ಕಾಂಚಳ್ಳಿಯಲ್ಲಿ 'ಕತ್ತಿ ಹಬ್ಬ'



ಹನೂರು, ಜ.19– ಹನೂರು ತಾಲೂಕು ಕಾಂಚಳ್ಳಿ ಗ್ರಾಮದಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ನಾಳೆ (ಜ.20)ಯಿಂದ ಜ.22ರವರೆಗೆ ಮೂರು ದಿನಗಳ ಕಾಲ ಕತ್ತಿ ಹಬ್ಬ ವಿಜೃಂಭಣೆಯಿಂದ ನಡೆಯಲಿದೆ.

ಶುಕ್ರವಾರ ಬೆಳಗ್ಗೆ 9 ಗಂಟೆಗೆ ಅಜ್ಜೀಪುರ ಗ್ರಾಮದ ತೋಟದ ಬಾವಿಯಿಂದ ಹಾಲರವಿ, ವೀರಕುಮಾರರಿಂದ ಕತ್ತಿ ಸೇವೆ ಪ್ರದರ್ಶನದೊಂದಿಗೆ 'ಕತ್ತಿ ಕರೆತ' ಮಹಾ ತಳಿಗೆ ಪೂಜೆ, ಮಧ್ಯಾಹ್ನ 12ರಿಂದ ಅನ್ನಸಂತರ್ಪಣೆ ನಡೆಯಲಿದೆ.

ಜ.21ರಂದು ಬೆಳಗ್ಗೆ 8.45ರಿಂದ ಅಜ್ಜೀಪುರ ಗ್ರಾಮದ ತೋಟದ ಬಾವಿಯಿಂದ ಚಾಮುಂಡಿ ಕರೆ ತರುವುದು. ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6ಕ್ಕೆ ರಾಮಲಿಂಗ ಚೌಡೇಶ್ವರಿ ಅಮ್ಮನವರು ಶೆಟ್ಟಿಗಾರರಾದ ಜಾ. ನಟರಾಜ ಶೆಟ್ಟಿ ಮನೆಯಿಂದ ಹೊರಟು ದೇವಸ್ಥಾನ ತಲುಪುವುದು. ನಂತರ ಜ್ಯೋತಿ ಆಹ್ವಾನ. ಜ.22ರಂದು ಬೆಳಗ್ಗೆ 9 ಗಂಟೆಗೆ ಅರಿಸಿನ ನೀರು ಮೆರವಣಿಗೆ ನಡೆಯಲಿದೆ.

ಫೆ.8, 9ರಂದು ಕೊಳ್ಳೇಗಾಲದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಚಾಮರಾಜನಗರ, ಜ.19– ಕೊಳ್ಳೇಗಾಲದಲ್ಲಿ ಫೆ.8 ಮತ್ತು 9ರಂದು ಜಿಲ್ಲೆಯ 12ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಸಮ್ಮೇಳನದ ಸರ್ವಾಧ್ಯಕ್ಷರಾಗಿ ಜಾನಪದ ಸಂಶೋಧಕರಾದ ಮಹಾದೇವ ಶಂಕನಪುರ ಅವರು ಆಯ್ಕೆಯಾಗಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಎಂ. ಶೈಲಕುಮಾರ್ ಅವರು ಈ ವಿಷಯ ತಿಳಿಸಿದರು. ಚಾಮರಾಜನಗರ ಜಿಲ್ಲೆಯಾಗಿ 25 ವರ್ಷ ಕಳೆಯಿತು. ಈ ಹಿನ್ನೆಲೆಯಲ್ಲಿ ಬೆಳ್ಳಿಹಬ್ಬದ ಸಂಭ್ರಮ ನಡೆಯಬೇಕಾಗಿತ್ತು ಇದು ನಡೆಯದ ಕಾರಣ ಕೊಳ್ಳೇಗಾಲದಲ್ಲಿ ನಡೆಯುವ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೆಳ್ಳಿ– ಬೆಳಕು ನುಡಿ ಜಾತ್ರೆ ಹೆಸರಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ಮೈದಾನದಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನವನ್ನು ಕಸಾಪ ರಾಜ್ಯಾಧ್ಯಕ್ಷರಾದ ಮಹೇಶ್‌ಜೋಷಿ ಅವರು ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶಾಸಕ ಎನ್. ಮಹೇಶ್ ಅವರು ಆಯ್ಕೆಯಾಗಿದ್ದಾರೆ ಎಂದು ಶೈಲಕುಮಾರ್ ತಿಳಿಸಿದರು.

ಸಮ್ಮೇಳನದಲ್ಲಿ ಜಾನಪದ ಗೋಷ್ಠಿ, ಶಿಕ್ಷಣ, ಆರೋಗ್ಯ ಹಾಗೂ ಮಾಧ್ಯಮ ಕ್ಷೇತ್ರದ ಬಗ್ಗೆ ಚರ್ಚೆಗಳು ನಡೆಯಲಿವೆ. ಸಮ್ಮೇಳನಕ್ಕೆ ಸರ್ಕಾರದಿಂದ 5ಲಕ್ಷ ರೂ. ಬಿಡುಗಡೆ ಆಗಲಿದೆ. ಈ ಹಣದಲ್ಲಿ ಸಮ್ಮೇಳನ ನಡೆಸಲು ಆಗದೆ ಇರುವ ಕಾರಣ ಜೋಳಿಗೆ ಹಿಡಿದು ದಾನಿಗಳಿಂದ ಪ್ರಾಯೋಜಕತ್ವ ಪಡೆಯಲಾಗುವುದು ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಸಾಪ ಕೋಶಾಧ್ಯಕ್ಷ ನಿರಂಜನಕುಮಾರ್, ಗೌರವ ಕಾರ್ಯದರ್ಶಿ ಮಹಾವೀರ ಗಿರ್ಗಿ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಎಸ್. ನಾಗರಾಜು, ಕಾರ್ಯಕಾರಿಣಿ ಸದಸ್ಯರಾದ ಅರಕಲವಾಡಿ ನಾಗೇಂದ್ರ ಇದ್ದರು.

ಸಮ್ಮೇಳನಾಧ್ಯಕ್ಷರ ಪರಿಚಯ



ಹೆಸರು: ಮಹಾದೇವ ಶಂಕನಪುರ
ಹುಟ್ಟಿದ ದಿನಾಂಕ: 14.7.1961 (61ವರ್ಷ)
ವಿದ್ಯಾರ್ಹತೆ: ಎಂಎ, ಎಂಫಿಲ್ (ಇತಿಹಾಸ)
ವೃತ್ತಿ: ನಿವೃತ್ತ ಸಹಾಯಕ ಪ್ರಾಧ್ಯಾಪಕ
ಪ್ರಕಟಿತ ಕೃತಿಗಳು: ಮಾರಿಹಬ್ಬಗಳು, ಮಂಟೇಸ್ವಾಮಿ ಮೂಮೆಂಟ್, ನಾಲಿಗೆ ಮೇಲಿನ ಚರಿತೆ ಲೇಖನಗಳ ಸಂಗ್ರಹ, ಚಾಮರಾಜನಗರ ಜಿಲ್ಲೆಯ ಜಾನಪದ ಕಲಾವಿದರು, ಇತರೆ ಕೃತಿಗಳು.
ಪ್ರಶಸ್ತಿಗಳು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಮೈಸೂರು ವಿವಿ ತಿನಂಶ್ರೀ ಪ್ರಶಸ್ತಿ ಸೇರಿದಂತೆ ಇತರೆ ಪ್ರಶಸ್ತಿಗಳು ಸಂದಿವೆ.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಹಾದೇವ ಶಂಕನಪುರ

ಪಡಿತರ ಅಕ್ಕಿ ಸಾಗಿಸುತ್ತಿದ್ದ ಮೈಸೂರಿನ ಇಬ್ಬರ ಬಂಧನ

ಬೇಗೂರು(ಗುಂಡ್ಲುಪೇಟೆ), ಜ.19– ಸಮೀಪದ ಹಿರೀಕಾಟಿ ಗೇಟಿನ ಬಳಿ ಪ್ಯಾಸೆಂಜರ್ ಆಟೋ ಒಂದರಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಇಬ್ಬರನ್ನು ಬೇಗೂರು ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿ ಅಕ್ಕಿ ಮತ್ತು ಆಟೋವನ್ನು ವಶಕ್ಕೆ ಪಡೆದು, ಮೈಸೂರಿನ ಗೌಸಿಯಾನಗರದ ಅಬ್ದುಲ್ ಮತ್ತು ಫರಾನ್ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡಿದ್ದಾರೆ. ಆಹಾರ ನಿರೀಕ್ಷಕಿ ಭಾರತಿಯವರು ದೂರು ನೀಡಿದ್ದಾರೆ.

ನಾಳೆ ವಿದ್ಯುತ್ ಅದಾಲತ್

ಚಾಮರಾಜನಗರ, ಜ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ' ವಿದ್ಯುತ್ ಅದಾಲತ್ ಆಂದೋಲನ ಕಾರ್ಯಕ್ರಮವನ್ನು ಜ.21 ರಂದು ಬೆಳಗ್ಗೆ 11 ಗಂಟೆಗೆ ಸಂತೇಮರಹಳ್ಳಿ ಉಪವಿಭಾಗದ ಕಾಗಲವಾಡಿ ವ್ಯಾಪ್ತಿಯ ಮಹದೇವೇಗೌಡನಕೊಪ್ಪಲು ಗ್ರಾಮದಲ್ಲಿ ಏರ್ಪಡಿಸಲಾಗಿದೆ.

ಶ್ರೀ ಚಾಮರಾಜೇಶ್ವರ ರಥದ ಮನೆಗೆ ಮೇಲ್ಚಾವಣಿ ನಿರ್ಮಿಸುವಂತೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಜ.19– ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ರಥ ನಿಲ್ಲಿಸಲು ನಿರ್ಮಿಸಿರುವ ಮನೆಗೆ ಮೇಲ್ಚಾವಣಿ ನಿರ್ಮಿಸುವಂತೆ ಆಗ್ರಹಿಸಿ ನಗರದ ಎಲ್ಲಾ ಕೋಮಿನ ಮುಖಂಡರು, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಿರ್ಮಿಸಿರುವ ರಥದ ಮನೆ ಮುಂಭಾಗದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಮೇಲ್ಚಾವಣಿ ನಿರ್ಮಿಸುವಂತೆ ಘೋಷಣೆ ಕೂಗಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರವು 1 ಕೋಟಿ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಿಸಿದೆ. ರಥದ ರಕ್ಷಣೆಗಾಗಿ ಮನೆ ನಿರ್ಮಿಸಲು 20 ಲಕ್ಷ ರೂ. ಅನುದಾನ ಸಹ ಬಿಡುಗಡೆಯಾಗಿ ರಥದ ಮನೆ ನಿರ್ಮಿಸಲಾಗಿದೆ. ರಥದ ಪೀಠ 16 ಅಡಿ ಎತ್ತರವಿದ್ದು ಅದರ ಮೇಲೆ 10 ಅಡಿ ಎತ್ತರದ ಮಂಟಪವನ್ನು ಸ್ಥಳೀಯ ಶಾಸಕರಾದ ಪುಟ್ಟರಂಗಶೆಟ್ಟರು ನಿರ್ಮಿಸಿಕೊಟ್ಟಿದ್ದಾರೆ. ಆದರೆ ರಥದ ಎತ್ತರಕ್ಕೆ ಈಗ ನಿರ್ಮಿಸಿರುವ ರಥ ಮನೆ ಸಾಲುತ್ತಿಲ್ಲ ಎಂದು ಮೇಲ್ಚಾವಣಿ ತೆಗೆದು ಹಾಕಲಾಗಿತ್ತು. ಆದರೆ ಇನ್ನೂ ಮೇಲ್ಚಾವಣಿ ಮುಚ್ಚಿಲ್ಲ. ಇದರಿಂದ ರಥ ಬಿಸಿಲು, ಮಳೆಗೆ ಹಾಳಾಗುತ್ತಿದೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿ, ಜಿಲ್ಲಾಡಳಿತ ರಥಮನೆಗೆ ಮೇಲ್ಚಾವಣಿ ನಿರ್ಮಿಸಿ ರಥದ ರಕ್ಷಣೆ ಮುಂದಾಗಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಪ್ರತಿಭಟನಾನಿರತರು ಎಚ್ಚರಿಸಿದರು.

ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಬಸವರಾಜು, ಪಿಡಬ್ಲ್ಯೂಡಿ ಇಲಾಖೆಯ ಅಧಿಕಾರಿಗಳು, ಪ್ರತಿಭಟನಾಕಾರರ ಮನವಿ ಆಲಿಸಿದರು. ನಾಳೆಯಿಂದಲೇ ಕಾಮಗಾರಿ ಆರಂಭಿಸುವುದಾಗಿ ಭರವಸೆ ನೀಡಿದರು. ಬಳಿಕ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಯಿತು. ವೈ.ವಿ.ಲೋಕನಾಥ್, ಸುರೇಶ್‌ನಾಯಕ, ಶಾ.ಮುರಳಿ, ಕಂಡಕ್ಟರ್ ಚಾ.ಸಿ.ಸೋಮನಾಯಕ, ನಂಜಪ್ಪ, ಗಣೇಶ್‌ದೀಕ್ಷಿತ್, ಮಸಣಶೆಟ್ಟಿ, ಜಯಕುಮಾರ್, ಶ್ರೀನಿವಾಸಗೌಡ, ಮಹದೇವನಾಯಕ, ಮಹೇಶ್ ಕುದರ್, ರಾಜ್‌ಗೋಪಾಲ್, ಪುರುಷೋತ್ತಮ್, ಚಾ.ರಾ.ಕುಮಾರ್ ಇತರರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಅಜ್ಜಿ ಅಗಲಿಕೆಯ ಸಂಕಟದಿಂದ ಮೂವರು ಸಹೋದರಿಯರ ಆತ್ಮಹತ್ಯೆ

ತುಮಕೂರು, ಜ.19–ತಮ್ಮನ್ನು ಸಾಕಿ ಸಲಹಿದ ಅಜ್ಜಿ ಸಾವನ್ನಪ್ಪಿದ್ದರಿಂದ ಖಿನ್ನತೆಗೊಳಗಾಗಿದ್ದ ಮೂವರು ಸಹೋದರಿಯರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲೂಕು ಬರಕನಹಾಲ್ ತಾಂಡಾ ನಿವಾಸಿಗಳಾದ ರಂಜಿತಾ (24), ಬಿಂದು(24) ಮತ್ತು ಚಂದನಾ(18) ನೇಣಿಗೆ ಶರಣಾದ ಸಹೋದರಿಯರು. ಈ ಸಹೋದರಿಯರ ತಂದೆ–ತಾಯಿ ಕಳೆದ 15 ವರ್ಷಗಳ ಹಿಂದೆಯೇ ಮೃತಪಟ್ಟಿದ್ದರೆಂದು ಹೇಳಲಾಗಿದ್ದು, ಅಂದಿನಿಂದ ಈ ಸಹೋದರಿಯರನ್ನು ವಯೋವೃದ್ಧ ಅಜ್ಜಿ ಸಾಕಿ–ಸಲಹುತ್ತಿದ್ದರು. ಕಳೆದ ಮೂರು ತಿಂಗಳ ಹಿಂದೆ ಅಜ್ಜಿ ನಿಧನರಾಗಿದ್ದು, ಗಾರ್ಮೆಂಟ್ಸ್‌ಗೆ ಕೆಲಸಕ್ಕೆ ಹೋಗುತ್ತಿದ್ದ ರಂಜಿತಾ ಮತ್ತು ಬಿಂದು ಹಾಗೂ ಚಂದನಾ ಅಜ್ಜಿಯ ಅಗಲಿಕೆಯಿಂದ ಖಿನ್ನತೆಗೆ ಒಳಗಾಗಿದ್ದ ರೆಂದು ಹೇಳಲಾಗಿದೆ. ಕಳೆದ 9 ದಿನದಿಂದ ಈ ಸಹೋದರಿಯರು ಯಾರಿಗೂ ಕಾಣಿಸಿ ಕೊಂಡಿರಲಿಲ್ಲ. ಬಾಲದೇವರ ಹಟ್ಟಿಯಿಂದ ತಾಂಡಾಗೆ ಹೋಗುವ ರಸ್ತೆಯಲ್ಲಿರುವ ಅವರ ಒಂಟಿ ಮನೆಗೆ ಒಳಗಿನಿಂದ ಚಿಲಕ ಹಾಕಲಾಗಿತ್ತು ಎಂದು ಹೇಳಲಾಗಿದ್ದು, ಮನೆ ಯೊಳಗಿನಿಂದ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿದ ದಾರಿಹೋಕರು ಪೊಲೀಸರಿಗೆ ಮಾಹಿತಿ ನೀಡಿದಾಗ ಅವರು ಬಂದು ಮನೆಯ ಹೆಂಚನ್ನು ತೆಗೆದು ನೋಡಿದಾಗ ಮೂವರು ಸಹೋದರಿಯರ ಶವಗಳು ಕೊಳೆತ ಸ್ಥಿತಿಯಲ್ಲಿ ನೇಣು ಕುಣಿಕೆಯಲ್ಲಿ ಕಂಡು ಬಂದಿವೆ. ಇವರ ಮನೆ ಅಕ್ಕಪಕ್ಕದಲ್ಲಿ ಯಾವುದೇ ಮನೆಗಳು ಇಲ್ಲದ ಕಾರಣ ಸಹೋದರಿಯರು ಆತ್ಮಹತ್ಯೆ ಮಾಡಿಕೊಂಡ ವಿಚಾರ ಯಾರಿಗೂ ಗೊತ್ತಿರಲಿಲ್ಲ. ದುರ್ವಾಸನೆ ಬಂದ ನಂತರವೇ ಅನಾಹುತ ಸಂಭವಿಸಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಹುಳಿಯಾರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಮೂರನೇ ಪುಟದಿಂದ

ಪ್ರಧಾನಿ ಮೋದಿ ಹೊಸ ಮಂತ್ರ

ಮಕ್ಕಳ ಜೀವ ಉಳಿಸಲು ಮತ್ತು ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಉದ್ದೇಶದಿಂದಲೇ ಜಲಜೀವನ್ ಮಿಷನ್ ಜಾರಿಗೆ ತರಲಾಯಿತು. ಗ್ರಾಮೀಣ ಭಾಗದ ಪ್ರತಿ ಮನೆಗೂ ನೀರು ಸಂಪರ್ಕ ಕಲ್ಪಿಸುವುದು ಡಬಲ್ ಇಂಜಿನ್ ಸರ್ಕಾರದ ಮುಖ್ಯ ಉದ್ದೇಶ. ಡಬಲ್ ಇಂಜಿನ್ ಎಂದರೆ, ಡಬಲ್ ವೇಗ, ಡಬಲ್ ಲಾಭ. ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಕೇಂದ್ರ ಮತ್ತು ರಾಜ್ಯ ಒಟ್ಟಿಗೆ ಕೆಲಸ ಮಾಡಿದರೆ ಹೇಗೆ ಎನ್ನುವುದಕ್ಕೆ ಜಲಜೀವನ್ ಮಿಷನ್ ಎನ್ನುವ ಮೂಲಕ ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಪಕ್ಷವನ್ನೇ ಅಧಿಕಾರಕ್ಕೆ ತನ್ನಿ ಎಂದು ಪರೋಕ್ಷವಾಗಿ ವಿವರಣೆ ಮೂಲಕ ಮನವಿ ಮಾಡಿಕೊಂಡರು. 3.5 ವರ್ಷಗಳ ಹಿಂದೆ ಜಲ ಜೀವನ್ ಮಿಷನ್ ಪ್ರಾರಂಭವಾದಾಗ 18 ಕೋಟಿ ಗ್ರಾಮೀಣ ಕುಟುಂಬಗಳಲ್ಲಿ 3 ಕೋಟಿ ಗ್ರಾಮೀಣ ಕುಟುಂಬಗಳು ಮಾತ್ರ ನಲ್ಲಿ ನೀರಿನ ಸಂಪರ್ಕ ಹೊಂದಿದ್ದವು. ಇಂದು ದೇಶದ ಸುಮಾರು 11 ಕೋಟಿ ಗ್ರಾಮೀಣ ಕುಟುಂಬಗಳು ನಲ್ಲಿ ನೀರು ಪಡೆಯುತ್ತಿವೆ.

ದಲಿತರು, ಆದಿವಾಸಿಗಳು ಮತ್ತು ವಂಚಿತರ ಏಳ್ಗೆ ಬಗ್ಗೆ ಹಿಂದಿನ ಸರ್ಕಾರ ಗಮನ ಹರಿಸಲಿಲ್ಲ. ಸಮಾಜದ ವಂಚಿತ ವರ್ಗಗಳ ಹೆಸರಲ್ಲಿ ಕೇವಲ ಘೋಷವಾಕ್ಯಗಳ ಮೂಲಕ ಅವರ ಮತಗಳನ್ನು ಮಾತ್ರ ಪಡೆದರು. ಆದರೆ, ಈ ಸಮಾಜದ ಜನರ ಅಭಿವೃದ್ಧಿಗೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಎಂದು ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಮ್ಮ ದೇಶದಲ್ಲಿ ದಶಕಗಳಿಂದ, ಕೋಟ್ಯಾಂತರ ಸಣ್ಣ ರೈತರು ಸಹ ಎಲ್ಲಾ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಅವರನ್ನು ಸರ್ಕಾರದ ನೀತಿಗಳಲ್ಲಿ ಸಹ ಕಾಳಜಿ ವಹಿಸಲಾಗಿಲ್ಲ. ಇಂದು, ಈ ಸಣ್ಣ ರೈತ ದೇಶದ ಕೃಷಿ ನೀತಿಯ ದೊಡ್ಡ ಆದ್ಯತೆಯಾಗಿದೆ. ನಮ್ಮ ಸರ್ಕಾರವು 'ವೋಟ್ ಬ್ಯಾಂಕ್ ರಾಜಕಾರಣ'ದತ್ತ ಗಮನಹರಿಸದೆ 'ಅಭಿವೃದ್ಧಿ' ಮಂತ್ರದ ಮೇಲೆ ಕೇಂದ್ರೀಕೃತವಾಗಿದೆ.

ನಾವು ವಂಚಿತ ವರ್ಗಗಳ ಸಬಲೀಕರಣಕ್ಕಾಗಿ ಕೆಲಸ ಮಾಡುತ್ತಿದ್ದೇವೆ. ಮೊದಲ ಬಾರಿಗೆ ದಲಿತರು, ವಂಚಿತರಿಗೆ ಸರಿಯಾದ ಅವಕಾಶ, ಗೌರವ ಸಿಗುತ್ತಿದೆ. ಶೌಚಾಲಯ, ವಿದ್ಯುತ್ ಜೊತೆಗೆ ಮೂಲಸೌಕರ್ಯಗಳನ್ನು ವೇಗವಾಗಿ ಒದಗಿಸಲಾಗುತ್ತಿದೆ. ಪಡಿತರ ವಿತರಣೆಯಲ್ಲಿ ಪಾರದರ್ಶಕತೆ ತರಲಾಗಿದೆ. ಶೋಷಿತ ವರ್ಗಗಳ ಜನತೆ ತಮ್ಮ ಹಕ್ಕುಗಳನ್ನು ಅವರು ಪಡೆಯುತ್ತಿದ್ದಾರೆ ಎಂದು ಪ್ರಧಾನಿ ಮೋದಿ ತಿಳಿಸಿದರು.

ಕೋಟ್ಯಾಂತರ ಜನರು ಬ್ಯಾಂಕ್ ಬಾಗಿಲು ಸಹ ನೋಡಿರಲಿಲ್ಲ. ಮುದ್ರಾ ಯೋಜನೆಯಡಿ ಯಾವುದೇ ಭದ್ರತಾ ಇಲ್ಲದೇ ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಸಾಲದ ಸೌಲಭ್ಯ ಸಿಗುತ್ತಿದೆ. ಹಿಂದುಳಿದ ವರ್ಗಗಳಿಗೆ ನಮ್ಮ ಸರ್ಕಾರ ಸಂವಿಧಾನಾತ್ಮಕ ಮಾನ್ಯತೆ ಕೊಟ್ಟಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದೆ. ಪ್ರತಿಯೊಂದು ಕಲ್ಯಾಣಕಾರಿ ಯೋಜನೆಯೊಂದಿಗೆ ಶೋಷಿತರು, ವಂಚಿತರನ್ನು ಜೋಡಿಸುವ ಕೆಲಸ ಮಾಡುತ್ತಿದೆ ಎಂದು ಮೋದಿ ಹೇಳಿದರು. ಇದಕ್ಕೂ ಮುನ್ನ ಪ್ರಧಾನಿ ಅವರು ಸುಮಾರು 10,800 ಕೋಟಿ ರೂಪಾಯಿ ವೆಚ್ಚದ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು. ಕರ್ನಾಟಕದ ಮೂಲಕ ಹಾದು ಹೋಗುವ ಸೂರತ್–ಚೆನ್ನೈ ಆರ್ಥಿಕ ಕಾರಿಡಾರ್‌ನ ಕೆಲಸ ಪ್ರಾರಂಭವಾಗಿದೆ. ಇದರೊಂದಿಗೆ ಯಾದಗಿರಿ, ರಾಯಚೂರು, ಕಲಬುರ್ಗಿ ಸೇರಿದಂತೆ ಇಡೀ ಪ್ರದೇಶದಲ್ಲಿ 'ಈಸ್ ಆಫ್ ಡೂಯಿಂಗ್ ಬಿಸ್ನೆಸ್' ಕೂಡ ಹೆಚ್ಚಲಿದ್ದು, ಉದ್ಯೋಗಕ್ಕೆ ಉತ್ತೇಜನ ದೊರೆಯಲಿದೆ. ಈ ಎಲ್ಲಾ ಅಭಿವೃದ್ಧಿ ಯೋಜನೆಗಳಿಗಾಗಿ ಕರ್ನಾಟಕದ ಜನತೆಗೆ ಅಭಿನಂದನೆಗಳು ಎಂದರು.

ದೇಶದ 11 ಕೋಟಿ ಮನೆಗೆ ನಲ್ಲಿ ಸಂಪರ್ಕ

ಮೋದಿಗೆ ಮನಃಪೂರ್ವಕ ಆಶೀರ್ವಾದ ಮಾಡುತ್ತಾರೆ ಮುಂದಿನ ಸಲವೂ ದೇಶದ ಜನತೆ ನಮಗೆ ಆಶೀರ್ವಾದ ಮಾಡಿ, 2024ರಲ್ಲಿ ಅಧಿಕಾರಕ್ಕೆ ನಾವೇ ಬರುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದರು. ಜಲಜೀವನ್ ಮಿಷನ್‌ನ ಮತ್ತೊಂದು ಮುಖ್ಯ ಉದ್ದೇಶವೆಂದರೆ ಮಕ್ಕಳ ಜೀವ ಉಳಿಸುವುದು. ಶುದ್ಧ ಕುಡಿಯುವ ನೀರು ಪೂರೈಕೆಯಾದರೆ ಲಕ್ಷಾಂತರ ಮಕ್ಕಳ ಜೀವ ಉಳಿಯುತ್ತದೆ. ಮಕ್ಕಳ ಜೀವ ಉಳಿಸುವುದಕ್ಕಿಂತಲೂ ಶ್ರೇಷ್ಠವಾದ ಕೆಲಸ ಯಾವುದಿದೆ ಹೇಳಿ. ಎಲ್ಲಾ ಮನೆಗಳಿಗೂ ನೀರು ಸಂಪರ್ಕ ಒದಗಿಸುವುದು ಡಬಲ್ ಎಂಜಿನ್ ಸರ್ಕಾರದ ಮುಖ್ಯ ಉದ್ದೇಶವಾಗಿದೆ ಎಂದರು.

ಈಗ ದೇಶದಲ್ಲಿ 'ಪರ್ ಕ್ರಾಪ್, ಮೋರ್ ಕ್ರಾಪ್' ಹಾಗೂ 'ಮೈಕ್ರೋ ಇರಿಗೇಶನ್' (ಪ್ರತಿ ಹನಿಗೆ ಹೆಚ್ಚು ಬೆಳೆ) ಯೋಜನೆಯನ್ನು ಆದ್ಯತೆಯೊಂದಿಗೆ ಜಾರಿಗೊಳಿಸುತ್ತಿದ್ದೇವೆ. ಕರ್ನಾಟಕದಲ್ಲಿಯೂ ಈ ಯೋಜನೆ ವೇಗವಾಗಿ ಅನುಷ್ಠಾನಗೊಳ್ಳುತ್ತಿದೆ. ಡಬಲ್ ಎಂಜಿನ್ ಸರ್ಕಾರವು ಅಂತರ್ಜಲ ವೃದ್ಧಿಗೂ ಸತತ ಪ್ರಯತ್ನ ಮಾಡುತ್ತಿದೆ. ಕೆರೆ–ಕುಂಟೆಗಳ ಪುನರುಜ್ಜೀವನಕ್ಕೆ ಒತ್ತು ಕೊಡುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ರಾಜ್ಯದ ಪಾಲಿಗೆ ನೀರಾವರಿ ದಶಕ

ಎಂದು ಸಿಎಂ ಬೊಮ್ಮಾಯಿ ಹೇಳಿದರು. ಈ ಸ್ಕಾಡಾ ತಂತ್ರಜ್ಞಾನದಿಂದಾಗಿ ಉತ್ತರ ಕರ್ನಾಟಕದ ಬರಪೀಡಿತ ವಿಜಯಪುರ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ 4.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 1ಲಕ್ಷ ಹೆಕ್ಟೇರ್ ಪ್ರದೇಶದ ರೈತರಿಗೆ ಅಂದರೆ ಅಚ್ಚುಕಟ್ಟು ಪ್ರದೇಶದ ಕೊನೆಯಂಚಿನ ಈ ರೈತರ ಜಮೀನುಗಳಿಗೆ ಇನ್ಮುಂದೆ ಸಮ ಪ್ರಮಾಣದಲ್ಲಿ ನೀರು ಲಭ್ಯವಾಗಲಿದೆ ಎಂದು ಹೇಳಿದ ಅವರು, ಈ ತಂತ್ರಜ್ಞಾನದಿಂದ ನೀರಿನ ಬಳಕೆಯ ದಕ್ಷತೆ ಶೇ.20ರಷ್ಟು ಹೆಚ್ಚಾಗಲಿದೆ ಎಂದರು. ಈ ಯೋಜನೆಯು ಇಡೀ ಏಷ್ಯಾಖಂಡದಲ್ಲಿಯೇ ದೊಡ್ಡ ಯೋಜನೆಯಾಗಿದೆ. ಈ ರೀತಿಯ ಯೋಜನೆಗಳನ್ನು ಇನ್ಮುಂದೆಯೂ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದರು.

ಸಿದ್ಧಪಡಿಸಿದ ಊಟವನ್ನು ಬಿಜೆಪಿ ಬಡಿಸುತ್ತಿದೆ

ಕಂದಾಯ ಗ್ರಾಮದ ಸ್ಥಾನಮಾನವನ್ನು ನೀಡಿದ್ದೇವೆ ಮತ್ತು ತಾವೇ ಕಾಯ್ದೆ ಮಾಡಿ, ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿರುವುದಾಗಿ ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಬೊಮ್ಮಾಯಿ ಸರ್ಕಾರದ ಪ್ರಕಾರ, ಈ 'ಹಕ್ಕು ಪತ್ರ'ಗಳನ್ನು ವಿತರಿಸುವ ಕ್ರಮವು ಉತ್ತರ ಕರ್ನಾಟಕದ ಐದು ಜಿಲ್ಲೆಗಳಲ್ಲಿ 52,072 ಅಲೆಮಾರಿಗಳಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಅವರಿಗೆ "ಶಾಶ್ವತ ಸೂರು" ಒದಗಿಸುತ್ತದೆ ಎಂದು ಹೇಳಿಕೊಂಡಿದೆ. ಸಿದ್ದರಾಮಯ್ಯನವರ ಪ್ರಕಾರ, ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ 2013 ರಿಂದ 2018 ರವರೆಗಿನ ಅವರ ಸರ್ಕಾರದ ಅವಧಿಯಲ್ಲಿ ಪ್ರಾರಂಭವಾಯಿತು. ಅಂದಿನ ಕಂದಾಯ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪ ಅವರು ತಮ್ಮ ನೇತೃತ್ವದ ಸರ್ಕಾರದಲ್ಲಿ ಅರಣ್ಯ ಕಾಯ್ದೆ ಮತ್ತು ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ಉಳುವವನೇ ಭೂಮಿ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯೊಡೆಯ ಕಾಯ್ದೆ ಜಾರಿಗೆ ತಂದಿದ್ದರು. ಅವು ಐತಿಹಾಸಿಕ ತಿದ್ದುಪಡಿಗಳಾಗಿವೆ ಎಂದು ಹೇಳಿದರು. ಈ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಕುರಿತು ವರದಿ ಸಲ್ಲಿಸಲು ಕಾಂಗ್ರೆಸ್ ಸರ್ಕಾರ ಸಮಿತಿ ರಚಿಸಿ, ಅದನ್ನು ಅನುಷ್ಠಾನಗೊಳಿಸಲು ಐಎಎಸ್ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ಮಾಡಲಾಗಿತ್ತು ಎಂದು ಸಿದ್ದರಾಮಯ್ಯ ಅವರು ಹಕ್ಕು ಪತ್ರ ವಿತರಣಾ ಕಾರ್ಯಕ್ರಮದ ಕುರಿತು ಪ್ರತಿಕ್ರಿಯೆ ನೀಡಿದರು. ನಂತರ ಅಧಿಕಾರ ಕಳೆದುಕೊಂಡಿದ್ದರಿಂದ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಸಾಧ್ಯವಾಗಲಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಏನನ್ನೂ ಮಾಡದ ಬಿಜೆಪಿಯವರು ಇದ್ದಕ್ಕಿದ್ದ ಹಾಗೆ ಎಲ್ಲವನ್ನೂ ತಾವೇ ಮಾಡಿದ್ದೇವೆ ಎಂದು ಹೇಳತೊಡಗಿದ್ದಾರೆ. ಮುಂಬರುವ ಚುನಾವಣೆ ಅಂಗವಾಗಿ ಬಿಜೆಪಿಯವರು ನಾವು ತಯಾರಿಸಿದ ಊಟವನ್ನು ಬಡಿಸುತ್ತಿದ್ದಾರೆ ಎಂದು ಹೇಳಿದರು. ಲಂಬಾಣಿಗರಿಗೆ ಭೂಮಿಯ ಹಕ್ಕು ನೀಡುತ್ತಿದ್ದೇವೆ ಎಂದು ಬಿಂಬಿಸುವ ಮೂಲಕ ಬಿಜೆಪಿ ಪ್ರಧಾನಿಗೆ ತಪ್ಪು ಚಿತ್ರಣ ನೀಡುತ್ತಿದೆ ಎಂದು ಆರೋಪಿಸಿದರು.

ಜ.22ರಂದು 4ನೇ ಮೈಸೂರು ಲಿಟರರಿ ಫೆಸ್ಟ್

● ಮೈಸೂರು ಲಿಟರರಿ ಅಸೋಸಿಯೇಷನ್‌ನ ಪ್ರತಿಷ್ಠಿತ ಆಂಗ್ಲ ಸಾಹಿತ್ಯ ಸಂಭ್ರಮದ ಉತ್ಸವ

● 'ಏರ್ ಡೆಕ್ಕನ್' ವಿಮಾನಯಾನ ಸಂಸ್ಥೆ ಸಂಸ್ಥಾಪಕ ಕ್ಯಾಪ್ಟನ್ ಜಿ.ಆರ್.ಗೋಪಿನಾಥರಿಂದ ಚಾಲನೆ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಮೈಸೂರು ಲಿಟರರಿ ಅಸೋಸಿಯೇಷನ್‌ನ '4ನೇ ಮೈಸೂರು ಲಿಟರರಿ ಫೆಸ್ಟ್–2023' ಪೋಸ್ಟರ್ ಬಿಡುಗಡೆ ಮಾಡಲಾಯಿತು. ಎಡದಿಂದ ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸದಸ್ಯ ಪ್ರೊ.ವಿ.ಎಸ್.ಶೇಖರ್, ಉಪಾಧ್ಯಕ್ಷ ಪ್ರೊ.ಬಿ.ಎನ್.ಬಾಲಾಜಿ, ಅಧ್ಯಕ್ಷ ಡಾ.ಕೆ.ಸಿ.ಬೆಳ್ಳಿಯಪ್ಪ, ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯೆ ಪ್ರೊ.ನಿರ್ಮಲ ಚಂದ್ರಪ್ರಕಾಶ್ ಚಿತ್ರದಲ್ಲಿದ್ದಾರೆ.

ಮೈಸೂರು,ಜ.19(ಪಿಎಂ)– ಮೈಸೂರು ಲಿಟರರಿ ಅಸೋಸಿಯೇಷನ್‌ನ (ಎಂಎಲ್‌ಎ) ಪ್ರತಿಷ್ಠಿತ ಆಂಗ್ಲ ಸಾಹಿತ್ಯದ ಗೋಷ್ಠಿ–ಸಂವಾದದ ಸಂಭ್ರಮ 'ಮೈಸೂರು ಲಿಟರರಿ ಫೆಸ್ಟ್' ಜ.22ರಂದು ನಡೆಯಲಿದ್ದು, ಈ 4ನೇ ಆಂಗ್ಲ ಸಾಹಿತ್ಯದ ಹಬ್ಬದಲ್ಲಿ ಖ್ಯಾತ ವಿದ್ವಾಂಸರು ನಾನಾ ವಿಚಾರಗಳ ಬಗ್ಗೆ ವಿಚಾರ ಮಂಡಿಸಿ, ಸಭಿಕರೊಂದಿಗೆ ಸಂವಾದ ನಡೆಸಲಿದ್ದಾರೆ.

'4ನೇ ಮೈಸೂರು ಲಿಟರರಿ ಫೆಸ್ಟ್–2023' ಶೀರ್ಷಿಕೆಯಡಿ ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಾಹಿತ್ಯ ಗೋಷ್ಠಿ ನಡೆಯಲಿದೆ. 'ಏರ್ ಡೆಕ್ಕನ್' ವಿಮಾನಯಾನ ಸಂಸ್ಥೆ ಸ್ಥಾಪಿಸಿದ ಕರ್ನಾಟಕದವರೇ ಆದ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಲಿಟರರಿ ಫೆಸ್ಟ್ ಉದ್ಘಾಟಿಸಲಿದ್ದಾರೆ. ನಿವೃತ್ತ ಯೋಧರೂ ಆದ ಇವರು ಕಡಿಮೆ ವೆಚ್ಚದಲ್ಲಿ ವಿಮಾನ ಪ್ರಯಾಣ ಮಾಡುವ ಭಾರತೀಯರ ಕನಸಿಗೆ ರೆಕ್ಕೆ ಮೂಡಿಸಿದ ಖ್ಯಾತಿ ಹೊಂದಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಡಾ.ಕೆ.ಸಿ.ಬೆಳ್ಳಿಯಪ್ಪ ಇಂಗ್ಲಿಷ್ ಭಾಷಾ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಆಂಗ್ಲ ಸಾಹಿತ್ಯದ ಆಸಕ್ತರು ಒಗ್ಗೂಡಿ 2016ರಲ್ಲಿ ಲಿಟರರಿ ಅಸೋಸಿಯೇಷನ್ ಅಸ್ತಿತ್ವಕ್ಕೆ ತರಲಾಯಿತು. 2017ರಲ್ಲಿ ಹಮ್ಮಿಕೊಂಡಿದ್ದ ಮೊದಲ ಲಿಟರರಿ ಫೆಸ್ಟ್ ಅನ್ನು ಖ್ಯಾತ ಕಾದಂಬರಿಕಾರ ಡಾ.ಎಸ್. ಎಲ್.ಭೈರಪ್ಪ ಉದ್ಘಾಟಿಸಿದ್ದರು. ನಂತರದಲ್ಲಿ 2018 ಮತ್ತು 2019ರಲ್ಲಿಯೂ ಫೆಸ್ಟ್ ಯಶಸ್ವಿಯಾಗಿ ನಡೆಯಿತು. ಆದರೆ ಕೋವಿಡ್ ಕಾರಣಕ್ಕೆ 2020, 2021 ಮತ್ತು 2022ರಲ್ಲಿ ಆಯೋಜನೆ ಸಾಧ್ಯವಾಗಲಿಲ್ಲ. ಇದೀಗ 4ನೇ ಉತ್ಸವಕ್ಕೆ ವೇದಿಕೆ ಸಜ್ಜುಗೊಳಿಸಲಾಗಿದೆ ಎಂದು ತಿಳಿಸಿದರು.



ಗೋಪಿನಾಥ್

260 ಸದಸ್ಯರು ಅಸೋಸಿಯೇಷನ್‌ನಲ್ಲಿದ್ದು, ಪುಸ್ತಕ ಬಿಡುಗಡೆ, ಸಾಹಿತ್ಯ ಚರ್ಚೆ, ಚಿಂತನ–ಮಂಥನ ಸೇರಿದಂತೆ ಸಾಹಿತ್ಯ ಉತ್ತೇಜಿಸುವ ನಾನಾ ಕಾರ್ಯಕ್ರಮಗಳನ್ನು ನಡೆಸುತ್ತಾ ಅಸೋಸಿಯೇಷನ್ ಮುನ್ನಡೆದಿದೆ. 4ನೇ ಸಾಹಿತ್ಯ ಸಂಭ್ರಮದಲ್ಲಿ ಅಂದು ಉದ್ಘಾಟನೆ ಬಳಿಕ ಬೆಳಗ್ಗೆ 11.30ಕ್ಕೆ ಖ್ಯಾತ ನರಶಾಸ್ತ್ರ ತಜ್ಞೆ ಮತ್ತು ಲೇಖಕಿ ಡಾ.ದೀಪ್ತಿ ನವರತ್ನ ತಮ್ಮ ಕೃತಿ 'ದಿ ಮೇವರಿಕ್ ಮಹಾರಾಜ (ಜಯಚಾಮರಾಜ ಒಡೆಯರ್ ಕುರಿತ ಪುಸ್ತಕ)' ಕುರಿತು ಮಾತನಾಡಲಿದ್ದಾರೆ. ನಂತರ 12.30ಕ್ಕೆ ಖ್ಯಾತ ನಿರ್ದೇಶಕರೂ ಆದ ನಟ ಪ್ರಕಾಶ್ ಬೆಳವಾಡಿ 'ನಾಟಕ ರಚನೆ' ಕುರಿತು ವಿಚಾರ ಮಂಡಿಸಲಿದ್ದಾರೆ ಎಂದು ಹೇಳಿದರು.

ನಂತರ ಮಧ್ಯಾಹ್ನ 2.30ಕ್ಕೆ ಖ್ಯಾತ ಕವಿಗಳೂ ಆದ ನಾಟಕಕಾರ ಹೆಚ್.ಎಸ್. ಶಿವಪ್ರಕಾಶ್ 'ಭಾರತೀಯ ಕಾವ್ಯ ಹಾಗೂ ಕಾವ್ಯ ಮೀಮಾಂಸೆಯಲ್ಲಿ ಭಕ್ತಿ ಮತ್ತು ಸಿದ್ಧ ಆಯಾಮಗಳು' ವಿಷಯ ಕುರಿತು ಮಾತನಾಡಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಖ್ಯಾತ ನಟರೂ ಆದ ಶಿಕ್ಷಣ ತಜ್ಞ ಡಾ.ಅಭಿಮನ್ಯು ಆಚಾರ್ಯ 'ಶಿಕ್ಷಣದಲ್ಲಿ ನಾಟಕ ಮತ್ತು ನಾಟಕದಲ್ಲಿ ಶಿಕ್ಷಣ' ವಿಷಯ ಕುರಿತು ವಿಚಾರ ಮಂಡಿಸಲಿದ್ದಾರೆ. ಇಂಗ್ಲಿಷ್‌ನಲ್ಲಿ ನಡೆಯುವ ಈ ಗೋಷ್ಠಿಗಳಲ್ಲಿ ಪ್ರತಿ ಗೋಷ್ಠಿ ಬಳಿಕ ತಮ್ಮ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ವಾಂಸರು ಸಭಿಕರೊಂದಿಗೆ ಸಂವಾದ ನಡೆಸಿ, ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ ಎಂದು ತಿಳಿಸಿದರು.

ಯಾವುದೇ ಕಾರಣಕ್ಕೂ ಕನ್ನಡ ಭಾಷೆ ನಿರ್ಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ. ಇಂಗ್ಲಿಷ್ ಅಧ್ಯಾಪಕರು, ಸಾಹಿತ್ಯಾಸಕ್ತರು ಅಸ್ತಿತ್ವಕ್ಕೆ ತಂದಿರುವ ವೇದಿಕೆ ಇದಾದ್ದರಿಂದ ಇಂಗ್ಲಿಷ್ ಸಾಹಿತ್ಯದ ಕಾರ್ಯಕ್ರಮವಾಗಿ ಸದರಿ ಫೆಸ್ಟ್ ಆಚರಿಸಿಕೊಂಡು ಬರುತ್ತಿದ್ದೇವೆ. ಹಾಗಾಗಿ ಇಂಗ್ಲಿಷ್‌ನಲ್ಲೇ ಕಾರ್ಯಕ್ರಮ ನಡೆಯಲಿದೆ. ಆದರೂ ಅಲ್ಲಲ್ಲಿ ಭಾಷಣಕಾರರು ಕನ್ನಡದಲ್ಲಿ ಮಾತನಾಡಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಸೋಸಿಯೇಷನ್ ಉಪಾಧ್ಯಕ್ಷ ಪ್ರೊ.ಬಿ.ಎನ್.ಬಾಲಾಜಿ ಮಾತನಾಡಿ, ಮೈಸೂರು, ಮಂಡ್ಯ, ಕೊಡಗು, ಹಾಸನ ಮೊದಲಾದ ಜಿಲ್ಲೆಗಳ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರು, ವಿದ್ಯಾರ್ಥಿಗಳಿಗೆ ಉತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗಿದೆ. ಆಸಕ್ತರು ಇದರಲ್ಲಿ ಭಾಗವಹಿಸಬಹುದು. ಅಂದು ಬೆಳಗ್ಗೆ 9.30ಕ್ಕೆ ಉಚಿತವಾಗಿ ನೋಂದಣಿ ಮಾಡಿಕೊಂಡು ಭಾಗವಹಿಸಲು ಅವಕಾಶ ಕಲ್ಪಿಸಿದ್ದು, ಉಚಿತವಾಗಿ ಚಹಾ ಮತ್ತು ಭೋಜನಾ ವ್ಯವಸ್ಥೆ ಕೂಡ ಮಾಡಲಾಗಿದೆ. 500 ಮಂದಿ ಪಾಲ್ಗೊಳ್ಳಲು ಅವಕಾಶವಿರುವಂತೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಾಗವಹಿಸಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ ಮೊ.ಸಂ. 99806 56631 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಅಸೋಸಿಯೇಷನ್ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ.ವಿ.ಎಸ್.ಶೇಖರ್, ಪ್ರೊ.ನಿರ್ಮಲ ಚಂದ್ರಪ್ರಕಾಶ್ ಗೋಷ್ಠಿಯಲ್ಲಿದ್ದರು.




ಬೆಂಗಳೂರಿನ ನಿವಾಸಿ ಡಾ.ದೀಪ್ತಿ ನವರತ್ನ ಅವರು 'ವಿಶ್ವ ಸರ್ವ ಧರ್ಮ ಸಂಸತ್'ಗೆ ಆಯ್ಕೆಯಾಗಿದ್ದ ಕೀರ್ತಿ ಹೊಂದಿದ್ದಾರೆ. ಶಾಸ್ತ್ರೀಯ ಸಂಗೀತದ ಗಾಯಕರಾದ ಇವರು ನರವಿಜ್ಞಾನಿಯೂ ಆಗಿದ್ದಾರೆ. 2001ರಿಂದ ಆಲ್ ಇಂಡಿಯಾ ರೇಡಿಯೋದ ಎ–ಗ್ರೇಡ್ ಕಲಾವಿದರಾಗಿದ್ದಾರೆ.

–ಡಾ.ದೀಪ್ತಿ ನವರತ್ನ




ಪ್ರಕಾಶ್ ಬೆಳವಾಡಿ ಅವರು ಭಾರತೀಯ ರಂಗಭೂಮಿ, ಚಲನಚಿತ್ರ ಮತ್ತು ದೂರದರ್ಶನ ಕಲಾವಿದರಾಗಿ ಖ್ಯಾತ ನಾಮರು. ಖ್ಯಾತ ಹಿರಿಯ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ 'ಪರ್ವ' ಕಾದಂಬರಿಯನ್ನು ರಂಗಪಠ್ಯಕ್ಕಿಳಿಸಿ, ನಿರ್ದೇಶನ ಮಾಡಿದ ಕೀರ್ತಿಯನ್ನು ಇವರು ಹೊಂದಿದ್ದಾರೆ.

–ಪ್ರಕಾಶ್ ಬೆಳವಾಡಿ



ನಾಟಕಕಾರರು, ಕವಿಗಳೂ ಆದ ಪ್ರೊ.ಹೆಚ್.ಎಸ್.ಶಿವಪ್ರಕಾಶ್, 15ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಅನುವಾದಕರು ಮತ್ತು ವಿಮರ್ಶಕರಾಗಿಯೂ ಹೆಸರು ಮಾಡಿದ್ದಾರೆ. ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೂ ಇವರ ಭಾಜನರಾಗಿದ್ದಾರೆ. ನವದೆಹಲಿಯ ಜೆಎನ್‌ಯು ವಿವಿಯಲ್ಲಿ ಕಲಾ ಮತ್ತು ಸೌಂದರ್ಯಶಾಸ್ತ್ರ ಶಾಲೆಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

–ಪ್ರೊ.ಹೆಚ್.ಎಸ್.ಶಿವಪ್ರಕಾಶ್



ಡಾ.ಅಭಿಮನ್ಯು ಆಚಾರ್ಯ ಅವರು ಬರಹಗಾರರು ಮತ್ತು ಭಾಷಣಕಾರರಾಗಿ ದೇಶ ಮಾತ್ರವಲ್ಲದೆ, ವಿದೇಶಗಳಲ್ಲೂ ಖ್ಯಾತಿ ಹೊಂದಿದ್ದಾರೆ.

–ಡಾ.ಅಭಿಮನ್ಯು ಆಚಾರ್ಯ

ಚಾಮುಂಡೇಶ್ವರಿ ನಗರದ ಪ್ರತಿ ಮನೆಗೆ 24 ಗಂಟೆ ನೀರು

ಮನವಿ ಸ್ವೀಕರಿಸಿದ ಶಾಸಕ ಜಿಟಿಡಿ ಭರವಸೆ



ಮೈಸೂರು, ಜ.19– ಮೈಸೂರಿನ ಚಾಮುಂಡೇಶ್ವರಿ ನಗರ, ಬೆಮೆಲ್ ಬಡಾವಣೆ, 3ನೇ ಹಂತದಲ್ಲಿರುವ ಶ್ರೀ ಚಾಮುಂಡೇಶ್ವರಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ (ಜ.19) ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಕುಂದುಕೊರತೆ ಸಭೆ ನಡೆಸಿ, ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದ ಜಿ.ಟಿ.ದೇವೇಗೌಡರು ಸ್ಥಳೀಯ ನಿವಾಸಿಗಳನ್ನುದ್ದೇಶಿಸಿ ಮಾತನಾಡಿ, ಇಲ್ಲಿ ಸುಮಾರು 1,000ಕ್ಕೂ ಅಧಿಕ ಮನೆಗಳಿದ್ದು, ಮೂಲಭೂತ ಸೌಲಭ್ಯಗಳಾದ ನೀರು, ಬೀದಿದೀಪ, ವಿದ್ಯುತ್, ಒಳಚರಂಡಿ ಸಮಸ್ಯೆಯ ಜೊತೆಗೆ ಇಲ್ಲಿನ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಈ ಕುರಿತು ನಾನು ಮೊನ್ನೆ ಮುಡಾ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ ಎಂದರು.

ಆ ಸಭೆಯಲ್ಲಿ ಸಂಸದ ಪ್ರತಾಪ್ ಸಿಂಹ, ಮುಡಾ ಕಮಿಷನರ್ ಹಾಗೂ ಮೊದಲಾದವರು ಇದ್ದರು. ಮುಂದಿನ ಏಪ್ರಿಲ್ ವೇಳೆಗೆ ನೀರಿನ ಸಮಸ್ಯೆ ಆದಷ್ಟು ಬಗೆಹರಿಸುತ್ತೇನೆ. 24 ಗಂಟೆ ನೀರು ಪ್ರತಿ ಮನೆಗೆ ಬರುವ ಹಾಗೆ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಇನ್ನು ಉಳಿದ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ ಎಂದು ತಿಳಿಸಿದರು.

ಸ್ಥಳೀಯ ನಿವಾಸಿಗಳು ಮಾತನಾಡಿ, ಹೊಸ ವರ್ಷಕ್ಕೆ ಕಾಲಿಟ್ಟು ವರ್ಷದ ಮೊದಲ ಹಬ್ಬವಾದ ಸಂಕ್ರಾಂತಿ ಆಚರಿಸಿ, ಎಳ್ಳು ಬೆಲ್ಲ ಸವಿದ ಹೊತ್ತಲ್ಲೇ ನಮ್ಮ ಚಾಮುಂಡೇಶ್ವರಿ ನಗರ, ಬೆಮೆಲ್ ಬಡಾವಣೆ, ಮೂರನೇ ಹಂತದ ನಿವಾಸಿಗಳಿಗೆ ನವ ಭರವಸೆಯ ಆಶಾಕಿರಣವೊಂದು ಮೂಡಿದೆ. ಹಲವಾರು ವರ್ಷಗಳಿಂದ ರಸ್ತೆ ಸಮಸ್ಯೆಯಿಂದ ನೊಂದಿರುವ ನಾವು ನಮ್ಮ ಪರಿಸ್ಥಿತಿಯನ್ನು ಜಿಟಿಡಿಯವರಿಗೆ ತಿಳಿಸಿದಾಗ ಶಾಸಕರು ಖುದ್ದು ಭೇಟಿ ನೀಡಿ, ಪರಿಶೀಲಿಸಲು ಬಂದಿದ್ದಾರೆ.

ಅವರಿಗೆ ಬಡಾವಣೆಯ ನಿವಾಸಿಗಳ ಪರವಾಗಿ ಹಾಗೂ ಶ್ರೀ ಚಾಮುಂಡೇಶ್ವರಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ನನೆಗುದಿಗೆ ಬಿದ್ದಿರುವ ರಸ್ತೆಯು ಆದಷ್ಟು ಬೇಗ ನಿರ್ಮಾಣಗೊಂಡು ಅದರ ಉದ್ಘಾಟನಾ ಸಮಾರಂಭವನ್ನು ಜಿಟಿಡಿ ಅವರೇ ನೆರವೇರಿಸಲಿ ಎಂದು ಆಶಿಸಿದರು.

ಕುಂದುಕೊರತೆ ಸಭೆಯ ವೇದಿಕೆಯಲ್ಲಿ ಹೆಬ್ಬಾಳಿನ ಕಾರ್ಪೊರೇಟರ್ ಪ್ರೇಮ ಶಂಕರೇಗೌಡ, ಚಾಮುಂಡೇಶ್ವರಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ನಿರಂಜನ್ ರಾಜೇ ಅರಸ್, ಮುಡಾ ಎ.ಇ.ಇ. ಹರ್ಷ, ಬೆಮೆಲ್ ಹೌಸಿಂಗ್ ಸೊಸೈಟಿಯ ಅಧ್ಯಕ್ಷ ರಾಜೇಶ್ ಅರಸ್, ಜಿಲ್ಲಾ ಪಂಚಾಯತ್ ಸದಸ್ಯ ಲೋಕೇಶ್ ಗೆಜ್ಜಗಳ್ಳಿ, ತೀರ್ಥಪ್ರಸಾದ್ ಕೆಸ್ತೂರ್ ಹಾಗೂ ಮೊದಲಾದವರು ಉಪಸ್ಥಿತರಿದ್ದರು.

ಬಸ್ ಡಿಕ್ಕಿ: ಗೃಹಿಣಿ ಸಾವು

ಮೈಸೂರು, ಜ.19–ಸ್ಕೂಟಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಗೃಹಿಣಿ ಸಾವನ್ನಪ್ಪಿದ ಘಟನೆ ಮೈಸೂರಿನ ಸರ್ಕಾರಿ ಅತಿಥಿ ಗೃಹದ ಎದುರಿನ ರಸ್ತೆಯಲ್ಲಿ ಸಂಭವಿಸಿದೆ.

ಮೈಸೂರಿನ ರಾಘವೇಂದ್ರ ನಗರ ನಿವಾಸಿ ಟಿ.ಎಸ್.ಭಾರತಿ(46) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜ.17ರಂದು ಮಧ್ಯಾಹ್ನ 3.45ರ ಸುಮಾರಿನಲ್ಲಿ ಸರ್ಕಾರಿ ಅತಿಥಿ ಗೃಹದ ಕಡೆಯಿಂದ ಕೆನರಾ ಬ್ಯಾಂಕ್ ನಜರ್‌ಬಾದ್ ಶಾಖೆ ಕಡೆಗೆ ಸ್ಕೂಟಿ ಪೆಪ್ (ಕೆಎ 55 ವಿ 7020)ನಲ್ಲಿ ತೆರಳುತ್ತಿದ್ದಾಗ ಲಿಟಿಲ್ ಗ್ಯಾಸ್ ಮುಂಭಾಗ ವೇಗವಾಗಿ ಬಂದ ಕೆಎಸ್‌ಆರ್‌ಟಿಸಿ ಬಸ್ (ಕೆಎ 10 ಎಫ್ 0277) ಇವರ ಸ್ಕೂಟಿಯ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಭಾರತಿ ಅವರು ಬಸ್‌ನ ಕೆಳಗೆ ಸಿಲುಕಿಕೊಂಡು ಪ್ರಜ್ಞಾಹೀನರಾಗಿದ್ದಾರೆ. ಬಸ್ ಚಾಲಕ ಹಾಗೂ ಸಾರ್ವಜನಿಕರು ಅವರನ್ನು ಕೆ.ಆರ್.ಆಸ್ಪತ್ರೆಗೆ ಕೊಂಡೊಯ್ಯುವ ವೇಳೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬಸ್ ಚಾಲಕ ರೈಮನ್ ಸಾಬ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನೇಣು ಹಾಕಿಕೊಂಡು ಯುವಕ ಆತ್ಮಹತ್ಯೆ

ಗಾಂಜಾ ವ್ಯಸನಿ ಎಂದು ಪೊಲೀಸರು ನಿಂದಿಸಿದ್ದಕ್ಕೆ ಬೇಸತ್ತು ಆತ್ಮಹತ್ಯೆ: ಡೆತ್‌ನೋಟ್‌ನಲ್ಲಿ ನಮೂದು

ಮೈಸೂರು, ಜ.19(ಆರ್‌ಕೆ)–'ಗಾಂಜಾ ವ್ಯಸನಿ ಎಂದು ಪೊಲೀಸರು ನನ್ನನ್ನು ಅವಮಾನಿಸಿದರು' ಎಂದು ಡೆತ್‌ನೋಟ್ ಬರೆದಿಟ್ಟು ಯುವಕನೋರ್ವ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿರುವ ಘಟನೆ ಬುಧವಾರ ರಾತ್ರಿ ಮೈಸೂರಿನ ಜಯನಗರದಲ್ಲಿ ಸಂಭವಿಸಿದೆ. ಜಯನಗರ 3ನೇ ಕ್ರಾಸ್ ನಿವಾಸಿ ಕೆ.ವಿ.ಅಭಿಷೇಕ್(25) ಆತ್ಮಹತ್ಯೆಗೆ ಶರಣಾದ ಯುವಕ. ಬುಧವಾರ ರಾತ್ರಿ 7.30 ಗಂಟೆಗೆ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂಬ ವಿಷಯ ತಿಳಿದ ಅಶೋಕಪುರಂ ಠಾಣೆ ಪೊಲೀಸರು ಮಹಜರು ನಡೆಸಿದಾಗ ಅಭಿಷೇಕ್ ಡೆತ್‌ನೋಟ್ ಬರೆದಿರುವುದು ಸಿಕ್ಕಿದೆ. ತನಗೆ ಗ್ರಾಹಕರಿಂದ ಬರಬೇಕಾಗಿದ್ದ ಬಾಕಿ ಹಣ ಪಡೆಯಲೆಂದು ಹೋದಾಗ ಅಲ್ಲಿಗೆ ಬಂದ ಪೊಲೀಸರು ಗಾಂಜಾ ಸೇವಿಸುತ್ತಿದ್ದಾರೆಂದು ಆರೋಪಿಸಿ ವಿಚಾರಿಸಿದರು. ಬೇರೆಯವರಂತೆ ನನ್ನನ್ನೂ ಸಹ ನೀನೂ ಗಾಂಜಾ ವ್ಯಸನಿ ಎಂದು ಹೇಳಿ ಅವಮಾನಿಸಿದರು. ಅದರಿಂದ ಬೇಸತ್ತು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಅಭಿಷೇಕ್ ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ ಆದರೆ ಯಾವ ಸ್ಥಳ, ಯಾವ ಠಾಣೆ ಪೊಲೀಸರು ಎಂಬುದನ್ನು ಹೇಳಿಲ್ಲ ಎಂದು ಪ್ರಕರಣ ದಾಖಲಿಸಿಕೊಂಡಿರುವ ಅಶೋಕಪುರಂ ಪೊಲೀಸರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರಲಿ ವಿವಿಧ ಬುಡಕಟ್ಟು ಸಮುದಾಯದ ಸಂಸ್ಕೃತಿ ಅನಾವರಣ





ಮೈಸೂರು,ಜ.19(ಎಂಟಿವೈ)– ಮೈಸೂರಿನ ಮಾನಸಗಂಗೋತ್ರಿಯ ಲಲಿತಕಲಾ ಕಾಲೇಜು ಸಭಾಂಗಣದಲ್ಲಿ ವಿವಿಧ ಬುಡಕಟ್ಟು ಸಂಸ್ಕೃತಿ ಅನಾವರಣಗೊಂಡಿತು. ದೇಶದ ವಿವಿಧೆಡೆಯಿಂದ ಆಗಮಿಸಿದ್ದ ಈ ಸಮುದಾಯದ ಯುವಜನರು ತಮ್ಮ ಆಚಾರ ವಿಚಾರದೊಂದಿಗೆ ಸಾಂಸ್ಕೃತಿಕ ವೈಭವ ತೆರೆದಿಟ್ಟರು.

ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಗೃಹ ಮಂತ್ರಾಲಯ, ರಾಜ್ಯ ಸರ್ಕಾರ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯುಕ್ತಾಶ್ರಯದಲ್ಲಿ ಗುರುವಾರ ಆರಂಭವಾದ 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದಲ್ಲಿ ಬುಡಕಟ್ಟು ಸಮುದಾಯಗಳ ಪರಂಪರೆ, ಆಚರಣೆ, ಸಾಂಸ್ಕೃತಿಕ ಚಟುವಟಿಕೆಯನ್ನು ಪ್ರದರ್ಶಿಸುವ ಮೂಲಕ ಬುಡಕಟ್ಟು ಪ್ರಪಂಚವನ್ನೇ ತೆರೆದಿಟ್ಟರು.

ಕರ್ನಾಟಕದ ವಿವಿಧ ಭಾಗಗಳೂ ಸೇರಿದಂತೆ ಛತ್ತೀಸ್‌ಗಢ, ಜಾರ್ಖಂಡ್, ಮಹಾರಾಷ್ಟ್ರ, ಒಡಿಸ್ಸಾ, ತೆಲಂಗಾಣ ಮತ್ತು ಬಿಹಾರ ರಾಜ್ಯಗಳ ಆಯ್ದ ಬುಡಕಟ್ಟು ಯುವಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಜ.24ರವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರತಿನಿತ್ಯ ಆಯಾ ರಾಜ್ಯಗಳ ಸಂಸ್ಕೃತಿ, ಕಲೆ, ಆಹಾರ ಪದ್ಧತಿ, ಆಚಾರ ವಿಚಾರ, ಭಾಷಾ ಕಲಿಕೆ, ಉಡುಗೆ–ತೊಡುಗೆ, ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಪರಿಚಯ ಹಾಗೂ ಚರ್ಚೆಗಳು ನಡೆಯಲಿವೆ.

ಮೈಸೂರು ವಿಶ್ವ ವಿದ್ಯಾಲಯದ ಕುಲಸಚಿವೆ ವಿ.ಆರ್. ಶೈಲಜಾ ಮಾತನಾಡಿ, ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡ ರಾಷ್ಟ್ರವಾಗಿದೆ. ದೇಶದುದ್ದಗಲಕ್ಕೂ ವಿಭಿನ್ನ ಭಾಷೆ, ವಿಭಿನ್ನ ಸಂಸ್ಕೃತಿ, ಆಚಾರ–ವಿಚಾರಗಳನ್ನು ಕಾಣಬಹುದಾಗಿದೆ. ಇದರೊಂದಿಗೆ ಹಲವು ಭಾಷಿಗರು ನೆಲೆಸಿದ್ದಾರೆ. ಇಂತಹ ವೈವಿಧ್ಯತೆಯನ್ನು ಭಾರತದಲ್ಲಿ ಮಾತ್ರ ಕಾಣಬಹುದು ಎಂದರು.

ನಮ್ಮ ದೇಶ ಯುವ ಶಕ್ತಿಯ ಮೇಲೆ ನಿಂತಿದೆ ದೇಶದಲ್ಲಿ ಯುವಜನರ ಸಂಖ್ಯೆ ಹೆಚ್ಚಾಗಿರುವುದರಿಂದ ವಿಶ್ವದ ಅನೇಕ ರಾಷ್ಟ್ರಗಳು ಭಾರತದತ್ತ ಗಮನ ಹರಿಸುತ್ತಿವೆ. ನಮ್ಮ ದೇಶದ ಯುವಜನರು ತಮ್ಮ ತಮ್ಮ ಕೌಶಲ್ಯದಿಂದ ಇಂದು ವಿಶ್ವವನ್ನೇ ಆಳುತ್ತಿದ್ದಾರೆ. ಆ್ಯಪಲ್, ಗೂಗಲ್ ಸೇರಿದಂತೆ ಇನ್ನಿತರ ಪ್ರತಿಷ್ಠಿತ ಕಂಪನಿಗಳನ್ನು ಭಾರತೀಯರು ಮುನ್ನಡೆಸುತ್ತಿರುವುದು ಹೆಮ್ಮೆಯ ವಿಚಾರ. ಇದು ನಮ್ಮ ಯುವಜನರಲ್ಲಿರುವ ಕೌಶಲ್ಯ ಹಾಗೂ ಬುದ್ಧಿವಂತಿಕೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಯುವ ಜನರು ತಮ್ಮಲ್ಲಿರುವ ಕೀಳರಿಮೆ ತೊಡೆದು ಹಾಕಬೇಕು. ಯಾವುದೇ ಕಾರಣಕ್ಕೂ ಧೃತಿಗೆಡಬಾರದು. ತಮ್ಮಲ್ಲಿರುವ ಶಕ್ತಿ ಹಾಗೂ ಸಾಮರ್ಥ್ಯವನ್ನು ಅರಿತು ಕಾರ್ಯನಿರ್ವಹಿಸಬೇಕು. ಕೌಶಲ್ಯ, ಜ್ಞಾನ ಪಡೆದುಕೊಂಡು ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಜಿಎಸ್‌ಎಸ್ ಯೋಗಸಂಸ್ಥೆಯ ಸಂಸ್ಥಾಪಕ ಶ್ರೀಹರಿ ಮಾತನಾಡಿ, ಯುವಜನರು ಭಾಷಾ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕು. ದಕ್ಷಿಣ ಭಾರತೀಯರು ಹೇಗೆ ಹಿಂದಿಯನ್ನು ಕಲಿತು ಮಾತನಾಡುತ್ತಿರುವರೋ ಅದೇ ರೀತಿ ಉತ್ತರ ಭಾರತದ ರಾಜ್ಯಗಳು ದಕ್ಷಿಣ ಭಾರತ ಭಾಷೆ ಕಲಿಯಲು ಪ್ರಾರಂಭಿಸಬೇಕು. ಇದರಿಂದ ಉತ್ತಮ ಬಾಂಧವ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

ನೆಹರು ಯುವ ಕೇಂದ್ರದ ದಕ್ಷಿಣ ವಲಯದ ಕ್ಷೇತ್ರೀಯ ನಿರ್ದೇಶಕ ಎಂ.ಎನ್. ನಟರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ವೇದಿಕೆಯಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಜಿಲ್ಲಾ ಯುವ ಸಲಹಾ ಸಮಿತಿ ಸದಸ್ಯ ವರಕೋಡು ಪ್ರಕಾಶ್, ಎನ್‌ಎಸ್‌ಎಸ್ ಸಂಯೋಜಕ ಎಂ.ಬಿ.ಸುರೇಶ್, ಜಿಲ್ಲಾ ಯುವಜನ ಅಧಿಕಾರಿ ರಘುವೀರ್ ಇದ್ದರು.



ಪ್ರಜಾರಾಜ್ಯದಲ್ಲಿ ರೈತಗೀತೆ...

ಸ್ವಾತಂತ್ರ್ಯ ಬಂದು 75 ವರ್ಷವಾದರೂ ಪ್ರಜೆಗಳಿಗೆ ಸಿಗಬೇಕಾದ ಸ್ವಾತಂತ್ರ್ಯ ಸಂಪೂರ್ಣವಾಗಿ ಸಿಕ್ಕಿದೆಯಾ ಎಂಬ ಪ್ರಶ್ನೆ ಹುಟ್ಟು ಹಾಕುವ ಚಿತ್ರ ಪ್ರಜಾರಾಜ್ಯ. ವಿಜಯ್ ಭಾರ್ಗವ ನಿರ್ದೇಶನವಿರುವ ಈ ಚಿತ್ರದಲ್ಲಿ ರೈತರನ್ನು ಕುರಿತಾಗಿ ಮಾಡಿರುವ ಹಾಡು ಸಂಕ್ರಾಂತಿ ಪ್ರಯುಕ್ತ ಬಿಡುಗಡೆಯಾಗಿದೆ. ಡಾ.ವಿ.ನಾಗೇಂದ್ರಪ್ರಸಾದ್ ರಚನೆಯ 'ಜಗದಲ್ಲಿ ರೈತನೆಂಬ ಬ್ರಹ್ಮ...ಎಂದು ಆರಂಭವಾಗುವ ಈ ಗೀತೆಯನ್ನು ಶಂಕರ್ ಮಹದೇವನ್ ಹಾಡಿದ್ದಾರೆ. ಈ ಹಾಡನ್ನು ರಿಲೀಸ್ ಮಾಡಿದ ನಾಗಾಭರಣ, ನಾಗೇಂದ್ರಪ್ರಸಾದ್ ಅವರು ಹೊಸದನ್ನು ಹುಟ್ಟುಹಾಕುವ ಪ್ರಯತ್ನ ಮಾಡಿದ್ದಾರೆ.

ನಮ್ಮ ಮೂಲ ಸಂಸ್ಕೃತಿಯ ಜೊತೆಗೆ ಕೃಷಿಯನ್ನು ಹೇಗೆ ಬೆಸೆಯಬೇಕು ಎನ್ನುವಾಗ ಗ್ಲೋಬಲ್ ಮಾರ್ಕೆಟ್ ಬಂದು ಬೆಳೆಯಲು ಬಿಡುತ್ತಿಲ್ಲ. ಈ ಮಾರ್ಕೆಟ್ ನಮ್ಮ ಸಂಸ್ಕೃತಿಯನ್ನು ಮರೆಸುತ್ತಿದೆ. ಕೃಷಿ ಹಾಳಾದರೆ ಏನಾಗುತ್ತೆ ಎನ್ನುವುದಕ್ಕೆ ಪಾಕಿಸ್ತಾನ ಉತ್ತಮ ಉದಾಹರಣೆ. ಟ್ರ್ಯಾಕ್ಟರ್ ಬಂದ ಮೇಲೆ ಎತ್ತುಗಳು ಕಡಿಮೆಯಾಗಿವೆ. ಇದನ್ನು ಜನರಿಗೆ ತಲುಪಿಸುವ ಪ್ರಯತ್ನ ಪ್ರಜಾರಾಜ್ಯ ತಂಡ ಮಾಡಿದೆ ಎಂದರು.

ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ಮಾಣ ಮಾಡಿರುವ ಡಾ.ವರದರಾಜು ಮಾತನಾಡುತ್ತಾ 'ನಾನು ವೃತ್ತಿಯಲ್ಲಿ ಡಾಕ್ಟರ್ ಆಗಿದ್ದರೂ ನನ್ನ ಮೂಲ ಕಸುಬು ಕೃಷಿ. ಇಂದು ದೇಶವನ್ನು ಕಾಪಾಡುತ್ತಿರೋದು ಕೃಷಿ ಹಾಗೂ ರೈತ. ಆ ರೈತರಿಗೆ ಈ ಹಾಡು ಸಮರ್ಪಣೆ. ಹಾಗಾಗಿ ನಾವು ಈ ಗೀತೆಯನ್ನು ರೈತರ ಹಬ್ಬ ಸಂಕ್ರಾಂತಿಯಲ್ಲೇ ರಿಲೀಸ್ ಮಾಡುತ್ತಿದ್ದೇವೆ. ಸ್ವಾತಂತ್ರ್ಯ ಬಂದ ಈ 75 ವರ್ಷದಲ್ಲಿ ಪ್ರಜಾಪ್ರಭುತ್ವವನ್ನು ಮರೆತಿರುವುದೇ ನಮ್ಮ ಸಾಧನೆ. ಹಾಗಾಗಿ ಅದನ್ನು ನೆನಪು ಮಾಡಲೆಂದೇ ಈ ಚಿತ್ರ ನಿರ್ಮಿಸಿದ್ದೇವೆ ಎಂದು ಹೇಳಿದರು. ನಿರ್ದೇಶಕ ವಿಜಯ್ ಭಾರ್ಗವ ಮಾತನಾಡುತ್ತಾ ನನ್ನ ಮೊದಲ ಚಿತ್ರದಲ್ಲೇ ರೈತಗೀತೆಯನ್ನು ಶೂಟ್ ಮಾಡಿದ್ದಕ್ಕೆ ಹೆಮ್ಮೆಯಿದೆ ಎಂದು ಹೇಳಿದರು. ಫೆಬ್ರವರಿ 24ರಂದು ಈ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಚಿತ್ರಕ್ಕೆ ವಿಜೇತ ಮಂಜಯ್ಯ ಅವರ ಸಂಗೀತ ಸಂಯೋಜನೆ, ರಾಕೇಶ್ ಸಿ.ತಿಲಕ್ ಅವರ ಛಾಯಾಗ್ರಹಣ ಹಾಗೂ ಶ್ರೀಕಾಂತ್ ಅವರ ಸಂಕಲನವಿದೆ. ಚಿತ್ರದ ಮುಖ್ಯ ಪಾತ್ರದಲ್ಲಿ ನಿರ್ಮಾಪಕ ವರದರಾಜು ಹಾಗೂ ನಿರ್ದೇಶಕ ವಿಜಯ್ ಭಾರ್ಗವ ಇಬ್ಬರೂ ನಟಿಸಿದ್ದು, ನಾಯಕಿಯಾಗಿ ದಿವ್ಯಾ ಗೌಡ ಕಾಣಿಸಿಕೊಂಡಿದ್ದಾರೆ. ಉಳಿದಂತೆ ದೇವರಾಜ್, ಸುಧಾ ಬೆಳವಾಡಿ, ಟಿ.ಎಸ್. ನಾಗಾಭರಣ, ಅಚ್ಯುತ್‌ಕುಮಾರ್, ತಬಲಾನಾಣಿ, ಸುಧಾರಾಣಿ ಮುಂತಾದವರಿದ್ದಾರೆ.



ಮತ್ತೊಂದು ದೈವದ ಚಿತ್ರ

ಕಾಂತಾರ ಮಾಡಿದ ದಾಖಲೆ ಅಪಾರ. ಈಗ ಅದೇ ಶೈಲಿಯ ಮತ್ತೊಂದು ಚಿತ್ರ ತೆರೆಗೆ ಬರುತ್ತಿದೆ. ಪವಾಡಪುರುಷ ಕೊರಗಜ್ಜ ಅವರ ಜೀವನಾಧಾರಿತ ಕಥೆ ಹೊಂದಿದ 'ಕರಿ ಹೈದ ಕರಿ ಅಜ್ಜ' ಚಿತ್ರಕ್ಕೆ ಸುಧೀರ್ ಅತ್ತಾವರ ಅವರ ನಿರ್ದೇಶನವಿದೆ. ಶೃತಿ, ಭವ್ಯ ಅಲ್ಲದೆ ಬಾಲಿವುಡ್‌ನ ಕಬೀರ್‌ಬೇಡಿ ನಟಿಸಿರುವ ಈ ಚಿತ್ರದಲ್ಲಿ ಹಾಲಿವುಡ್ ಹಾಗೂ ಫ್ರೆಂಚ್ ನೃತ್ಯ ನಿರ್ದೇಶಕ ಸಂದೀಪ್ ಸೋಪರ್‌ಕರ್ ಅವರು ಕೊರಗಜ್ಜನ ಜೊತೆಗಿರುವ ಗುಳಿಗನ ಪಾತ್ರ ನಿರ್ವಹಿಸಿದ್ದಾರೆ.

ನಿರ್ದೇಶಕ ಸುಧೀರ್ ಮಾತನಾಡಿ, ಕೊರಗ ಜನಾಂಗದ ಹುಡುಗನೊಬ್ಬ ದೈವತ್ವ ಪಡೆದ ಕಥೆಯಿದು. ಸಂದೀಪ್ ಸೋಪರ್‌ಕರ್ ಅವರು ಗುಳಿಗ ದೈವದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೊರಗಜ್ಜನ ಬಗ್ಗೆ ಚಿತ್ರ ಮಾಡಬೇಕೆಂದು 20ಕ್ಕೂ ಹೆಚ್ಚು ನಿರ್ಮಾಪಕರು ಪ್ರಯತ್ನಿಸಿದರೂ ಆಗಿರಲಿಲ್ಲ, ನಮಗೆ ದೇವರ ಅಪ್ಪಣೆ ಸಿಕ್ಕ ಮೇಲೆ ಚಿತ್ರ ಆರಂಭಿಸಿದೆವು. ಕೊರಗಜ್ಜನ ಸಾಕುತಾಯಿಯಾಗಿ ಹಿರಿಯ ನಟಿ ಶೃತಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾವನ್ನು ದೈವವೇ ನನ್ನ ಕೈಲಿ ಮಾಡಿಸಿದೆ. ಮಂಗಳೂರು ಭಾಗದ ಮನೆಮನೆಯಲ್ಲೂ ಕೊರಗಜ್ಜನನ್ನು ಆರಾಧಿಸುತ್ತಾರೆ ಎಂದರು. ನಟಿ ಶೃತಿ ಮಾತನಾಡಿ, ಈ ಚಿತ್ರ ನನ್ನ ಮನದಲ್ಲಿ ವಿಶೇಷ ಸ್ಥಾನ ಪಡೆದಿದೆ. ನಾನಿಲ್ಲಿ ಮೈರಕ್ಕೆ ಬೈದ್ಯೆದಿಯ ಪಾತ್ರ ಮಾಡಿದ್ದೇನೆ. ಈ ಕಥೆಯನ್ನು ಹೆಕ್ಕಿ ತೆಗೆದ ನಿರ್ದೇಶಕರ ಧೈರ್ಯ ಮೆಚ್ಚಲೇಬೇಕು. ಚಿತ್ರಕ್ಕಾಗಿ ನಿರ್ಮಾಪಕರು ಕೋಟಿ ಕೋಟಿ ಹಣ ಖರ್ಚು ಮಾಡಿದ್ದಾರೆ. ಯಾರಿಗೂ ಸಿಗದೆ ಇರುವ ಅವಕಾಶ ಈ ತಂಡಕ್ಕೆ ಸಿಕ್ಕಿದೆ. ಇದರಲ್ಲಿ ಬರುವ ಪ್ರತಿಯೊಬ್ಬರ ಪಾತ್ರವೂ ರವಿವರ್ಮನ ಪೇಂಟಿಂಗ್ ಥರ ಇದೆ. ನಿರ್ದೇಶಕರು ಅಷ್ಟು ತಯಾರಿ ಮಾಡಿಕೊಂಡು ಸಿನಿಮಾ ಮಾಡಿದ್ದಾರೆ. ಮೈರಕ್ಕೆ ಬೈದ್ಯೆದಿ ಕೊರಗಜ್ಜನ ಸಾಕುತಾಯಿ. ಇದರಲ್ಲಿ ಕೊರಗಜ್ಜನಿಗೆ ತನಿಯಾ, ಕಾಂತಾರ ಎಂಬ ಹೆಸರಿದೆ. ಇದರಲ್ಲಿ ತಾಯಿ ಮಗನ ಬಾಂಧವ್ಯವನ್ನು ಸೊಗಸಾಗಿ ತೋರಿಸಲಾಗಿದೆ ಎಂದರು.



ನಂತರ ಭವ್ಯ ಮಾತನಾಡುತ್ತಾ ಈ ಚಿತ್ರದ ಶೂಟಿಂಗ್ ಮಾಡುವಾಗ ಹಲವಾರು ಮಿರಾಕಲ್‌ಗಳು ನಡೆದಿವೆ. ಒಂದು ಸೀನ್‌ಗೆ ನದಿ ನೀರಿನ ಪ್ರತಿಬಿಂಬದ ಶಾಟ್ ಬೇಕಾಗಿತ್ತು, ಆದರೆ ನದಿಯಲ್ಲಿ ಏಳುತ್ತಿದ್ದ ದೊಡ್ಡ ಅಲೆಗಳಿಂದ ಪ್ರತಿಬಿಂಬ ದೊರೆಯುವುದು ಅಸಾಧ್ಯವೆನಿಸಿತ್ತು. ಆದರೆ ಟೇಕ್ ತೆಗೆದುಕೊಳ್ಳುವ ವೇಳೆಗೆ ಸರಿಯಾಗಿ ನದಿಯ ಅಲೆಗಳು ನಿಂತು ಅದ್ಭುತವಾದ ಪ್ರತಿಬಿಂಬದ ಶಾಟ್ ದೊರೆಯಿತು ಎಂದರು.

ನಿರ್ಮಾಪಕ ತ್ರಿವಿಕ್ರಮ ಸಪಲ್ಯ ಮಾತನಾಡಿ, ತುಳುನಾಡ ಜನರ ಸಂಸ್ಕೃತಿಯನ್ನು ತೆರೆಮೇಲೆ ತೋರಿಸುವ ಆಸೆಯಿತ್ತು. ಅದು ಈ ಚಿತ್ರದ ಮೂಲಕ ಈಡೇರಿದೆ. ಸೋಮೇಶ್ವರ, ಉಲ್ಲಾಳ, ಮಡಂತ್ಯಾರ, ಪೇರೂರು, ಅಡ್ಯಾರ, ಎರ್ಮಾಯ್, ಸಾರಪಲ್ಲ, ಅರ್ಕುಳ, ಮಂಗಳೂರು ಸುತ್ತಮುತ್ತ ಚಿತ್ರೀಕರಿಸಲಾಗಿದೆ ಎಂದರು.

ನೆನಪಿನ ಹಾದಿಯಲಿ ಒಂಟಿ ಪಯಣ



ಈ ಹಿಂದೆ ಸಂಚಾರಿ ವಿಜಯ್ ಅಭಿನಯದ '6ನೇ ಮೈಲಿ' ಅಲ್ಲದೆ ವಸಿಷ್ಠ ಅಭಿನಯದ 'ತಲ್ವಾರ್‌ಪೇಟೆ' ಚಿತ್ರಗಳನ್ನು ನಿರ್ಮಿಸಿದ ದಾವಣಗೆರೆ ಮೂಲದ ಡಾ॥ಶೈಲೇಶ್ ಕುಮಾರ್ ಅವರೀಗ 'ನೆನಪಿನ ಹಾದಿಯಲ್ಲಿ' ಒಂಟಿ ಪಯಣ ಎಂಬ ಆಲ್ಬಂ ಹಾಡನ್ನು ಹೊರ ತಂದಿದ್ದಾರೆ. ಡಾ॥ಶಶಿಕಲಾ ಪುಟ್ಟಸ್ವಾಮಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಹಾಡಿಗೆ ವಿಜಯ ಪ್ರಕಾಶ್ ದನಿಯಾಗಿದ್ದಾರೆ. ಪ್ರವೀಣ್‌ತೇಜ್ ಹಾಗೂ ಯಶಾ ಶಿವಕುಮಾರ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಈ ಹಾಡಿಗೆ ಸಾಯಿ ಶ್ರೀಕಿರಣ್ ಸಂಗೀತ ಸಂಯೋಜಿಸಿದ್ದಾರೆ. ಅಲ್ಲದೆ ಚಂದ್ರಶೇಖರ್ ಅವರ ಛಾಯಾಗ್ರಹಣ ಈ ಹಾಡಿಗಿದ್ದು, ಕೆ.ಎಂ.ಪ್ರಕಾಶ್ ಸಂಕಲನ ಮಾಡಿದ್ದಾರೆ. ಧನಂಜಯ್ ಅವರ ನೃತ್ಯ ನಿರ್ದೇಶನವೂ ಈ ಹಾಡಿಗಿದೆ.

ಇತ್ತೀಚೆಗೆ 'ನೆನಪಿನ ಹಾದಿಯಲ್ಲಿ ಒಂಟಿ ಪಯಣ' ಈ ಆಲ್ಬಂ ಸಾಂಗ್‌ನ ಬಿಡುಗಡೆ ಸಮಾರಂಭ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನೆರವೇರಿತು. ಹಾಕಿ ಆಟಗಾರ ಧನರಾಜ್ ಪಿಳ್ಳೈ, ಡಾ॥ವಿ. ನಾಗೇಂದ್ರ ಪ್ರಸಾದ್, ಲಕ್ಕಣ್ಣ ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಿರ್ಮಾಪಕ ಡಾ॥ಶೈಲೇಶ್ ಕುಮಾರ್ ಮಾತನಾಡಿ, ಯುವ ಪ್ರೇಮಿ ಗಳನ್ನು ಸೆಳೆಯುವ ಸಾಹಿತ್ಯ ಇರುವ ಈ ಹಾಡು ಚೆನ್ನಾಗಿ ಮೂಡಿ ಬಂದಿದೆ. ನಾವು ಎಸ್.ಎನ್.ಸಿ. ಕ್ರಿಯೇಷನ್ಸ್ ಎಂಬ ಹೊಸ ಯೂಟ್ಯೂಬ್ ಚಾನಲ್ ಆರಂಭಿಸಿದ್ದು, ಆ ಮೂಲಕ ಈ ಹಾಡನ್ನು ಬಿಡುಗಡೆ ಮಾಡಿದ್ದೇವೆ. ಚಿತ್ರ ನಿರ್ಮಾಣಕ್ಕೂ ಇದು ಸಹಕಾರಿಯಾಗಲಿದೆ ಎಂದು ಹೇಳಿದರು.

ನಂತರ ನಾಯಕ ನಟ ಪ್ರವೀಣ್‌ತೇಜ್ ಮಾತನಾಡುತ್ತಾ ಸಂಗೀತ ನಿರ್ದೇಶಕ ಸಾಯಿ ಶ್ರೀಕಿರಣ್ ಅವರಿಂದ ನನಗೆ ಈ ತಂಡದ ಪರಿಚಯ ವಾಯಿತು. ಶಶಿಕಲಾ ಅವರು ಬರೆದಿರುವ ಹಾಡು ಸುಂದರವಾಗಿದೆ. ಅಷ್ಟೇ ಚೆನ್ನಾಗಿ ನಿರ್ದೇಶನ ಕೂಡ ಮಾಡಿದ್ದಾರೆ. ಇಡೀ ತಂಡದ ಪರಿಶ್ರಮದಿಂದ ಹಾಡು ತೆರೆ ಮೇಲೆ ಆಕರ್ಷಣೀಯವಾಗಿ ಮೂಡಿ ಬಂದಿದೆ ಎಂದು ಹೇಳಿದರು. ಪದವಿಪೂರ್ವ ಖ್ಯಾತಿಯ ನಟಿ ಯಶಾ ಶಿವಕುಮಾರ್ ಮಾತನಾಡುತ್ತಾ ಇದು ನನ್ನ ಮೊದಲ ಆಲ್ಬಂ ಸಾಂಗ್, ನಿರ್ಮಾಪಕರು ಬಹಳ ಖರ್ಚುಮಾಡಿ ಸಿನಿಮಾ ಶೈಲಿಯಲ್ಲೇ ಇದನ್ನು ಚಿತ್ರೀಕರಿಸಿದ್ದಾರೆ ಎಂದು ಹೇಳಿದರು, ಈ ಹಾಡನ್ನು ಬರೆದು ನಿರ್ದೇಶಿಸಿರುವ ಡಾ॥ ಶಶಿಕಲಾ ಪುಟ್ಟಸ್ವಾಮಿ, ಛಾಯಾಗ್ರಾಹಕ ಚಂದ್ರಶೇಖರ್ ಹಾಗೂ ಸಂಗೀತ ನಿರ್ದೇಶಕ ಸಾಯಿಶ್ರೀಕಿರಣ್ ಈ ಆಲ್ಬಮ್ ಹಾಡಿನ ವಿಶೇಷತೆಗಳ ಕುರಿತಂತೆ ಮಾತನಾಡಿದರು.

2023ರ ಬಹುನಿರೀಕ್ಷಿತ ಚಿತ್ರ 'ಕಬ್ಜ'



ಸಿನಿಮಾ, ಟಿವಿ ಕಾರ್ಯಕ್ರಮ ಹಾಗೂ ತಾರೆಯರ ಅಧಿಕೃತ ಮಾಹಿತಿ ತಾಣವಾದ ಇಂಟರ್‌ನೆಟ್ ಮೂವಿ ಡೇಟಾ ಬೇಸ್ (ಐಎಂಡಿಬಿ) ಈ ವರ್ಷದ ಬಹುನಿರೀಕ್ಷಿತ ಚಿತ್ರಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಒಟ್ಟು 20 ಚಿತ್ರಗಳ ಈ ಪಟ್ಟಿಯಲ್ಲಿ ಕನ್ನಡದಿಂದ ಉಪೇಂದ್ರ–ಸುದೀಪ್ ಅಭಿನಯದ ಕಬ್ಜ ಚಿತ್ರವಷ್ಟೇ ಇರುವುದು ವಿಶೇಷ.

ಈ ಪಟ್ಟಿಯಲ್ಲಿ ಕಬ್ಜ ಏಳನೇ ಸ್ಥಾನದಲ್ಲಿದ್ದು, ಮಿಕ್ಕಂತೆ ಶಾರುಖ್‌ಖಾನ್ ಅಭಿನಯದ 'ಪಠಾಣ್', ಅಲ್ಲು ಅರ್ಜುನ್ ಅಭಿನಯದ 'ಪುಷ್ಪ', ಪ್ರಭಾಸ್ ಅಭಿನಯದ 'ಸಲಾರ್' ಮತ್ತು 'ಆದಿಪುರುಷ್', ವಿಜಯ್ ಅಭಿನಯದ 'ವಾರಿಸು', ಸಲ್ಮಾನ್‌ಖಾನ್ ಅಭಿನಯದ 'ಟೈಗರ್–3', ಕಮಲ್‌ಹಾಸನ್ ಅಭಿನಯದ 'ಇಂಡಿಯನ್ 2' ಚಿತ್ರಗಳಿವೆ. ಹಿಂದಿ, ತೆಲುಗು ಮತ್ತು ತಮಿಳು ಭಾಷೆಯ ಚಿತ್ರಗಳೇ ಹೆಚ್ಚಿರುವ ಈ ಪಟ್ಟಿಯಲ್ಲಿ ಕನ್ನಡ ಭಾಷೆಯಿಂದ ಏಕೈಕ ಚಿತ್ರವಾಗಿ ಆರ್.ಚಂದ್ರು ನಿರ್ದೇಶನದ 'ಕಬ್ಜ' ಇದೆ. 'ಕೆಜಿಎಫ್', 'ಕಾಂತಾರಾ' ಚಿತ್ರಗಳ ನಂತರ ಭಾರತದಾದ್ಯಂತ ಅತೀ ಹೆಚ್ಚು ನಿರೀಕ್ಷೆ ಇರುವ ಕನ್ನಡ ಚಿತ್ರ 'ಕಬ್ಜ' ಟೀಸರ್ ಈಗಾಗಲೇ ಹೊಸ ಟ್ರೆಂಡನ್ನೇ ಸೃಷ್ಟಿಸಿದೆ. ಚಿತ್ರದ ಮೇಕಿಂಗ್, ಬಜೆಟ್, ಸ್ಟಾರ್‌ಕಾಸ್ಟ್ ಹೀಗೆ ಪ್ರತಿಯೊಂದು ಅಂಶಗಳಲ್ಲೂ 'ಕಬ್ಜ' ಮೊದಲ ಸಾಲಿನಲ್ಲಿದೆ. ಗ್ಲೋಬಲ್ ಲೆವೆಲ್‌ನಲ್ಲಿ ಪ್ರಚಾರ ಕಂಡಿರುವ ಪ್ಯಾನ್ ಇಂಡಿಯಾ ಚಿತ್ರವಾದ ಕಬ್ಜ ಬಿಡುಗಡೆಗೆ ಭಾರತೀಯ ಚಿತ್ರರಂಗವೇ ಎದುರು ನೋಡುತ್ತಿದೆ. ಆರ್.ಚಂದ್ರು ನಿರ್ದೇಶನದಲ್ಲಿ, ನೂರು ಕೋಟಿ ಬಜೆಟ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾದ ಬಹುನಿರೀಕ್ಷಿತ 'ಕಬ್ಜ' ಚಿತ್ರವನ್ನು ಎಂ.ಟಿ.ಬಿ. ನಾಗರಾಜ್ ಅವರ ಸಹಕಾರದೊಂದಿಗೆ ಶ್ರೀ ಸಿದ್ಧೇಶ್ವರ ಎಂಟರ್‌ಪ್ರೈಸಸ್ ಮೂಲಕ ಆರ್.ಚಂದ್ರು ನಿರ್ಮಿಸಿದ್ದಾರೆ. ಈಗಾಗಲೇ ಹಿಂದಿ ಅವತರಣಿಕೆಯ ಹಕ್ಕುಗಳನ್ನು ಬಾಲಿವುಡ್‌ನ ಜನಪ್ರಿಯ ನಿರ್ಮಾಣ ಸಂಸ್ಥೆ ಆನಂದ್ ಪಂಡಿತ್ ಮೋಷನ್ ಪಿಕ್ಚರ್ಸ್ ಬಹುದೊಡ್ಡ ಮೊತ್ತಕ್ಕೆ ಪಡೆದುಕೊಂಡಿದೆ. ಸದ್ಯ 'ಕಬ್ಜ' ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ಕೊನೇ ಹಂತದಲ್ಲಿದ್ದು, ಸದ್ಯದಲ್ಲೇ ಬಿಡುಗಡೆ ದಿನಾಂಕವನ್ನು ನಿರ್ದೇಶಕ ಆರ್.ಚಂದ್ರು ಘೋಷಿಸಲಿದ್ದಾರೆ. ನಟ ಉಪೇಂದ್ರ, ಸುದೀಪ್, ಶ್ರೀಯಾ ಶರಣ್, ರಾಣಾ ದಗ್ಗುಭಾಟಿ ಸೇರಿದಂತೆ ದಕ್ಷಿಣ, ಉತ್ತರ ಭಾರತದ ಅನೇಕ ಕಲಾವಿದರ ದಂಡೇ ಅಭಿನಯಿಸಿರುವ ಈ ಚಿತ್ರಕ್ಕೆ 'ಕೆಜಿಎಫ್' ಖ್ಯಾತಿಯ ರವಿ ಬಸ್ರೂರು ಸಂಗೀತ ಸಂಯೋಜಿಸಿದ್ದಾರೆ.


ಸಿದ್ದೇಗೌಡರ ನಿರ್ದೇಶನದಲ್ಲಿ 'ಋತುಮತಿ'

ಇತ್ತೀಚೆಗೆ ಮಹಿಳಾ ಪ್ರದಾನ ಕಥಾಹಂದರ ಇರುವ ಚಿತ್ರಗಳ ಸಂಖ್ಯೆ ಕಡಿಮೆಯಾಗಿದೆ. ಆಗೊಮ್ಮೆ ಈಗೊಮ್ಮೆ ಇಂಥ ಚಿತ್ರಗಳು ನಿರ್ಮಾಣವಾಗುತ್ತಿವೆ. ಈಗ ಅತ್ಯಂತ ಗಂಭೀರವಾದ ವಿಷಯವೊಂದನ್ನು ಇಟ್ಟುಕೊಂಡು ನಿರ್ದೇಶಕ ಹೆಚ್.ಡಿ. ಕೋಟೆ ತಾಲೂಕು ಜಿ.ಬಿ. ಸರಗೂರಿನ ಗ್ರಾಮೀಣ ಪ್ರತಿಭೆ ಸಿದ್ದೇಗೌಡರು ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಹಿಂದಿನಿಂದಲೂ ನಮ್ಮ ಸಮಾಜದಲ್ಲಿ ಸಂಸ್ಕೃತಿಯ ನೆಪದಲ್ಲಿ ಮಹಿಳೆಯರನ್ನು ಮೂಲೆಗುಂಪು ಮಾಡಲಾಗುತ್ತಿದೆ. ಅಂಥದ್ದೇ ಕಂಟೆಂಟ್ ಇಟ್ಟುಕೊಂಡು ನಿರ್ದೇಶಕರು ಸಮಾಜಕ್ಕೆ ಉತ್ತಮ ಸಂದೇಶವನ್ನು ಹೇಳಹೊರಟಿದ್ದಾರೆ, ಆ ಚಿತ್ರದ ಹೆಸರು 'ಋತುಮತಿ'

ಸಿದ್ದೇಗೌಡರು ಮಾನಸಗಂಗೋತ್ರಿಯಲ್ಲಿ ಡಿಎಫ್‌ಡಿ ಮುಗಿಸಿ, ಒಂದಷ್ಟು ಧಾರಾವಾಹಿಗಳಿಗೆ ಸಹಾಯಕ, ಸಹ ನಿರ್ದೇಶಕನಾಗಿ ಕೆಲಸ ಮಾಡಿದರು. ಆನಂತರ ತಮ್ಮದೇ ಆದ ಜೀವಿತ ಕ್ರಿಯೇಶನ್ಸ್ ಎಂಬ ನಿರ್ಮಾಣ ಸಂಸ್ಥೆ ಪ್ರಾರಂಭಿಸಿ, ಆ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಅನೇಕ ಸಾಕ್ಷಚಿತ್ರಗಳನ್ನು ನಿರ್ಮಿಸಿ ಕೊಟ್ಟರು. ಅದಾದ ಮೇಲೆ ಚಿತ್ರರಂಗದಲ್ಲಿ 'ದಕ್ಷಯಜ್ಞ', 'ತರ್ಲೆ ವಿಲೇಜ್', 'ಥಿಯರಿ', 'ಹೂವಿನ ಹಾರ'ದಂಥ ವಿಭಿನ್ನ ಜಾನರ್ ಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡರು. ಈಗ ಋತುಮತಿ ಎಂಬ ಮಹಿಳಾಪ್ರದಾನ ಕಥಾಹಂದರ ಹೊಂದಿರುವ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. 'ಋತುಮತಿ' ವಯಸ್ಸಿಗೆ ಬಂದ ಹೆಣ್ಣೊಬ್ಬಳ ಹೇಳಿಕೊಳ್ಳಲಾಗದ ನೋವು, ಸಂಕಟದ ಕಥೆ, ಇಲ್ಲಿ ಪ್ರೀತಿ, ಪ್ರೇಮ, ಪ್ರಣಯ, ನೋವು–ನಲಿವು ಮದುವೆ ಸಂಸಾರ ಎಲ್ಲವೂ ಬೆರೆತಿದೆ. ಪ್ರಕೃತಿಯೇ ಇಲ್ಲಿ ಕಥಾವಸ್ತು, ವಿಭಿನ್ನ ಕಥೆಯುಳ್ಳ ಈ ಋತುಮತಿ ಚಿತ್ರವನ್ನು ನಿರ್ದೇಶಕ ಸಿದ್ದೇಗೌಡರು ಪ್ರೇಕ್ಷಕರ ಮನ ಮುಟ್ಟುವ ಹಾಗೆ ತೆರೆ ಮೇಲೆ ಕಟ್ಟಿಕೊಟ್ಟಿದ್ದಾರೆ. ಸದ್ಯದಲ್ಲೇ ಈ ಚಿತ್ರದ ಟೀಸರ್, ಟ್ರೈಲರ್ ಬಿಡುಗಡೆ ಮಾಡುವ ಯೋಜನೆ ಚಿತ್ರತಂಡಕ್ಕಿದೆ. ಜೀವಿತಾ ಕ್ರಿಯೇಶನ್ಸ್ ಅಡಿಯಲ್ಲಿ ತಯಾರಾಗುತ್ತಿರುವ ಈ ಚಿತ್ರಕ್ಕೆ ಸಹೋದರ ಎಸ್.ಬಿ.ಶಿವ ಅವರು ಬಂಡವಾಳ ಹೂಡಿ ನಿರ್ಮಾಣ ಮಾಡಿದ್ದಾರೆ. ಮುಂಜಾನೆ ಮಂಜು ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಸಿದ್ದು ಬದನಾಳ್ ಅವರ ಸಂಗೀತ ಸಂಯೋಜನೆಯಿದೆ. ಕಲಾ ನಿರ್ದೇಶನವನ್ನ ಮುಸ್ತಾಫಖಾನ್, ವಸ್ತ್ರಾಲಂಕಾರ ಮಹೇಶ್ ಹೆಬ್ಬಾಳ್, ವರ್ಣಾಲಂಕಾರ ಬದ್ರೇಶ್ ಕುಮಾರ್ ನಿರ್ವಹಿಸಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ ಹಾಗೂ ನಿರ್ದೇಶನ ಜವಾಬ್ದಾರಿಯನ್ನು ಸಿದ್ದೇಗೌಡರೇ ನಿರ್ವಹಿಸಿದ್ದಾರೆ.

ಸಿನಿಪದಬಂಧ–458

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________

ವಿಳಾಸ ____________________

ದೂರವಾಣಿ ಸಂಖ್ಯೆ ____________________

ವಿಜೇತರು: ಎಂ. ರಕ್ಷಿತ D/O ಜೆ.ಮಾದೇಶ, #3482/ಡಿ, ಹೊಸ ಸಂಖ್ಯೆ ಎಂ-14/ಡಿ, 6ನೇ ಕ್ರಾಸ್, 4ನೇ ಮುಖ್ಯರಸ್ತೆ, ತಿಲಕ್‌ನಗರ, ಮೈಸೂರು-01

ಸಿನಿ ಪದಬಂಧ 457ರ ಸರಿ ಉತ್ತರ

ಸಾ	ವಿ	ರ	ಸು	ಳ್ಳಿ		ಮೀ	ರಾ	ಮಾ	ಧ	ವ
ಗ			ತ್ರ		ಈ		ಚ್			ಸಂ
ರ		ಭೂ	ಮಿ	ಗೆ	ಬಂ	ದ	ಭ	ಗ	ವಂ	ತ
ದೀ	ಪಾ				ಧ		ರ			ಸೇ
ಪ		ಸ್ವಾ	ಭಿ	ಮಾ	ನ		ತ್		ಮೀ	ನಾ
		ತಿ						ಮಿ		
ಬೆ	ಲ್		ಕ		ಕು	ರು	ಕ್ಷೇ	ತ್ರ		ಕೆಂ
ಳ್ಳಿ			ಡ		ರಿ				ಹೆಂ	ಡ
ಬೆ	ಳು	ವ	ಲ	ದ	ಮ	ಡಿ	ಲ	ಲ್ಲಿ		ಸಂ
ಳ			ತೀ		ರಿ		ಗೋ			ಪಿ
ಕು	ಲ	ಗೌ	ರ	ವ		ಗಿ	ರಿ	ಮ	ಲ್ಲಿ	ಗೆ

ಎಡದಿಂದ ಬಲಕ್ಕೆ

1.ಸಿಂಡ್ರೆಲಾ ಸಿಂಡ್ರೆಲಾ... ಎಂದು ಹಾಡಿ ಕುಣಿದ ಬೇಬಿಯನ್ನು ಮಂದಹಾಸ ಬೀರು ಎನ್ನೋಣವೇ 7
4.ನಾಗರ ಹಾವು ರಾಮಾಚಾರಿಯ "ಮಾರ್ಗರೇಟ್" 2
7.ಅಂಬರೀಷ್ ಅಸಾಧಾರಣ ಧೈರ್ಯಶಾಲಿ ! 5
8.ಆಂಗ್ಲದ ಯುಗಳ ಗೀತೆ 5
9. _ _ ಅಂಡ್ ಲವ್ಲೀ 2
10. ಬಿ.ಸಿ.ಪಾಟೀಲ್ ಸೇನೆಯ ಮುಖ್ಯಸ್ಥ 4
11.ಶ್ರೀಧರ್ – ಸರಿತಾಳ ಬೇರ್ಪಡಿಸಲಾಗದ ಸಂಬಂಧ 4
12.ಬೆಂಗಳೂರಿನಲ್ಲಿ ಕಾಣಿಸಿಕೊಂಡ ದೆವ್ವ 2
14.'ಕುಬ್ಜ' ದ್ವಾರಕೀಶ್ ದನ ಕಾಯೋನು 5
15.ಅಗ್ನಿಯಲ್ಲಿ ಹವಿಸ್ಸನ್ನು ಆಹುತಿ ನೀಡುವಿಕೆ 5
17.ಡೈಲಾಗ್ ಕಿಂಗ್ ಸರಿಸಿದ ಪರದೆ 2
18.ಕಲ್ಲಿನ ಕೋಟೆಯ "ವೀರ" 7

ಮೇಲಿನಿಂದ ಕೆಳಕ್ಕೆ

2.'ಗಾಯತ್ರಿ ಜಯರಾಂ' ಅಲೆಮಾರಿ ಜಾನಪದ ಗಾಯಕಿ 2
3.ಸುನಿಲ್ ಕುಮಾರ್ ದೇಸಾಯಿ ಬಹುತೇಕ ಚಿತ್ರಗಳಿಗೆ ಈತನದೇ ಸಂಗೀತ 4
4.ನವರಸ ನಾಯಕನಿಗೆ ಒಳ್ಳೆಯ ಫಲ ಉಂಟಾಗುವ ಕಾಲವಿದೆ 4
5.ಇಲ್ಲೇ ಮೇಲಿನಿಂದ ಕೆಳಕ್ಕೆ 6 ರಲ್ಲಿರುವ ಚಿತ್ರಕ್ಕೆ ತುಸು ಸಂಬಂಧವಿರಲು ವಿಷ್ಣು ಅಭಿನಯವಿದೆ 8
6.ಉಪಚರಿಸಿಕೊಂಡು ಲೂಟಿ ಮಾಡಿದವನಿಗೆ ಈ ಗಾದೆ ಸೂಕ್ತ 8
7.ಇದೊಂದು ಕ್ಯಾಸೆಟ್ ಸಂಸ್ಥೆ 3
12.ಕುಮಾರತ್ರಯರ ಅಭಿನಯ ಇರುವ ಚಿತ್ರ 3
13.ಗೆಳೆತನದ ಜಗತ್ತು 4
14.ಮನೆ ಮಂದಿಯೆಲ್ಲ ಕುಳಿತು ನೋಡಬಹುದಾದ ಚಿತ್ರಕ್ಕೆ ಹೀಗೆನ್ನಿ 4
16.ರಾಜ ಚಿತ್ರದ ನಾಯಕಿ 2

ಮೈಸೂರು ಮಿತ್ರ ಶುಕ್ರವಾರ 20 ಜನವರಿ 2023

ಸುತ್ತೂರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟ 114 ಜೋಡಿಗಳು



ನಂಜನಗೂಡು,ಜ.19– ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಸಾಮೂಹಿಕ ವಿವಾಹದಲ್ಲಿ 114 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟವು.

ಸುತ್ತೂರಿನಲ್ಲಿ ನಡೆಯುತ್ತಿರುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಸಚಿವರು, ಶಾಸಕರು, ಹರಗುರು ಚರಮೂರ್ತಿಗಳು, ಪೋಷಕರು, ಬಂಧುಗಳು, ಮಿತ್ರರು ಹಾಗೂ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರ ಸಮ್ಮುಖದಲ್ಲಿ 9 ಅಂತರ್ಜಾತಿ, ಇಬ್ಬರು ಅಂತರ್ಧರ್ಮೀಯರು ಸೇರಿದಂತೆ ಒಟ್ಟು 114 ಜೋಡಿಗಳು ಬದುಕಿನ ಜೋಡಿಗಳಾದರು.

ವಿಶ್ವಕರ್ಮ, ವೀರಶೈವ ಲಿಂಗಾಯತ, ಗೆಜ್ಜಗಾರಶೆಟ್ಟಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಳೆಗಾರ ಶೆಟ್ಟಿ, ಒಕ್ಕಲಿಗ ವಧು ವರರು ಸತಿಪತಿಗಳಾದರು. ತಮಿಳುನಾಡಿನ 1 ಜೋಡಿ, 3 ಜೋಡಿ ವಿಶೇಷ ವ್ಯಕ್ತಿಗಳು ದಂಪತಿಗಳಾದರು. 3 ಜೋಡಿ ವಿಧುರ–ವಿಧವೆಯರು ವಿವಾಹವಾಗಿದ್ದು ವಿಶೇಷವಾಗಿತ್ತು. ಕಾರ್ಯಕ್ರಮ ಜಾತಿ, ಧರ್ಮದ ಎಲ್ಲೆ ಮೀರಿ ಸಾಮರಸ್ಯಕ್ಕೆ ಸಾಕ್ಷಿಯಾಯಿತು. ಉಳಿದಂತೆ, ವೀರಶೈವ ಲಿಂಗಾಯತ 5, ಹಿಂದುಳಿದ ವರ್ಗ 6, ಉಪ್ಪಾರ 3, ಪರಿಶಿಷ್ಟ ಜಾತಿ 85, ಪರಿಶಿಷ್ಟ ಪಂಗಡದ 6 ಜೋಡಿ ಮದುವೆಯಾದರು. ಇವರಲ್ಲಿ ಬಹುತೇಕರು ಮೈಸೂರು, ಚಾಮರಾಜನಗರ ಜಿಲ್ಲೆಯವರು. ಜೊತೆಗೆ, ಕೋಲಾರ, ಬೆಂಗಳೂರು, ತುಮಕೂರು ಮತ್ತು ಮಂಡ್ಯ ಜಿಲ್ಲೆಯ ವಧು–ವರರೂ ಇದ್ದರು. ಇದರೊಂದಿಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಈವರೆಗೆ 3,405 ಜೋಡಿಗಳು ವಿವಾಹವಾದಂತಾಗಿದೆ. ಎರಡು ದಶಕಗಳಿಂದಲೂ ಇಲ್ಲಿ ಸಾಮೂಹಿಕ ವಿವಾಹ ನಡೆಸಿಕೊಂಡು ಬರಲಾಗುತ್ತಿದ್ದು, ಬಡ ಹಾಗೂ ಮಧ್ಯಮ ವರ್ಗದವರ ನೆರವಿಗೆ ಶ್ರೀಮಠ ಬಂದಿದೆ. ವರನಿಗೆ ಪಂಚೆ, ಶರ್ಟ್ ಹಾಗೂ ವಲ್ಲಿ, ವಧುವಿಗೆ ಸೀರೆ, ರವಿಕೆ, ಮಾಂಗಲ್ಯ, ಕಾಲುಂಗುರವನ್ನು ನೀಡಲಾಯಿತು. ಶಾಸ್ತ್ರೋಕ್ತವಾಗಿ ವಿಧಿವಿಧಾನ ನೆರವೇರಿಸಲಾಯಿತು.

ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಳಗಾವಿ ಜಿಲ್ಲೆ ಹುಕ್ಕೇರಿಯ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬೆಂಗಳೂರಿನ ವಾಸವಿ ವಿದ್ಯಾಪೀಠದ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಸಚಿವರಾದ ಸಿ.ಸಿ.ಪಾಟೀಲ, ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಉದ್ಯಮಿ ಎಸ್.ಎಸ್.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಡಾ.ಬಿ.ಪ್ರಭುದೇವ, ಎಸ್ಪಿ ಸೀಮಾ ಲಾಟ್ಕರ್, ಅಮೆರಿಕದ ಉದ್ಯಮಿ ಭಾರತಿ ರೆಡ್ಡಿ, ಕೊಯಮತ್ತೂರಿನ ಕೈಗಾರಿಕೋದ್ಯಮಿ ತಿರುಮಲೈ ತಂಬು, ಜೆ.ಕೆ.ಟೈರ್ಸ್‌ನ ಉಪಾಧ್ಯಕ್ಷ ವುಪ್ಪು ಈಶ್ವರರಾವ್ ನೂತನ ದಂಪತಿಗಳನ್ನು ಹರಸಿದರು. ವಿದ್ವಾನ್ ಮಲ್ಲಣ್ಣ ವಿಧಿವಿಧಾನಗಳನ್ನು ನೆರವೇರಿಸಿದರು. ಇದಕ್ಕೂ ಮುನ್ನ ವಧು–ವರರನ್ನು ಶಿವರಾತ್ರೀಶ್ವರ ಶಿವಯೋಗಿಗಳ ಗದ್ದುಗೆಯಿಂದ ಮೆರವಣಿಗೆಯಲ್ಲಿ ಕರೆತರಲಾಯಿತು.

ನದಿಯಲ್ಲಿ ಈಜಲು ಹೋದ ವಿದ್ಯಾರ್ಥಿ ಸಾವು

ಚುಂಚನಕಟ್ಟೆ, ಜ.19– ಸ್ನೇಹಿತರೊಂದಿಗೆ ವಿಹಾರಕ್ಕೆ ಬಂದಿದ್ದ ವಿದ್ಯಾರ್ಥಿಯೊಬ್ಬ ಕಾವೇರಿ ನದಿಯಲ್ಲಿ ಈಜಲು ಹೋಗಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ಗುರುವಾರ ನಡೆದಿದೆ.



ಮೈಸೂರಿನ ಶಾರದಾ ವಿಲಾಸ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿ ಹಾಗೂ ಸಾಲಿಗ್ರಾಮ ತಾಲೂಕಿನ ಕಗ್ಗಳ ಗ್ರಾಮದ ಮಹೇಶ್ ಎಂಬುವರ ಪುತ್ರ ಸುದೀಪ್(20) ಸಾವನ್ನಪ್ಪಿದವರು. ತನ್ನ ಸ್ನೇಹಿತರೊಂದಿಗೆ ಚುಂಚನಕಟ್ಟೆಗೆ ಆಗಮಿಸಿದ್ದ ಈತ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಕಾವೇರಿ ನದಿ ಬಳಿ ತೆರಳಿ ಅಪಾಯದ ಮುನ್ಸೂಚನೆ ಅರಿಯದೆ ಈಜಲು ನದಿಗೆ ಧುಮುಕಿದ್ದಾನೆ. ಆದರೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಚುಂಚನಕಟ್ಟೆ ಉಪ ಪೊಲೀಸ್ ಠಾಣೆಯ ಪೇದೆ ಪ್ರವೀಣ್ ಸ್ಥಳೀಯ ಮೀನುಗಾರರ ಸಹಾಯದಿಂದ ಸಂಜೆ ವೇಳೆಗೆ ಶವವನ್ನು ನದಿಯಿಂದ ಹೊರತೆಗೆದು, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಸಾಲಿಗ್ರಾಮ ಠಾಣೆಯಲ್ಲಿ ದೂರು ದಾಖಲಾಗಿದೆ.

ದೊಡ್ಡಕವಲಂದೆಯಲ್ಲಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ



ಮೈಸೂರು,ಜ.19(ಪಿಎಂ)–ನಂಜನಗೂಡು ತಾಲೂಕು ದೊಡ್ಡಕವಲಂದೆ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ದೊಡ್ಡ ಕವಲಂದೆ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಗುರುವಾರ ನಡೆಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಜಾರಿಗೊಳಿಸಿರುವ ಕಲಿಕಾ ಹಬ್ಬ ಕಾರ್ಯಕ್ರಮದಡಿ ಶಾಲಾ ಮಕ್ಕಳು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಿದರು. ಇದೇ ವೇಳೆ ಮಾತನಾಡಿದ ಶಿಕ್ಷಣ ಸಂಯೋಜಕ ಸಿದ್ದರಾಜು, ಮಕ್ಕಳಲ್ಲಿ ಸುಪ್ತವಾಗಿರುವ ಪ್ರತಿಭೆ ಅನಾವರಣಕ್ಕೆ ಕಲಿಕಾ ಹಬ್ಬ ವಿಶಿಷ್ಟ ಕಾರ್ಯಕ್ರಮ. 2022–23ನೇ ಸಾಲಿನಲ್ಲಿ ಮಕ್ಕಳ ಪ್ರತಿಭೆ ಗುರುತಿಸಲು ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೆ ತಂದಿದ್ದು, ಅದರಲ್ಲಿ ಕಲಿಕಾ ಹಬ್ಬವೂ ಒಂದು ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿ ನಶಿಸಿ ಹೋಗುತ್ತಿರುವ ಜಾನಪದ ಕಲೆಯೂ ಒಳಗೊಂಡಂತೆ ರಂಗೋಲಿ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ ಸೇರಿದಂತೆ ಮೊದಲಾದ ಸ್ಪರ್ಧೆಗಳ ಮೂಲಕ ಮಕ್ಕಳಲ್ಲಿ ಕೌಶಲ್ಯ ಬೆಳೆಸುವುದಕ್ಕೆ ಈ ಕಾರ್ಯಕ್ರಮ ಸೂಕ್ತ ವೇದಿಕೆ ಕಲ್ಪಿಸಲಿದೆ ಎಂದರು. ಕೌಲಂದೆ ಗ್ರಾಪಂ ಅಧ್ಯಕ್ಷ ಶಂಕರ್ ನಾಯಕ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಎಸ್‌ಡಿಎಂಸಿ ಅಧ್ಯಕ್ಷ ನಜೀಬ್, ಗ್ರಾಪಂ ಸದಸ್ಯ ನಸ್ರಿಲ್ಲಾಖಾನ್, ಶಿಕ್ಷಕ ಶಿವಯ್ಯ, ಪ್ರಾಧ್ಯಾಪಕ ಯೋಗೇಶ್, ಮುಖಂಡರಾದ ರವಿಕುಮಾರ್, ಅರ್ಚನಾ, ಕೆಂಪರಾಜು, ಮಧುಶ್ರೀ ಹಾಗೂ ಕ್ಲಸ್ಟರ್‌ನ ಶಿಕ್ಷಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪಡಿತರ ಉಪಕೇಂದ್ರ ಉದ್ಘಾಟನೆ

ಹನಗೋಡು, ಜ.19– ಇಲ್ಲಿನ ವಡ್ಡಂಬಾಳು ಗ್ರಾಮದಲ್ಲಿ ಪಡಿತರ ಉಪ ಕೇಂದ್ರವನ್ನು ಶಾಸಕ ಹೆಚ್.ಪಿ.ಮಂಜುನಾಥ್ ಗುರುವಾರ ಉದ್ಘಾಟಿಸಿದರು. ನಂತರ ಮಾತನಾಡಿದ



ಅವರು, ವಡ್ಡಂಬಾಳು ಜನತೆಯ ಬಹುದಿನದ ಬೇಡಿಕೆಯಂತೆ ಪಡಿತರ ವಿತರಣಾ ಕೇಂದ್ರ ತೆರೆದಿದ್ದು, ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲಿ ಬಡ ಜನರ ಹಸಿವು ನೀಗಿಸಲು ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಿದ್ದು, ಕೊರೊನಾ ವೇಳೆ ಇಡೀ ರಾಜ್ಯದ ಜನತೆಯನ್ನು ಅನ್ನಭಾಗ್ಯ ಯೋಜನೆ ಕಾಪಾಡಿದೆ. ಇಂತಹ ಯೋಜನೆ ದುರುಪಯೋಗಪಡಿಸಿಕೊಳ್ಳದೆ ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು. ಹೆಗ್ಗಂದೂರು ಗ್ರಾಪಂ ಮಾಜಿ ಉಪಾಧ್ಯಕ್ಷ ರವಿನಾಯಕ ಮಾತನಾಡಿ, ಪಡಿತರಕ್ಕಾಗಿ ಗ್ರಾಮದ ಕೂಲಿ ಕಾರ್ಮಿಕರು ಹೆಗ್ಗಂದೂರಿನ ಸೊಸೈಟಿಗೆ ಹೋಗಿ ಕಾಯುತ್ತಿದ್ದೆವು. ಅಲ್ಲದೆ ಸರ್ವರ್ ಸಮಸ್ಯೆಯಿಂದ ಪಡಿತರ ಪಡೆಯಲು ವಿಳಂಬವಾಗುತ್ತಿತ್ತು. ಶಾಸಕ ಮಂಜುನಾಥ್ ಅವರ ಪರಿಶ್ರಮದಿಂದ ನಮ್ಮ ಗ್ರಾಮದಲ್ಲೇ ನ್ಯಾಯ ಬೆಲೆ ಅಂಗಡಿ ತೆರೆದಿರುವುದು ಸಂತಸ ತಂದಿದೆ ಎಂದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ರೇಣುಕಮ್ಮ, ಪಿಎಸಿಎಸ್ ಅಧ್ಯಕ್ಷ ತಿಮ್ಮೇಗೌಡ, ಯ.ಪ್ರೇಮ್‌ಕುಮಾರ್, ನವೀನ್ ಕುಮಾರ್, ಯುವ ಮುಖಂಡ ಚಂದ್ರಕಾಂತ್ ಸೇರಿದಂತೆ ಗ್ರಾಮಸ್ಥರಿದ್ದರು.

ಪೂರ್ವಜರಿಂದ ಧರ್ಮ, ಸಂಸ್ಕೃತಿ, ಸಂಸ್ಕಾರ ರಕ್ಷಣೆ

ನಂಜನಗೂಡು, ಜ.19– ಪರಕೀಯರ ಆಳ್ವಿಕೆ ಕಾಲದಲ್ಲಿ ಮಠಮಾನ್ಯ, ಶ್ರದ್ಧಾಭಕ್ತಿ ಕೇಂದ್ರಗಳನ್ನು ಭಗ್ನಗೊಳಿಸುವ ಪ್ರಯತ್ನ ನಡೆದ ವೇಳೆ ನಮ್ಮ ಪೂರ್ವಜರು ಸನಾತನ ಧರ್ಮ, ಸಂಸ್ಕೃತಿ, ಸಂಸ್ಕಾರ ರಕ್ಷಿಸಿದ್ದಾರೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾ ಮೇಳ, ಹಾಗೂ ಕಟ್ಟಡಗಳ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಕೀಯರ ಆಳ್ವಿಕೆ ಕಾಲದಲ್ಲಿ ನಮ್ಮ ಸಂಸ್ಕೃತಿ, ನಮ್ಮತನ ಅರಿವಾಗದಂತಹ ಸ್ಥಿತಿ ತಲುಪಿದ್ದೆವು. ಕತ್ತಿಯಿಂದ ನಮ್ಮ ಪೂರ್ವಜರನ್ನು ಮತಾಂತರಗೊಳಿಸಲು ಪ್ರಯತ್ನಿಸಿ ವಿಫಲರಾದಾಗ ಅವರನ್ನು ಕೊಲೆಗೈದಾದರೂ ತಮ್ಮ ಸ್ವಾರ್ಥ ಸಾಧಿಸುವಂತಹ ಕಷ್ಟದ ಪರಿಸ್ಥಿತಿಯಲ್ಲೂ ನಮ್ಮ ಪೂರ್ವಜರು ಸನಾತನ ಧರ್ಮ, ಹಿಂದೂ ಧರ್ಮದ ಜ್ಞಾನ ಸಂಪತ್ತಿನ ಫಲ ನಮ್ಮ ಮುಂದಿನ ಪೀಳಿಗೆಗೂ ಸಿಗಬೇಕು ಎಂದು ಸಂರಕ್ಷಿಸಿರುವುದಕ್ಕೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಈಗ ನಮ್ಮತನದ ಅರಿವು ನಮಗೆ ಆಗುವಂತಹ ಕಾಲ ಕೂಡಿ ಬಂದಿದೆ. ಪ್ರಧಾನಿ ಮೋದಿ ಅಯೋಧ್ಯೆ, ಉಜ್ಜೈನಿ ಪುನರ್ ನಿರ್ಮಾಣ, ಕಾಶಿ ಕಾರಿ ಡಾರ್ ನಿರ್ಮಾಣದ ಮೂಲಕ ಜಗತ್ತಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಭಜನೆ ಭಕ್ತಿ ಮಾರ್ಗದಲ್ಲಿ ಒಂದು ದೊಡ್ಡ ಹೆಜ್ಜೆ. ನಾವು ಭಕ್ತಿ ಮಾರ್ಗದ ಮೂಲಕ ನಮ್ಮ ಜೀವನ ಸಾರ್ಥಕ ಗೊಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸುತ್ತೂರು ಜಾತ್ರೆ ಬರೀ ಮನರಂಜನೆಗೆ ಮಾತ್ರ ಸೀಮಿತಗೊಂಡಿಲ್ಲ. ನಮ್ಮ ಧಾರ್ಮಿಕತೆ, ಸಂಸ್ಕೃತಿ ಅರಿವು ಮೂಡಿಸುವ ಮೂಲಕ ನಮ್ಮ ಮುಂದಿನ ಪೀಳಿಗೆಗೂ ಹಸ್ತಾಂತರಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ಮಾತನಾಡಿ, ವೀರಶೈವ ಮಠಗಳು ಕರ್ಮ ಸಿದ್ಧಾಂತವೇ ಧರ್ಮ ಸಿದ್ಧಾಂತದ ಮೂಲ ಎಂದು ಕಾಯಕ ತತ್ವಗಳಲ್ಲಿ ನಂಬಿಕೆ ಇಟ್ಟು ದಾಸೋಹ ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಕೆಲಸ ಮಾಡಿವೆ. ವೀರಶೈವ ಪರಂಪರೆ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಮರೆಯುವಂತಿಲ್ಲ ಎಂದ ಅವರು, ಜೆಎಸ್‌ಎಸ್ ಮಠ ಪೀಠಾಧೀಶರಾದ ಶಿವರಾತ್ರಿ ರಾಜೇಂದ್ರ ಶ್ರೀಗಳು ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ, ವಸತಿ ಜೊತೆಗೆ ಊಟದ ಸೌಲಭ್ಯ ಕೊಡುವ ವಿದ್ಯಾರ್ಥಿನಿಲಯ ಪ್ರಾರಂಭಿಸಿದರು. ಊಟಕ್ಕೆ ಕಷ್ಟವಾದಾಗ ಕೊರಳಲಿದ್ದ ಚಿನ್ನದ ಕರಡಿಗೆ ಮಾರಿ ಬಡಮಕ್ಕಳಿಗೆ ವಿದ್ಯಾದಾನ ನೀಡಿದ ಶ್ರೇಷ್ಠ ಮಠವಾಗಿದೆ ಎಂದ ಅವರು, ಹುಟ್ಟು ಶ್ರೇಷ್ಠವಲ್ಲ ಬದುಕು ಶ್ರೇಷ್ಠವಾಗಬೇಕು. ಅದಕ್ಕಾಗಿ ಎಲ್ಲರೂ ಆಚಾರವಂತರಾಗಬೇಕು ಎಂದರು.

ಶಾಸಕ ಅರವಿಂದ ಬೆಲ್ಲದ್ ಮಾತನಾಡಿ, ಮಠಮಾನ್ಯಗಳ ಮೂಲಕ ಸಮಾಜದ ತತ್ವ ಜಗತ್ತಿನಾದ್ಯಂತ ಪ್ರಸಾರ ವಾಗುತ್ತಿದೆ. ಜೆಎಸ್‌ಎಸ್ ಮಠ ಶಿಸ್ತಿಗೆ ಹೆಸರುವಾಸಿಯಾಗಿ ಜಗತ್ತಿನಾದ್ಯಂತ ಪ್ರಸಿದ್ಧಿ ಪಡೆದಿದೆ ಎಂದರು. ಕಾರ್ಯಕ್ರಮದಲ್ಲಿ ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಅಲ್ಲಮಪ್ರಭುಸ್ವಾಮೀಜಿ ಶುಭ ಸಂದೇಶ ನೀಡಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಸೊಗಡು ಶಿವಣ್ಣ, ಶಿವಕುಮಾರ ಸ್ವಾಮಿ, ಮಹೇಂದ್ರಮೂರ್ತಿ, ಕೆ.ಸಿ.ಜಾನಿ ಉಪಸ್ಥಿತರಿದ್ದರು.

ಸರ್ಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡಿರುವ

41 ನಿವೇಶನದಾರರಿಗೆ ವಾರದೊಳಗೆ ಹಕ್ಕುಪತ್ರ

ಚೌಕಹಳ್ಳಿ ಗ್ರಾಮಸ್ಥರಿಗೆ ಶಾಸಕ ಸಾ.ರಾ.ಮಹೇಶ್ ಭರವಸೆ



ಕೆ.ಆರ್.ನಗರ, ಜ.19– ಹಿಡುವಳಿ ಭೂಮಿ ಹೊರತುಪಡಿಸಿ ಸರ್ಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡಿರುವ 41 ನಿವೇಶನದಾರರಿಗೆ ವಾರದೊಳಗೆ ಹಕ್ಕುಪತ್ರ ಅಥವಾ 9/11 ಮಾಡಿಸಿಕೊಡುವುದಾಗಿ ಶಾಸಕ ಸಾ.ರಾ.ಮಹೇಶ್ ಚೌಕಹಳ್ಳಿ ಗ್ರಾಮಸ್ಥರಿಗೆ ಭರವಸೆ ನೀಡಿದರು.

ಪಟ್ಟಣ ಸಮೀಪದ ಚೌಕಹಳ್ಳಿ ಗ್ರಾಮದ ಮಾರಮ್ಮ ದೇವಸ್ಥಾನದ ಆವರಣದಲ್ಲಿ ನಡೆದ ಸಭೆಯಲ್ಲಿ ಕಂದಾಯ ಅಧಿಕಾರಿಗಳು ಹಾಗೂ ಗ್ರಾಮಸ್ಥರ ಸಮಕ್ಷಮದಲ್ಲಿ ಚರ್ಚಿಸಿ ಮಾತನಾಡಿದ ಶಾಸಕರು, ಸುಮಾರು ವರ್ಷಗಳ ಹಿಂದೆ ಗ್ರಾಮ ಸ್ಥಳಾಂತರಿಸುವ ವೇಳೆ ಮನೆ ಕಳೆದುಕೊಂಡವರು ಈ ಗ್ರಾಮಕ್ಕೆ ಬಂದು ನೆಲೆಸಿದ್ದಾರೆ ಎಂದರು.

ಚೌಕಹಳ್ಳಿ ಗ್ರಾಮಕ್ಕೆ ವಲಸೆ ಬಂದು 25–30 ವರ್ಷಗಳಿಂದ ಮನೆ ನಿರ್ಮಿಸಿಕೊಂಡಿದ್ದ 40 ಮಂದಿ ಹೊರತುಪಡಿಸಿ, ಉಳಿದ ನಿಮಗೆ ಭೂಮಿ ದಾನವಾಗಿ ನೀಡಿದವರಿಂದ ಭೂಮಿ ಕ್ರಯ ಅಥವಾ ಯಾವುದೇ ದಾಖಲೆ ಇಲ್ಲದಿರುವುದರಿಂದ ಈ ಭೂಮಿ ಖಾಸಗಿ ವ್ಯಕ್ತಿ ಹೆಸರಿನಲ್ಲಿದ್ದು, ಈ ಬಗ್ಗೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೂ 41 ಜನ ನಿವೇಶನದಾರರು ಕಾಯಬೇಕಾಗುತ್ತದೆ ಎಂದರು.

ಗ್ರಾಪಂನಲ್ಲಿ ನಿವೇಶನದ ಕಂದಾಯ, ನೀರಿನ ಕರ, ವಿದ್ಯುತ್ ಬಿಲ್ ಸೇರಿದಂತೆ ಇನ್ನಿತರ ಕರಗಳನ್ನು ಪಂಚಾಯಿತಿಗೆ ನೀಡಿದ್ದರೂ ಕೊನೆಯದಾಗಿ ಕಂದಾಯ ಇಲಾಖೆ ನೋಂದಣಿಯಲ್ಲಿರುವುದೇ ಅಂತಿಮ. ಆದ್ದರಿಂದ ನಿಮ್ಮ ಬಗ್ಗೆ ತಹಸೀಲ್ದಾರ್ ಎಸ್. ಸಂತೋಷ್ ನೇತೃತ್ವದಲ್ಲಿ ನಿವೇಶನದ ಅಳತೆ ಮತ್ತು ದೃಢೀಕರಣ ಎಲ್ಲವನ್ನೂ ನೋಂದಾಯಿಸಿದ್ದು ಉಪವಿಭಾಗಾಧಿಕಾರಿಗಳ ಕಚೇರಿಯಿಂದ ಜಿಲ್ಲಾಧಿಕಾರಿ ಕಚೇರಿಯವರೆಗೂ ನಿವೇಶನ ನಿಮ್ಮದೇ ಎಂಬ ದಾಖಲೆ ಇದೆ. ಆದರೆ ಭೂಮಿ ಖಾತೆಯಲ್ಲಿ ಬೇರೆಯೊಬ್ಬನ ಹೆಸರು ಇರುವುದರಿಂದ ಹಕ್ಕುಪತ್ರ 9/11 ನೀಡುವಲ್ಲಿ ಕಾನೂನಿನ ತೊಡಕಿದೆ ಎಂದರು.

ಯಾರೂ ಭಯಪಡುವ ಅಗತ್ಯವಿಲ್ಲ. ಕೊಟ್ಟ ಮಾತಿನಂತೆ ನಡೆಯುತ್ತೇನೆ. ಒಟ್ಟು 17 ಎಕರೆ ಭೂಮಿ ಚೌಕಹಳ್ಳಿ ಗ್ರಾಮಕ್ಕೆ ಸೇರಿದ್ದು, ಇದರಲ್ಲಿ 6 ಎಕರೆ ಸರ್ಕಾರಿ ಭೂಮಿ. ಉಳಿದ 11 ಎಕರೆ ಖಾಸಗಿ ವ್ಯಕ್ತಿಯ ಹೆಸರಿನಲ್ಲಿದೆ. ಎಲ್ಲವನ್ನು ಸರಿಪಡಿಸಿ ಕೆಲವು ದಿನಗಳಲ್ಲಿಯೇ ನಿವೇಶನ ನೀಡಲಾಗುವುದು ಎಂದರು.

ಕೆಲವು ಕಿಡಿಗೇಡಿಗಳು ಸುಳ್ಳು ಹಾಗೂ ಅಪಪ್ರಚಾರ ಮಾಡುತ್ತಿರುವುದು ಮತ್ತು ಈ ಭೂಮಿ ಬಗ್ಗೆ ನಕಲಿ ದಾಖಲೆ ಸೃಷ್ಟಿಸುವ ವ್ಯಕ್ತಿಗಳಿಂದ ದೂರ ಇರಿ ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ದೊಡ್ಡಕೊಪ್ಪಲು ಗ್ರಾಪಂ ಅಧ್ಯಕ್ಷ ನಂಜುಂಡ, ಸದಸ್ಯರಾದ ಡಿ.ಕೃಷ್ಣ, ಎ.ಎಸ್.ಯೋಗಿಶ್, ಶೇಖರ್, ಬಾಲಾಜಿ ಗಣೇಶ್, ಎಸಿ ರುಚಿ, ತಹಸೀಲ್ದಾರ್ ಎಸ್. ಸಂತೋಷ್, ತಾಲೂಕು ಭೂಮಾಪನ ಸಹಾಯಕ ನಿರ್ದೇಶಕ ಮಂಜುನಾಥ್, ಇಓ ಹೆಚ್.ಕೆ.ಸತೀಶ್, ಪೊಲೀಸ್ ಇನ್ಸ್‌ಪೆಕ್ಟರ್ ಎಂ.ಆರ್.ಲವ, ಮುಖಂಡರಾದ ಚನ್ನಬಸಪ್ಪ, ರುದ್ರೇಶ್, ಡಿ.ಎಸ್.ಕಾಂತರಾಜು, ಮಧುಚಂದ್ರ, ಕರೀಗೌಡ, ನಾಗರಾಜು, ಕಂದಾಯ ಇತರರಿದ್ದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಕೈ ಹಿಡಿಯುವುದು ಖಚಿತ



ತಿ.ನರಸೀಪುರ, ಜ.19– ಹಾಲಿ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡರು ಕಾಂಗ್ರೆಸ್‌ಗೆ ಸೇರ್ಪಡೆಯಾಗುವುದು ಖಚಿತವಾಗಿದ್ದು, ಬನ್ನೂರಿನ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕರ್ತರು, ಅಭಿಮಾನಿಗಳು, ತಾಪಂ, ಜಿಪಂ ಸದಸ್ಯರ ಸಭೆಯಲ್ಲಿ ಬಹುತೇಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವಂತೆ ಸಲಹೆ ನೀಡಿದರು.

ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಮುಂದಿನ ರಾಜಕೀಯ ನಿರ್ಧಾರ ಕೈಗೊಳ್ಳಲು ಕರೆದಿದ್ದ ಸಭೆಯಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಕಾಂಗ್ರೆಸ್‌ನಲ್ಲಿ ಮಾತ್ರ ರಾಜಕೀಯ ನೆಲೆ ಕಂಡುಕೊಳ್ಳಲು ಸಾಧ್ಯ ಹೀಗಾಗಿ ಆ ಪಕ್ಷದೊಂದಿಗೆ ಗುರುತಿಸಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಹಲವು ಮುಖಂಡರು, ಇಲ್ಲಿ ಪಕ್ಷಕ್ಕಿಂತ ವ್ಯಕ್ತಿಗೆ ಮನ್ನಣೆ ನೀಡಬೇಕು. ಹಾಗಾಗಿ ಅಭ್ಯರ್ಥಿಗೆ ಆದ್ಯತೆ ನೀಡಬೇಕಾಗಿರುವುದರಿಂದ ಸುನೀತಮ್ಮನವರು ಯಾವ ಪಕ್ಷಕ್ಕೆ ಹೋದರೂ ನಾವೆಲ್ಲ ಅವರನ್ನು ಹಿಂಬಾಲಿಸೋಣ ಎಂದು ನೆರೆದಿದ್ದ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಕ್ಷೇತ್ರದಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದೆ ಯಾರಿಂದಲೂ ಮಾಡಲು ಸಾಧ್ಯವಿಲ್ಲ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವುದರಿಂದ ಕ್ಷೇತ್ರದ ಅಭಿವೃದ್ಧಿಗಾಗಿ ಆ ಪಕ್ಷವನ್ನೇ ಬೆಂಬಲಿಸಬೇಕೆಂದು ಕೆಲ ಅಭಿಮಾನಿಗಳು ಒತ್ತಾಯಿಸಿದರು. ನೀವು ಕೂಡ ಕಾಂಗ್ರೆಸ್‌ನಲ್ಲಿ 19 ವರ್ಷ ಸೇವೆ ಸಲ್ಲಿಸಿದ್ದೀರಿ. ಹಾಗಾಗಿ ಮೂಲ ಪಕ್ಷ ಸೇರುವುದು ಸರಿಯಾಗಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ಕೇಳಿ ಬಂತು.

ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಮಾತನಾಡಿ, ಸುನೀತಮ್ಮನವರು ತಮ್ಮ ರಾಜಕೀಯ ಜೀವನದಲ್ಲಿ ವಿವಿಧ ಪಕ್ಷಗಳಿಂದ ತಮಗಾಗಿರುವ ಅನ್ಯಾಯ ತಿಳಿಸಿದ್ದಾರೆ. ಹಾಗಾಗಿ ಅವರು ಯಾವುದೇ ಪಕ್ಷದಲ್ಲಿ ಗುರುತಿಸಿಕೊಂಡರೂ ನಾವೆಲ್ಲರೂ ಅವರಿಗೆ ಬೆಂಬಲ ವ್ಯಕ್ತಪಡಿಸಿ, ಅವರ ರಾಜಕೀಯ ಅಸ್ತಿತ್ವ ಉಳಿಸಲು ಮುಂದಾಗಬೇಕಿದೆ ಎಂದರು.

ಮುಖಂಡ ಪ್ರೊ.ಜ್ಞಾನಪ್ರಕಾಶ್ ಮಾತನಾಡಿ, ಜೆಡಿಎಸ್‌ನಲ್ಲಿ ನಾನೂ ಸಹ 30 ವರ್ಷ ಸೇವೆ ಸಲ್ಲಿಸಿದ್ದೇನೆ. ಎಂಪಿ ಚುನಾವಣೆಯಲ್ಲಿ ಶ್ರೀನಿವಾಸಪ್ರಸಾದ್ ಅವರನ್ನು 1800 ಮತಗಳಿಂದ ಗೆಲ್ಲಿಸಿದ್ದೇವೆ. ಹಾಗಿದ್ದರೂ ಈ ಎರಡೂ ಪಕ್ಷಗಳಿಂದ ಕಾರ್ಯಕರ್ತರಿಗೆ ಅನ್ಯಾಯವಾಗಿದೆ. ಕಾರ್ಯಕರ್ತರು ತಬ್ಬಲಿಗಳಾಗಿದ್ದಾರೆ. ಹಾಗಾಗಿ ಸುನೀತಮ್ಮನವರು ಚುನಾವಣಾ ಸಂದರ್ಭ ಜಾಣ್ಮೆ ನಡೆ ಪ್ರದರ್ಶಿಸಬೇಕು ಎಂದರು.

ಅಶ್ವಿನ್‌ಕುಮಾರ್‌ಗೆ ಕೃತಜ್ಞತೆ ಇಲ್ಲ

ತಿ.ನರಸೀಪುರ: ಶಾಸಕ ಅಶ್ವಿನ್‌ಕುಮಾರ್‌ಗೆ ಕೃತಜ್ಞತೆ ಇಲ್ಲ ಎಂದು ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಕಿಡಿಕಾರಿದರು.

ರಾಜಕೀಯದಲ್ಲಿ ನೆಲೆಯೇ ಇಲ್ಲದ ಅವರಿಗೆ ಜಿಪಂನಲ್ಲಿ ಟಿಕೆಟ್ ಕೊಡಿಸಿ ಗೆಲ್ಲಿಸಿದೆ. ಆದರೆ ಆತ ಈವರೆಗೂ ನನ್ನನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸುವ ಕೆಲಸ ಮಾಡಿಲ್ಲ. ಒಮ್ಮೆಯೂ ಭೇಟಿ ಮಾಡಿಲ್ಲ. ಆತ ನಂಬಿಕೆಗೆ ಅನರ್ಹ ವ್ಯಕ್ತಿ ಎಂದರು.

ನಾನು ಮೂಲತಃ ಕಾಂಗ್ರೆಸ್ ಕಾರ್ಯಕರ್ತೆಯಾಗಿದ್ದು, 19 ವರ್ಷ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದೆ. ಬನ್ನೂರು ಭಾಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರೇ ಇಲ್ಲದ ವೇಳೆ ಕಾರ್ಯಕರ್ತರ ಪಡೆ ಕಟ್ಟಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡೆ. ಆದರೆ ಪಕ್ಷ ನನ್ನನ್ನು ಕಡೆಗಣಿಸಿ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಅನ್ನು ಚಿಕ್ಕಮಾದನಾಯಕರಿಗೆ ನೀಡುವ ಮೂಲಕ ನನಗೆ ನಿರಾಸೆ ಮಾಡಿತು. ಹಾಗಾಗಿ ನಾನು ಶಾಸಕಿಯಾಗಲೇಬೇಕೆಂಬ ಪಣತೊಟ್ಟು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ಶಾಸಕಿಯಾದೆ. ಕ್ಷೇತ್ರ ಪುನರ್ ವಿಂಗಡಣೆಯಾಗಿ ಮೀಸಲು ಕ್ಷೇತ್ರವಾದ್ದರಿಂದ ನನ್ನ ಸ್ಪರ್ಧೆ ಸಾಧ್ಯವಾಗಲಿಲ್ಲ. ಬಿಜೆಪಿಯಿಂದ ಎಸ್.ಶಂಕರ್ ಸ್ಪರ್ಧಿಸಿ ಚುನಾವಣೆ ಗೆಲ್ಲುವ ಅವಕಾಶವಿತ್ತು. ಆದರೆ ಶಂಕರ್ ಚುನಾವಣೆ 3 ದಿನ ಇರುವಂತೆ ನಾಪತ್ತೆಯಾದರು. ಅದಾದ ಮೇಲೆ ಬಿಜೆಪಿ ಯಾವುದೇ ಕಾರ್ಯಕ್ರಮಕ್ಕಾಗಲೀ ಮತ್ತು ಪಕ್ಷ ಸಂಘಟನೆಗಾಗಲೀ ಬಿಜೆಪಿಯವರು ನನ್ನನ್ನು ಕರೆಯಲೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು ಎಂದರು.

ಫೆ.7, 8ರಂದು ಶ್ರೀ ವಾಲ್ಮೀಕಿ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ, ಜ.19– ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ರಾಜನಹಳ್ಳಿ ಗುರುಪೀಠದಲ್ಲಿ ಫೆ.7, 8ರಂದು ಶ್ರೀ ವಾಲ್ಮೀಕಿ ಜಾತ್ರಾ ಮಹೋತ್ಸವ ನಡೆಯಲಿದ್ದು, ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ನಾಯಕ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ತಾಲೂಕು ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜ್ ತಿಳಿಸಿದರು. ತಾಲೂಕು ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸನ್ನಾನಂದಪುರಿ ಸ್ವಾಮೀಜಿ ವಾಲ್ಮೀಕಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುವಂತೆ ಕೋಟೆ, ಸರಗೂರಿಗೆ ಆಗಮಿಸಿ ಎಲ್ಲರನ್ನೂ ಆಹ್ವಾನಿಸಿದ್ದಾರೆ. ಆದ್ದರಿಂದ ತಾಲೂಕಿನ ಎಲ್ಲಾ ನಾಯಕ ಸಮುದಾಯದ ಬಂಧುಗಳು ಹಾಗೂ ಇತರೆ ಸಮುದಾಯದವರು ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ರಾಜನಾಯಕ, ಶಂಭುಲಿಂಗ ನಾಯಕ, ಪುಟ್ಟಬಸವನಾಯಕ, ಚೆಲುವ, ಕೃಷ್ಣನಾಯಕ, ಬಿ.ಪಿ.ಸಿದ್ದನಾಯಕ, ಜವರನಾಯ್ಕ, ಭೈರನಾಯಕ, ಕೃಷ್ಣನಾಯಕ, ಬೆಟ್ಟನಾಯಕ ಇನ್ನಿತರರಿದ್ದರು.

ಇಂದು ಜೆಡಿಎಸ್ ಕಾರ್ಯಕರ್ತರ ಸಭೆ

ಬೆಟ್ಟದಪುರ,ಜ.19–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಜ.20ರಂದು ಬೆಳಗ್ಗೆ 11ಕ್ಕೆ ಬೆಟ್ಟದಪುರ ಗ್ರಾಪಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆ ಶಾಸಕ ಕೆ.ಮಹದೇವ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಜೆಡಿಎಸ್ ಮುಖಂಡ ಗಗನ್ ತಿಳಿಸಿದ್ದಾರೆ.

ಚಿರತೆ ದಾಳಿ: ಮೇಕೆ ಬಲಿ

ಮಲ್ಕುಂಡಿ,ಜ.19–ಚಿರತೆ ದಾಳಿಗೆ ಮೇಕೆ ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಹಾಡ್ಯ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಚನ್ನನಾಯಕ ಎಂಬುವರ ಮೇಕೆ ಬಲಿಯಾಗಿರುವುದು. ಎಂದಿನಂತೆ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಮೇಕೆ ಮೇಲೆ ಬುಧವಾರ ರಾತ್ರಿ ದಾಳಿ ಮಾಡಿರುವ ಚಿರತೆ ಅರೆಬರೆ ತಿಂದು ಪರಾರಿಯಾಗಿದೆ. ಘಟನೆಯಿಂದ ಗ್ರಾಮಸ್ಥರು ಭಯಭೀತರಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಚಿರತೆ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮೋಹನ್‌ರಾವ್ ಜಾಧವ್ ನಿಧನ



ಗಾವಡಗೆರೆ, ಜ.19– ಮೋಹನ್‌ರಾವ್ ಜಾಧವ್ (67) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಣಸೂರು ತೂಗುಸೇತುವೆ ನದಿ ತೀರದ ಬಳಿ ಶುಕ್ರವಾರ ಬೆಳಗ್ಗೆ 11.30ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ಸ್ವಾಭಿಮಾನಿ ಪಡೆ ಪ್ರಮುಖರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ **ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು** ಹಾಗೂ ರಾಜ್ಯದ ನಾಯಕರು ಹಾಗೂ ಸ್ಥಳೀಯ ನಾಯಕರು, ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.